ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 30

ಜುಲೈ 27.2008

ಕನ್ನಡ ವಾರಪತ್ರಿಕೆ

ರೂ. 5/-

www.janashakthi.org

ಬಜೆಟ್ :



ಭರವಸೆಗಳ ಮಹಾಪೂರ ಜನರ ವಂಚಿಸಿದ ಸರ್ಕಾರ

ಅಣು ಒಪ್ಪಂದ :



ಜನಪ್ರತಿನಿಧಿಗಳ ನಿರ್ಧಾರವೆಂತು?

ಬಾಬಾಬುಡನ್ ಗಿರಿ :




ಮೇಲ್ಛಾವಣಿ ಕುಸಿತ ಎಚ್ಚರ ಅಗತ್ಯ



ಅಂಗನವಾಡಿ ಅಕ್ಕಂದಿರ ಯಶಸ್ವಿ ಹೋರಾಟ

ಜನಶಕ್ತಿ ಕನ್ನಡ ವಾರಪತ್ರಿಕೆ



ಭಾರತೀಯ ಶ್ರಮಜೀವಿಗಳು ಈಗ ಒಂದು ವರ್ಗಪ್ರಜ್ಞೆಯ ಮತ್ತು ರಾಜಕೀಯವಾದ ಸಾಮೂಹಿಕ ಹೋರಾಟ ನಡೆಸುವಷ್ಟು ಪ್ರೌಢರಾಗಿದ್ದಾರೆ? ಎಂದು ಲೆನಿನ್ ಉದ್ಗರಿಸಿದ ಘಟನೆಗೆ ಈಗ ನೂರು ವರ್ಷ

ಭಾರತದ ಕಾರ್ಮಿಕರ ಮೊದಲ ರಾಜಕೀಯ ಮುಷ್ಕರ

ಜುಲೈ 23, 1908. ಅಂದರೆ ಸರಿಯಾಗಿ ನೂರು ವರ್ಷಗಳ ಹಿಂದೆ! ಮುಂಬೈಯಲ್ಲಿ ಒಂದು ಲಕ್ಷ ಶ್ರಮಜೀವಿಗಳು ಸಾರ್ವತ್ರಿಕ ಮುಷ್ಕರ ನಡೆಸಿ ಬೀದಿಗಿಳಿದು, ನಿಶ್ಶಸ್ತ್ರರಾಗಿ ಬ್ರಿಟಿಶ್ ಪೋಲೀಸರ, ಸೈನಿಕರ ಬಂದೂಕಗಳನ್ನು ಎದುರಿಸಿದ ದಿನ. ಆರು ದಿನಗಳ ಕಾಲ ನಡೆದ ಈ ಮುಷ್ಕರ ಸಂಬಳ ಹೆಚ್ಚಳಕ್ಕಾಗಿ ಅಲ್ಲ, ಕೆಲಸದ ಅವಧಿಯನ್ನು ಕಡಿಮೆ ಮಾಡಿ ಎಂದೂ ಅಲ್ಲ, ತಮ್ಮ ಉದ್ಯೋಗದ ರಕ್ಷಣೆಗಾಗಿಯೂ ಅಲ್ಲ. ಅವರು ಹೋರಾಟಕ್ಕಿಳಿದದ್ದು, ಕಾರ್ಮಿಕರ ಈ ಏಕೈಕ ಅಸ್ತ್ರವನ್ನು ಬಳಸಿದ್ದು ಆಗ ರಾಷ್ಟ್ರೀಯ ಆಂದೋಲನದ ಉನ್ನತ ಮುಖಂಡರಾಗಿದ್ದ ತಿಳಕರ ಬಂಧನದ



ವಿರುದ್ಧ. ಇದು ಭಾರತದ ಕಾರ್ಮಿಕ ವರ್ಗದ ಮೊದಲ ರಾಜಕೀಯ ಮುಷ್ಕರ ಎಂಬ ದಾಖಲೆ ನಿರ್ಮಿಸಿತು.

ಜೂನ್ 24, 1908 ರಂದು ಮುಂಬೈಯಲ್ಲಿ ರಾಜದ್ರೋಹದ ಅಪಾದನೆಯ ಮೇಲೆ ಲೋಕಮಾನ್ಯ ಬಾಲ ಗಂಗಾಧರ ತಿಳಕರ ಬಂಧನವಾಯಿತು. ಇದಕ್ಕೆ ದೇಶಾದ್ಯಂತ ಪ್ರತಿಭಟನೆ ವ್ಯಕ್ತವಾಯಿತು. ಏಕೆಂದರೆ ಆಗ ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ ಕ್ರಾಂತಿಕಾರಿ ಹೋರಾಟ ಏರುಗತಿಯಲ್ಲಿತ್ತು. ಅದನ್ನು ದಮನ ಮಾಡಲೆಂದೇ ಈ ಸುಳ್ಳು ಆಪಾದನೆ ಹೊರಿಸಲಾಗಿತ್ತು ಎಂಬ ಸಂಗತಿ ಜನರಿಗೆ ಸ್ಪಷ್ಟವಾಗಿತ್ತು. ವಿಚಾರಣೆಯ ನಾಟಕದ ನಂತರ ತಿಳಕರಿಗೆ ಆರು ವರ್ಷಗಳ ಶಿಕ್ಷೆ ವಿಧಿಸಿ ಮಂಡಾಲೆ ಜೈಲಿಗೆ ಕಳಿಸಲಾಯಿತು. ಇದಕ್ಕೆ ದೇಶಾದ್ಯಂತ ಪ್ರತಿಭಟನೆಯ ಮಹಾಪೂರವೇ ಹರಿದು ಬಂತು.

ಆಗ ದೇಶದ ಎರಡನೆ ಅತಿ ದೊಡ್ಡ ನಗರ ಮುಂಬೈ ಈ ಅಪೂರ್ವ ಘಟನೆಗೆ ಸಾಕ್ಷಿಯಾಯಿತು. ಆದಾಗ ಕೈಗಾರಿಕೆಗಳ ತೀವ್ರ ಗತಿಯ ಬೆಳವಣಿಗೆಗಳನ್ನು ಕಾಣುತ್ತಿದ್ದ ನಗರ, ಬಟ್ಟೆ ಗಿರಣಿಗಳ ಕೇಂದ್ರ.

ಜೂನ್ 29, 2008 ರಂದು ಕೋರ್ಟಿನ ಹೊರಗೆ ನೆರೆದಿದ್ದ ಜನಗಳು ಮತ್ತು ಸಶಸ್ತ್ರ ಪೋಲೀಸರ ನಡುವೆ ಘರ್ಷಣೆ ನಡೆಯಿತು.

ಜುಲೈ 13, ವಿಚಾರಣೆಯೆಂಬುದು ನಿಜವಾಗಿ ಆರಂಭವಾದ ದಿನ, ಘರ್ಷಣೆ ಇನ್ನೂ ತೀವ್ರ ಸ್ವರೂಪ ಪಡೆಯಿತು. ಕೋರ್ಟಿನತ್ತ ಹೋಗುವ ಎಲ್ಲಾ ದಾರಿಗಳನ್ನು ಪೋಲೀಸರು ಅಡ್ಡಗಟ್ಟಿದ್ದರು. ಆದರೂ ಗ್ರೀವ್ಸ್ ಕಾಟನ್ ಗಿರಣಿಯ ಕಾರ್ಮಿಕರು ತಮ್ಮ ಉಪಕರಣಗಳನ್ನು ಕೆಳಗಿಟ್ಟು ಗಿರಣಿಯಿಂದ ಹೊರ ನಡೆದರು. ಬ್ರಿಟಿಶ್ ಸರಕಾರದ ಆದೇಶದ ಮೇರೆಗೆ ಸೈನ್ಯ ಗಿರಣಿ ಪ್ರದೇಶವನ್ನು ಸುತ್ತುವರೆಯಿತು. ಆದರೂ ಚಳುವಳಿ ಮುಂದುವರೆಯಿತು.

ಜುಲೈ 17. ಇನ್ನೂ ಹಲವು ಗಿರಣಿಗಳ ಕಾರ್ಮಿಕರು ಕೆಲಸ ನಿಲ್ಲಿಸಿ ಹೊರಬಂದು ಮೆರವಣಿಗೆ ನಡೆಸಲಾಯಿತು.

ಜುಲೈ 18. ಕಾರ್ಮಿಕರ ಮೇಲೆ ಪೋಲೀಸ್ ಗೋಲೀಬಾರ್.


ಜುಲೈ 19. 60 ಕಾರ್ಖಾನೆಗಳ 65ಸಾವಿರ ಕಾರ್ಮಿಕರ ಮುಷ್ಕರ.

ಜುಲೈ 20. ಮತ್ತೆ ಕಾರ್ಮಿಕರ ಮೇಲೆ ಗೋಲೀಬಾರ್. ಇನ್ನಷ್ಟು ಜನವಿಭಾಗಗಳು ಹೋರಾಟದ ಕಣಕ್ಕೆ.

ಜುಲೈ 21. ಬಂದರು ಕಾರ್ಮಿಕರೂ ಮುಷ್ಕರದಲ್ಲಿ, ರೈಲ್ವೇ ಕಾರ್ಮಿಕರೂ ಸಹ.

ಜುಲೈ 22. ತಿಳಕರಿಗೆ ಆರು ವರ್ಷಗಳ ಶಿಕ್ಷೆಯೆಂಬ ಕೋರ್ಟಿನ 'ತೀರ್ಪು' ಪ್ರಕಟ.

ಜುಲೈ 23. ಮುಂಬೈಯಲ್ಲಿ ಸಾರ್ವತ್ರಿಕ ಮುಷ್ಕರ-1 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಕಾರ್ಖಾನೆಗಳಿಗೆ ಹೋಗದೆ ಬೀದಿಗಿಳಿದರು. ಭಾರತದ ಮೊತ್ತಮೊದಲ ರಾಜಕೀಯ ಮುಷ್ಕರ ಆರಂಭ. ಮುಷ್ಕರದಲ್ಲಿ ಹಿಂದೂ ಕಾರ್ಮಿಕರೂ ಭಾಗವಹಿಸಿದರು, ಮುಸಲ್ಮಾನ ಕಾರ್ಮಿಕರೂ ಭಾಗವಹಿಸಿದರು. ಇಡೀ ಮುಂಬೈ ಜನತೆ ಸಂಪೂರ್ಣ ಹರತಾಳ ನಡೆಸಿ ಬೆಂಬಲ ನೀಡಿತು.



ಜುಲೈ 24 ರಿಂದ ಒಂದು ವಾರ ಮುಂಬೈ ನಗರದ ಬೀದಿಗಳು ರಣರಂಗವಾದವು. ಒಂದೆಡೆ ಬ್ರಿಟಿಶರ ಪೋಲೀಸ್ ಪಡೆಗಳು ಮತ್ತು ಸೈನ್ಯ, ಇನ್ನೊಂದೆಡೆ ಕಾರ್ಮಿಕರು, ಜತೆಗೆ ಜನಸಾಮಾನ್ಯರು. ಅವರ ಭಾರೀ ಬಂದೂಕಗಳ ಎದುರು ಇವರ ಕಲ್ಲು, ಇಟ್ಟಿಗೆಗಳು. ಕಾರ್ಮಿಕರು ಮತ್ತು ಜನಸಾಮಾನ್ಯರು ಹೆಗಲಿಗೆ ಹೆಗಲು ಕೊಟ್ಟು ಹೋರಾಡಿದರು. ಈ ಘರ್ಷಣೆಗಳಲ್ಲಿ 200ಕ್ಕೂ ಹೆಚ್ಚು ಕಾರ್ಮಿಕರು ಮತ್ತು ಜನಸಾಮಾನ್ಯರು ಪ್ರಾಣಾರ್ಪಣೆ ಮಾಡಿದರು.

ಅಧಿಕೃತ ಇತಿಹಾಸದಲ್ಲಿ ಈ ಘಟನೆಗೆ ಅಷ್ಟೇನೂ ಮಹತ್ವ ನೀಡಲಾಗಲಿಲ್ಲ. ಆದರೆ ಆಗ ದೂರದ ಸ್ವಿಟ್ಜರ್ಲೆಂಡಿನಲ್ಲಿ ಗಡೀಪಾರಿನಲ್ಲಿದ್ದ ಲೆನಿನ್ "ಭಾರತೀಯ ಶ್ರಮಜೀವಿಗಳು ಈಗ ಒಂದು ವರ್ಗಪ್ರಜ್ಞೆಯ ಮತ್ತು ರಾಜಕೀಯವಾದ ಸಾಮೂಹಿಕ ಹೋರಾಟ ನಡೆಸುವಷ್ಟು ಪ್ರೌಢರಾಗಿದ್ದಾರೆ" ಎಂದು ಉದ್ಗರಿಸಿದರು.

ಈ ಹೋರಾಟ ಕಾರ್ಮಿಕರ ಪ್ರಜ್ಞೆಯಲ್ಲಿ ಪರಿವರ್ತನೆ ತಂದಿತು ಎನ್ನುತ್ತಾರೆ ಸಿಐಟಿಯು ಮುಖಂಡ ಕನ್ನೈ ಬ್ಯಾನರ್ಜಿ. ಈ ಹೋರಾಟದ ಮೊದಲು ಅವರು ತಮ್ಮ-ತಮ್ಮ ಕೆಲಸದ ಸ್ಥಳಗಳಲ್ಲಿ ತಮ್ಮ ಮಾಲಕರ ಎದುರು ಏಕಾಂಗಿಗಳಾಗಿ ಹೋರಾಡುವ ಸಮೂಹವಷ್ಟೇ ಆಗಿದ್ದರು. ಆದರೆ ವಿವಿಧ ಗಿರಣಿಗಳಲ್ಲಿ, ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ಕೆಲಸ ನಿಲ್ಲಿಸಿ ಮುಂಬೈಯ ಬೀದಿಗಳಲ್ಲಿ ಒಂದಾದಾಗ, ರಣರಂಗದಲ್ಲಿ ಹೆಗಲಿಗೆ ಹೆಗಲು ಕೊಟ್ಟು ನಿಂತಾಗ ಅವರು ಕೇವಲ ತಮ್ಮ ಗಿರಣಿ-ಕಾರ್ಖಾನೆಗಳ ಕೆಲಸಗಾರರಾಗಿ ಉಳಿಯಲಿಲ್ಲ, ಮುಂಬೈಯ ಬೀದಿಗಳಲ್ಲಿ ಸಾಮ್ರಾಜ್ಯಶಾಹಿಗಳಿಗೆ ಎದುರಾಗಿ ನಿಂತ ಮುಂಬೈಯ ಕಾರ್ಮಿಕ ವರ್ಗವಾದರು ಎನ್ನುತ್ತಾರೆ ಬ್ಯಾನರ್ಜಿ.

ಕೆಲವು ವರ್ಷಗಳ ನಂತರ ಲೆನಿನ್‌ರವರ ಈ ಉದ್ಗಾರದ ಬಗ್ಗೆ ಹೇಳುತ್ತಾ ರಜನಿ ಪಾಮೆ ದತ್ ತನ್ನ ಪ್ರಖ್ಯಾತ ಕೃತಿ "ಇಂಡಿಯಾ ಟುಡೆ" ಯಲ್ಲಿ ಹೀಗೆ ಬರೆಯುತ್ತಾರೆ: "ಇಂದು ಈ ಒಳನೋಟದ ಸತ್ಯದ ಅರಿವು ಆಗುತ್ತದೆ... ಭಾರತದ ರಾಷ್ಟ್ರೀಯ ಆಂದೋಲನದ ಇತಿಹಾಸವನ್ನು ನೋಡಿದರೆ ಪ್ರತಿಯೊಂದು ಮುಂದಿನ ಘಟ್ಟದಲ್ಲೂ ಕಾರ್ಮಿಕ ವರ್ಗದ ಪಾತ್ರದ ತೂಕ ಮತ್ತು ಮಹತ್ವ ಹೆಚ್ಚುತ್ತಾ ಹೋಗಿರುವುದು ಕಾಣುತ್ತದೆ... 1914ರ ಅವಧಿಯಲ್ಲಿ ಕಾರ್ಮಿಕ ವರ್ಗದ ಪಾತ್ರ ಇನ್ನೂ ಹಿನ್ನೆಲೆಯಲ್ಲೇ ಇತ್ತು. ಅದು ರಾಷ್ಟ್ರೀಯ ಆಂದೋಲನವನ್ನು ಅನುಸರಿಸಿ ಬರುತ್ತಿತ್ತು. ಮುಂಬೈ ಸಾರ್ವತ್ರಿಕ ಮುಷ್ಕರ ಇದಕ್ಕೆ ಒಂದು ಅಪವಾದ... ... ... ಆದರೆ ಎರಡನೇ ಮಹಾಯುದ್ಧ ಆರಂಭವಾದಾಗ ಕಾರ್ಮಿಕ ವರ್ಗ ಹಿಂದೆಂದಿಗಿಂತಲೂ ಸ್ಪಷ್ಟವಾಗಿ ಭವಿಷ್ಯದ ಭಾರತದ ರಾಜಕಾರಣದಲ್ಲಿ ಒಂದು ನಿರ್ಣಾಯಕ ಶಕ್ತಿಯಾಗಿ ಕಾಣಿಸಿಕೊಳ್ಳುತ್ತದೆ" ಎನ್ನುತ್ತಾರೆ.

ಇದು ಕೂಡಾ ನಿಜವಾಗುತ್ತಿದೆ. ಆದರೂ ಸಮಸ್ತ ದೇಶದ ರಾಜಕೀಯದಲ್ಲಿ ಕಾರ್ಮಿಕ ವರ್ಗ ಒಂದು ನಿರ್ಣಾಯಕ ಶಕ್ತಿಯಾಗಲು ಇನ್ನೂ ಸಾಕಷ್ಟು ಕೆಲಸ ಆಗಬೇಕಿದೆ. ನೂರು ವರ್ಷಗಳ ಹಿಂದಿನ ಈ ಘಟನೆಯ ಸ್ಮರಣೆ ಇದಕ್ಕೆ ಸ್ಫೂರ್ತಿ ನೀಡಲಿ ಎನ್ನುತ್ತಾರೆ ಕನ್ನೈ ಬ್ಯಾನರ್ಜಿ.

(ಆಧಾರ: 'ದಿ ವರ್ಕಿಂಗ್ ಕ್ಲಾಸ್'ನಲ್ಲಿ ಅವರ ಲೇಖನ)

ಕೋಲಾರ ರೈತರ ಹೋರಾಟ

ರೈತ ಮತ್ತು ಕೃಷಿ ಕೂಲಿ ಕಾರ್ಮಿಕರ ಹತ್ತಾರು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಜುಲೈ 14 ರಂದು ನಡೆದ 'ಅರ್ಜಿ ಚಳುವಳಿ' ಯಶಸ್ವಿಯಾಗಿ ನಡೆಯಿತು.

ಬಿಪಿಎಲ್ ರೇಷನ್ ಕಾರ್ಡು ಇಲ್ಲದವರಿಗೆ ಹಾಗೂ ಜಿ9 ಕಾರ್ಡುದಾರರಿಗೆ ತುರ್ತಾಗಿ ಕಾರ್ಡು ನೀಡಿ ರೇಷನ್ ನೀಡಬೇಕೆಂದು ಹಾಗೂ ಪ್ರತಿ ಬಿಪಿಎಲ್ ಕಾರ್ಡಿಗೆ 1 ಕೆ.ಜಿ.ಗೆ 2 ರೂ. ದರದಲ್ಲಿ 25 ಕೆ.ಜಿ. ಅಕ್ಕಿ ನೀಡಬೇಕು. ಮನೆ ನಿವೇಶನ ಇಲ್ಲದ ಬಡವರಿಗೆ ಈ ತಕ್ಷಣ ಮನೆ - ನಿವೇಶನ ನೀಡಬೇಕು. ದಿ:30-3-2007ಕ್ಕೆ ಸುಸ್ತಿಯಾದವರಿಗೆ ಮಾತ್ರ ಸಾಲ ಮನ್ನಾ ಘೋಷಿಸಿದ್ದು, ಬಜೆಟ್ ಮಂಡಿಸಿದ ದಿ:29-2-2008 ರವರೆಗೆ ಈ ಯೋಜನೆಯನ್ನು ವಿಸ್ತರಿಸಬೇಕು ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಾದ ರೇಷ್ಮೆ, ಹೈನುಗಾರಿಕೆ, ಕೋಳಿ ಸಾಕಾಣಿಕೆ, ಪಂಪ್ ಮೋಟಾರ್ ಇನ್ನಿತರ ಸಾಲಗಳನ್ನು ಮನ್ನಾ ಮಾಡಬೇಕು ಹಾಗೂ ಶೇ. 3ರ ಬಡ್ಡಿ ದರದಲ್ಲಿ ಹೊಸದಾಗಿ ಕೃಷಿ ಸಾಲ ನೀಡಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಹಾಗೂ ಸ್ತ್ರೀಶಕ್ತಿ ಸಂಘಗಳು ಪಡೆದಿರುವ ಸಾಲಗಳನ್ನು ಮನ್ನಾ ಮಾಡಬೇಕು. ಹತ್ತಾರು ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ರೈತರಿಗೆ ಸಾಗುವಳಿ ಚೀಟಿಗಳನ್ನು ನೀಡಬೇಕು. ರೈತರ ಅಗತ್ಯಕ್ಕೆ ತಕ್ಕಂತೆ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳನ್ನು ಸಬ್ಸಿಡಿ ದರದಲ್ಲಿ ವಿತರಿಸಬೇಕು ಮತ್ತಿತರರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರಧಾನಮಂತ್ರಿಗಳಿಗೆ ಜಿಲ್ಲಾಧಿಕಾರಿಗಳ ಮೂಲಕ "ಅರ್ಜಿ ಚಳುವಳಿ"ಯನ್ನು ನಡೆಸುವಂತೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯ ಕರೆ ನೀಡಿತ್ತು.

ಈ ಹೋರಾಟಕ್ಕೆ ಜನರನ್ನು ಸಂಘಟಿಸುವ ಜವಾಬ್ದಾರಿಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ಕೋಲಾರ ತಾಲ್ಲೂಕು ಸಮಿತಿ ಸದಸ್ಯರು ಗ್ರಾಮವಾರು ಹಂಚಿಕೊಂಡು, ಅದರಂತೆ ರೈತ ಸಂಘದ ಸಂಪರ್ಕವಿರುವ ಸುಮಾರು 100ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಕರಪತ್ರವನ್ನು ವಿತರಿಸಿ ಈ ಹೋರಾಟದ ಮಹತ್ವವನ್ನು ವಿವರಿಸಿ ಭಾಗವಹಿಸುವಂತೆ ಮನವಿ ಮಾಡಿದರು.

ಹೋರಾಟದ ಮಹತ್ವವನ್ನು ಮನಗಂಡ ಜಿಲ್ಲೆಯ ರೈತಾಪಿ ವರ್ಗ ಜುಲೈ 14 ರಂದು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದರು. ಕೋಲಾರದ ಪ್ರವಾಸಿಮಂದಿರದಿಂದ ಆರಂಭವಾದ ಮೆರವಣಿಗೆಯಲ್ಲಿ ಸರ್ಕಾರದ ರೈತ ವಿರೋಧಿ ನೀತಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು. ಪ್ರತಿಭಟನೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದು ವಿಶೇಷವಾಗಿತ್ತು.

ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಸೇರಿದ್ದ

ಪುಟ 4 ಕ್ಕೆ

ಸಂಪಾದಕೀಯ

'ಅಭಿವೃದ್ಧಿ' ಬಜೆಟ್‌ನ ನಿಜಮುಖ

ಬಹು ಅಬ್ಬರದಲ್ಲಿ ಮಂಡಿಸಿದ ಬಿಜೆಪಿ ಸರ್ಕಾರದ ಬಜೆಟ್‌ನಲ್ಲಿ ಯಾವುದೇ ಹೊಸತಿಲ್ಲದೇ ಉದಾರೀಕರಣ, ಜಾಗತೀಕರಣದ ಜಾರಿಯ ಜಾಡಿನಲ್ಲಿದೆ. ಅಭಿವೃದ್ಧಿಯೇ ಮೂಲಮಂತ್ರವೆಂದೂ, ದಾವುಗಾಲಿನ ಅಭಿವೃದ್ಧಿ ಸಾಧಿಸಲು, ರಾಜ್ಯದ ಜನರ ಕಷ್ಟ ಕೋಟಲೆ ನಿವಾರಿಸಲು ಬಿಜೆಪಿಯೇ ಪರಿಹಾರ ಎಂದೆಲ್ಲಾ ಬಣ್ಣಿಸಿಕೊಂಡಿದ್ದ ಯಡಿಯೂರಪ್ಪನವರ ಈ ಬಜೆಟ್ ಕೃಷಿ, ಕೈಗಾರಿಕೆಗಳಂತಹ ಮೂಲ ರಂಗಗಳಲ್ಲಿ ಪ್ರಗತಿ ಸಾಧಿಸಲು ಅಗತ್ಯವಿರುವ ಏನೊಂದೂ ಕ್ರಮಗಳೇ ಇಲ್ಲದ ಅಭಿವೃದ್ಧಿ ವಿರೋಧಿ ಬಜೆಟ್ ಆಗಿದೆ. ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಎಳ್ಳಷ್ಟು ಗಮನ ನೀಡದೇ ಸುಮಾರು 11,000 ಕೋಟಿಗಳನ್ನು ವಿವಿಧ ಮೂಲಗಳಿಂದ ಸಾಲ ಎತ್ತಿ 'ತುಪ್ಪ' ತಿನ್ನುವ ಈ ಸರ್ಕಾರದ ನಿರ್ಧಾರಗಳು ರಾಜ್ಯವನ್ನು ಮತ್ತೂ ಸಾಲದ ಕೂಪಕ್ಕೆ ತಳ್ಳಲಿದೆ. ಈಗಾಗಲೇ ಇರುವ ಸುಮಾರು 65,000 ಕೋಟಿ ರೂಪಾಯಿ ಹೊರ ಸಾಲ ಇರುವಾಗ ಮತ್ತೆ ಸಾಲವನ್ನೇ ಅವಲಂಬಿಸುವುದು ಆಘಾತಕರ ಪರಿಣಾಮಬೀರಲಿದೆ. ಹೀಗೆ ಬಿಜೆಪಿ ರಾಜ್ಯಕ್ಕೆ 'ಪರಿಹಾರ'ವಾಗದೇ ಹೆಣಭಾರವಾಗಲಿದೆ. ಚುನಾವಣೆ ಸಂದರ್ಭದಲ್ಲಿ ಅಧಿಕಾರಕ್ಕಾಗಿ ವಿವಿಧ ಜಾತಿ ಕೋಮುಗಳ ಓಲೈಕೆಗೆ ಬಿಜೆಪಿ ತೊಡಗಿತ್ತು. ಅದನ್ನು ರಾಜಕೀಯವಾಗಿ ಕ್ರೋಢೀಕರಿಸಿಕೊಳ್ಳಲು ಈ ಬಜೆಟ್‌ನಲ್ಲಿ ಕುರುಬ, ಲಿಂಗಾಯಿತ, ಬೋವಿ, ವಾಲ್ಮೀಕಿ, ಬ್ರಾಹ್ಮಣ ಇತ್ಯಾದಿ ಜಾತಿಗಳನ್ನು ಓಲೈಸಲು ಒಂದಿಷ್ಟು ಹಣವನ್ನು ನೀಡಲಾಗಿದೆ.

ವಿಶೇಷವಾಗಿ ಹಿಂದೆ ಎಸ್.ಎಂ.ಕೃಷ್ಣರ ಸರ್ಕಾರ ಪ್ರಜಾಸತ್ತಾತ್ಮಕ ಸಂಸ್ಥೆ, ಪ್ರತಿನಿಧಿಗಳನ್ನು ಮೂಲೆಗೆ ತಳ್ಳಿ ಕೇವಲ ಟಾಸ್ಕ್‌ಫೋರ್ಸ್‌ಗಳನ್ನೇ ಅವಲಂಬಿಸಿದಂತೆ ಯಡಿಯೂರಪ್ಪನವರೂ ಅದೇ ಪ್ರಜಾಸತ್ತಾತ್ಮಕ ಮೌಲ್ಯಗಳ ವಿರೋಧಿ ಹಾದಿ ಹಿಡಿದಿದ್ದಾರೆ.

ಬಿಜೆಪಿ ಸರ್ಕಾರ ಮಂಡಿಸಿದ ಮೊದಲ ಬಜೆಟ್ ವಿವಿಧ ಜನ ವಿಭಾಗಗಳ ಮೂಗಿಗೆ ತುಪ್ಪ ಸವರುವ ಅಗ್ಗದ ಜನಪ್ರಿಯತೆಯ ಬಜೆಟ್ ಆಗಿದೆ. ರಾಜ್ಯದ ವಿದ್ಯುತ್, ನೀರಾವರಿ, ಕೃಷಿ ಹಾಗೂ ಕೈಗಾರಿಕಾ ಬೆಳವಣಿಗೆಗೆ ಹಣದ ಹೂಡಿಕೆಯನ್ನು ಕಡಿತ ಮಾಡುವ ಮೂಲಕ ರಾಜ್ಯದ ಅಭಿವೃದ್ಧಿಗೆ ಹಾನಿಕರವಾದ ಬಜೆಟ್ ಇದು.

ಮಾನವ ಅಭಿವೃದ್ಧಿಯೇ ನಿಜವಾದ ಅಭಿವೃದ್ಧಿ ಎಂಬುದನ್ನು ಪರಿಗಣಿಸದ ಬಜೆಟ್ ಇದಾಗಿದೆ. ಕೃಷಿಕೂಲಿಕಾರರು, ವಲಸೆಗಾರರು, ಕಾರ್ಮಿಕರಿಗೆ ಸರಿಯಾದ ಉದ್ಯೋಗ, ಕನಿಷ್ಠ ವೇತನ, ಕಾರ್ಮಿಕ ಕಾನೂನುಗಳ ಜಾರಿ ಇವುಗಳ ಬಗ್ಗೆ ಒಂದೇ ಒಂದು ಮಾತನ್ನಾಡದೆ ರಾಜ್ಯದ ಜನತೆಯ 1/3 ಭಾಗವನ್ನು ಪೂರ್ಣವಾಗಿ ನಿರ್ಲಕ್ಷಿಸಿದೆ.

ರಾಜ್ಯದಲ್ಲಿ ಶೇ 82 ರಷ್ಟು ಮಕ್ಕಳು ಶೇ 60 ರಷ್ಟು ಮಹಿಳೆಯರು ರಕ್ತ ಹೀನತೆಯನ್ನು ಅನುಭವಿಸುತ್ತಿರುವಾಗ ಹಾಗೂ ತೀವ್ರ ಬೆಲೆ ಏರಿಕೆಯಿಂದ ಬಳಲುತ್ತಿರುವಾಗ ಪಡಿತರ ಪದ್ಧತಿಯ ಬಗ್ಗೆ ಬಿಪಿಎಲ್ ರೇಷನ್ ಕಾರ್ಡ್‌ಗಳ ವಿತರಣೆಯ ಬಗ್ಗೆ ಚಕಾರವಿಲ್ಲವಾಗಿದೆ. ಪೆಟ್ರೋಲ್, ಡೀಸೆಲ್ ದರಗಳ ಮೇಲಿನ ರಾಜ್ಯ ಮಾರಾಟ ತೆರಿಗೆಯನ್ನು ಇಳಿಸುವ ಬಗ್ಗೆಯೂ ಪ್ರಸ್ತಾಪವಿಲ್ಲ.

ರಾಜ್ಯದ ಅಭಿವೃದ್ಧಿಯೆಲ್ಲವನ್ನೂ ಖಾಸಗಿ ಬಂಡವಾಳಗಾರರ ಕೈಯಲ್ಲಿಡುವ, ಅವರಿಗೆ ಲಾಭ ಬಡುಕತನಕ್ಕೆ ನೀರೆರೆಯುವ ಪ್ರಸ್ತಾಪಗಳನ್ನು ಮೂಲಭೂತ ಸೌಕರ್ಯಗಳು, ವಿಮಾನ ನಿಲ್ದಾಣಗಳು ವಿವಿಧ ಕೈಗಾರಿಕಾ ಪಾರ್ಕ್‌ಗಳು, ವಿದ್ಯುತ್ ಉತ್ಪಾದನೆಯ ಖಾಸಗೀಕರಣ ಇತ್ಯಾದಿಗಳಲ್ಲಿ ಯಥೇಚ್ಛವಾಗಿ ಮಂಡಿಸಲಾಗಿದೆ.


ಉಚಿತ ವಿದ್ಯುತ್ ನೀಡಿಕೆಗೆ ಮೀಟರೀಕರಣವನ್ನು ಒಂದು ಶರತ್ತಾಗಿ ವಿಧಿಸುವುದರಲ್ಲಿಯೂ ವಿಶ್ವಬ್ಯಾಂಕ್‌ನ ಕೈವಾಡವನ್ನು ಕಾಣಬಹುದಾಗಿದೆ.

ಸರ್ಕಾರಿ ಪ್ರೌಢಶಾಲೆ, ಕಾಲೇಜುಗಳು, ತಾಂತ್ರಿಕ ಸಂಸ್ಥೆಗಳನ್ನು ಹೆಚ್ಚು ಹೆಚ್ಚು ಸ್ಥಾಪಿಸುವ, ಖಾಸಗಿ ಸಂಸ್ಥೆಗಳ ಡೊನೇಷನ್ ಕ್ಯಾಪಿಟೇಷನ್‌ಗಳನ್ನೂ ಶಿಕ್ಷಣಶುಲ್ಕಗಳನ್ನೂ ನಿಯಂತ್ರಿಸುವ ಯಾವುದೇ ಪ್ರಸ್ತಾಪವಿಲ್ಲ. ಅಕ್ರಮ ಗಣಿಗಾರಿಕೆಯನ್ನು ನಿಷೇದಿಸುವ ಗಣಿ ಆದಾಯ, ಭೂ ಮಾಫಿಯಾಗಳ ಆದಾಯದ ಮೇಲೆ ಕರ ಹೆಚ್ಚಿಸಿ ಆದಾಯವನ್ನು ಹೆಚ್ಚಿಸುವ ಯಾವುದೇ ಪ್ರಸ್ತಾಪವಿಲ್ಲದಿರುವುದು ಗಣಿ, ಭೂಮಾಫಿಯಾಗಳ, ಶಿಕ್ಷಣ ಮಾಫಿಯಾದ ಕೈವಾಡಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ. ಇದು ಜನತೆಯ ಅಭಿವೃದ್ಧಿಗೆ ಪೂರಕವಾದರೂ ಹೇಗೆ ಆಗುತ್ತದೆ.

ಆದರೆ ಸಂಘಪರಿವಾರದ ಸಂಸ್ಥೆಗಳ ಒಳ ತೂರಿಕೆಗೆ ಅವಕಾಶ ನೀಡುವ ಸಂಸ್ಕೃತ ವಿಶ್ವವಿದ್ಯಾನಿಲಯ, ಪವಿತ್ರ ಕ್ಷೇತ್ರಗಳ ಅಭಿವೃದ್ಧಿ, ಜ್ಞಾನ ಆಯೋಗ, ಸಾವಯವ ಕೃಷಿ, ಗೋತಳಿ ಕ್ಷೇತ್ರಗಳು ಇತ್ಯಾದಿ ಯೋಜನೆಗಳು ಇದರಲ್ಲಿ ವಿಪುಲವಾಗಿವೆ.


ಹಲವು ಅಕ್ರಮಗಳಿಂದ ಅಧಿಕಾರಕ್ಕೆ ಬಂದ ಯಡಿಯೂರಪ್ಪನವರ ಸರ್ಕಾರದ ಈ ಭ್ರಮೆ ಹುಟ್ಟಿಸುವ ಜನವಿರೋಧಿ, ಪ್ರಗತಿ ವಿರೋಧಿ ಬಜೆಟ್‌ನ ನಿಜ ಮುಖವನ್ನು ಬಯಲಿಗೆಳೆಯಬೇಕು. ಕೇಂದ್ರ ರಾಜ್ಯ ಸರ್ಕಾರಗಳ ನೀತಿಗಳಿಂದ ಜನತೆ ತತ್ತರಿಸುತ್ತಿರುವಾಗ ಜನರ ಅತೃಪ್ತಿಗೆ ಎಡ ಮತ್ತು ಜಾತ್ಯಾತೀತ, ಪ್ರಜಾಸತ್ತಾತ್ಮಕ ಶಕ್ತಿಗಳು ನೇತೃತ್ವ ನೀಡಿ ಜನಾಂದೋಲನ ಹೂಡಬೇಕು.

ಬಾಬಾಬುಡನ್ ಗಿರಿ: ಮೇಲ್ಛಾವಣಿ ಕುಸಿತ ಎಚ್ಚರ ಅಗತ್ಯ



ಅಲ್ಲಿ ಮಳೆ ಇರಬೇಕಿತ್ತು. ಆದರೆ ಇರಲಿಲ್ಲ. ಅಲ್ಲಿದ್ದದ್ದು ಮಂಜು, ಮೋಡ, ಆಗಾಗ ಹನಿಗಳ ಸಿಂಚನ. ಅದೇ ತುಂತುರು ಮಳೆ. ನೆತ್ತಿಯ ಮೇಲೆ ಭಾರದಿಂದ ಸ್ವಲ್ಪ ಸ್ವಲ್ಪವೇ ಸರಿಯುತ್ತಿರುವ, ಬೆಟ್ಟವನ್ನು ಬಳಸಿ ಭರಪೂರ ನೀರುಣಿಸುತ್ತಿದ್ದ ದೃಶ್ಯ ಸದ್ಯ ಮಾಯ. ನಿಜ ಬಾಬಾಬುಡನ್‌ಗಿರಿ ಸಾಲು ಬೆಟ್ಟದಲ್ಲಿ ಹಸಿರೇನೋ ಇದೆ. ಆದರೆ ದಟ್ಟ ಹಸಿರಲ್ಲ. ತುಂತುರು ಮಳೆತೆ ಜೀವ ತಳೆದ ಹುಲ್ಲು ತುಂಡುಗಳ ಹೊದಿಕೆ. ಹಾವಿನಂತಹ ಹಾದಿಯುದ್ದಕ್ಕೂ ಬೆಟ್ಟದ ಒಡಲಿಂದ ಭೋರ್ಗರೆಯುತ್ತಿದ್ದ ನೀರ ಝರಿಗಳು ಅಪರೂಪ.

'ಕಳೆದೆರಡು ವಾರಗಳ ಹಿಂದೆ ಒಂದಿಷ್ಟು ಸುರಿದ ಮಳೆ ಒಟ್ಟಾರೆ ಬಹುತೇಕ ಈ ಬಾರಿ ಮಳೆ ಅಷ್ಟಕ್ಕಷ್ಟೇ' ಎಂದರು ಸಂಗಾತಿ ವಿ.ಸುಕುಮಾರ್. ಕೊಡಗು ಮಲೆನಾಡಿನಲ್ಲಿ ಈ ಬಾರಿ ಮಳೆ ಕಡಿಮೆ. ಈಗಾಗಲೇ



ಗುಹೆಯ ಮುಂದೆ ನಿಯೋಗದ ಸದಸ್ಯರು

ಮುಂಗಾರು ಮಳೆ ಕೈಬಿಟ್ಟು ಹೈದ್ರಾಬಾದ್, ಕರ್ನಾಟಕ, ಉತ್ತರ ಕರ್ನಾಟಕದ ಜನ ಬರಗಾಲ ನಿಶ್ಚಿತವೆಂದು ಆತಂಕಿತರಾಗಿರುವಾಗ ಈ ಮಳೆ ನಾಡಿನಲ್ಲಿಯೂ ಅಂತಹುದೇ ಸ್ಥಿತಿ. ಬಹುತೇಕ ಪ್ಲಾಂಟೇಶನ್‌ಗಳಲ್ಲಿ, ಕೃಷಿಕರೂ ಕಾರ್ಮಿಕರ ಸ್ಥಿತಿಯೂ ಅನಿಶ್ಚಿತವೇ.

ನಮ್ಮ ವಾಹನ ಬೆಟ್ಟವೇರುವಾಗ 'ಇದು ಸೀತಾಳಯ್ಯನ ಗಿರಿ. ಇದು ಮುಳ್ಳಯ್ಯನಗಿರಿ, ಬಿಸಗ್ನಿ ಮಠ ಇರುವುದು ಅಲ್ಲಿ....'

ಹೀಗೆ ಹೇಳುತ್ತಲೇ ಬಾಲ್ಯದ ದಿನಗಳನ್ನು ತೆರೆದಿಟ್ಟರು ಸುಕುಮಾರ್. ವರ್ಷದಲ್ಲಿ ನಡೆವ ಉರುಸ್ ಜಾತ್ರೆಗೆ ತಾವು ಹೋಗುತ್ತಿದ್ದದ್ದು, ಸ್ವಚ್ಛಂದ ಬಯಲಿನ ಮೈಕೊರೆವ ಚಳಿ ಮಂಜು ತೆರೆಗಳ ನಡುವಿನ ಬಾಬಾಬುಡನ್‌ಗಿರಿಯ ದರ್ಗಾಪೀಠದ ಗುಹೆಗೆ ಯಾವುದೇ ಜಾತಿಮತಗಳ ಬೇಧವಿಲ್ಲದೆ ಹೋಗಿಬರುತ್ತಿದ್ದ, ಕಲೆತು ಉರುಸ್ ಆಚರಿಸುತ್ತಿದ್ದು ನೆನಪಿನ ಸುರುಳಿ ಬಿಚ್ಚಿಟ್ಟಿದ್ದರು. ಆದರೆ ಈಗ ಹಾಗಿಲ್ಲ. ಪ್ರಶಾಂತ ಗಿರಿಯ ಮೇಲೆ ಸೌಹಾರ್ದ ಪರಂಪರೆಯ, ಬಹುಮುಖ ಆಚರಣೆಗಳ ಶ್ರದ್ಧಾಕೇಂದ್ರದ ಸುತ್ತಲೂ ದ್ವೇಷ-ದ್ವೇಷಾಗ್ನಿಯ ಕಿಡಿಗಳು ಹೊತ್ತಿಸುತ್ತಿರುವುದು ದಕ್ಷಿಣ ಭಾರತದ 'ಅಯ್ಯೋಧ್ಯೆ'ಯನ್ನಾಗಿಸುವುದಾಗಿ ಎಚ್ಚರಿಸುವುದು. ನಡೆದೇ ಇದೆಯಲ್ಲ... ಇವೆಲ್ಲವುಗಳ ಪರಿಣಾಮವೇ ಗುಹೆಯನ್ನು ಸರಳು, ತಂತಿಗಳ ಕಬ್ಬಿಣದ ಪಂಜರದೊಳಗೆ ಬಂಧಿಸಿಡುವ ಪ್ರಯುತ್ನಗಳು. ಕಳೆದಾರು ವರುಷಗಳಿಗೆ ಹೋಲಿಸಿದರೂ ಅಲ್ಲಿನ ಚಿತ್ರಣವೇ ಬದಲಾಗಿದೆ. ಶ್ರದ್ಧಾಸ್ಫೂರ್ತಿಯೂ ಅಪ್ನಜನಕಕ್ಕಾಗಿ ಹಾತೊರೆಯುವಂತೆ ಮಾಡಲಾಗಿದೆ.

ತಲೆ ಕಂದಾಯ

ನಮ್ಮ ವಾಹನ ಗಿರಿಯ ದರ್ಗಾಪೀಠದ ಆವರಣವನ್ನು ಕಬ್ಬಿಣದ ಗೇಟಿನ ಮೇಲಿಂದ ಹಾದು ಒಳಪ್ರವೇಶಿಸುತ್ತಿದ್ದಂತೆ ಅಡ್ಡ ಕೈಯೊಂದು ತಡೆಯಿತು. 'ಕೊಡಿ ಹತ್ತು ರೂಪಾಯಿಗಳು' ಚೀಟಿ ಹರಿದು ಕೈಗಿತ್ತಿದ್ದೇ.... ಸರ್ಕಾರ ಅದನ್ನೊಂದು ಯಾತ್ರಾ ಕೇಂದ್ರವನ್ನಾಗಿಸುವ ಪ್ರಯತ್ನಗಳಿವೆ. ಅಲ್ಲಿ ಬರುವ ವಾಹನಗಳಿಂದ 'ತಲೆ ಕಂದಾಯ' ವಸೂಲಿ ಆರಂಭಗೊಂಡಿದೆ.

ಈ ಸಲದ ನಮ್ಮ ನಿಯೋಗದ ಭೇಟಿ 'ಗುಹೆಯ' ಒಂದು ಭಾಗದ (ಮುಂಭಾಗದ ಛಾವಣಿ ಕುಸಿತದ ಬಗ್ಗೆ ಪರಿಶೀಲಿಸಲು ಹೋಗಿದ್ದು. ಅದು ನೈಸರ್ಗಿಕವಾಗಿ ಕುಸಿದಿದೆಯೆಂದು 'ಅಧಿಕೃತ'ವಾಗಿ (ಸರ್ಕಾರ) ಹೇಳುತ್ತಿದ್ದರೆ, ಅದನ್ನು ಕೆಡವಲಾಗಿದೆ ಎಂಬ ಅನುಮಾನಗಳೂ ಅಲ್ಲಿ ಎದ್ದಿದ್ದವು. ಅಲ್ಲಿಗೆ ರಾಜ್ಯ ಸರ್ಕಾರದ ನಾಲ್ವರು ಕ್ಯಾಬಿನೆಟ್ ಸಚಿವರು, ಶಾಸಕರು, ಅಧಿಕಾರಿಗಳ ದಂಡು ಭೇಟಿ ನೀಡಿ ಕ್ರಮವಹಿಸುವುದಾಗಿ ಹೇಳಿತ್ತು. ಅಲ್ಲಿಗೆ ರಾ. ಹಿಂ. ಸೇನೆಯ ಪ್ರಮೋದ್ ಮುತಾಲಿಕ್‌ನೂ ಭೇಟಿ ನೀಡಿ ದತ್ತಪೀಠದ ಗುಹೆಯ ಛಾವಣಿ ಕೆಡವಲಾಗಿದೆ ಎಂದು ಹೇಳಿದ್ದನು. ಹೀಗಾಗಿ ಈಗಾಗಲೇ ಜಗತ್ತಿಗೆ ಸಾರಿರುವಂತೆ 'ಅಯೋಧ್ಯೆ'ಯಾಗಿಸುವ ಕಾರ್ಯ ಯೋಜನೆಯನ್ನು ಸರಿಪಡಿಸುವ ಕ್ರಮವಾಗಿ ಕೈಗೊಂಡಿದ್ದೆ?. ಆದ್ದರಿಂದ ವಸ್ತುಸ್ಥಿತಿ ಹಾಗೂ ಸರ್ಕಾರದ ಕಾರ್ಯಯೋಜನೆ ತಿಳಿಯುವ ಸಲುವಾಗಿ ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿ, ಮಾರುತಿ ಮಾನ್ಪಡೆ, ಎಸ್.ವೈ.ಗುರುಶಾಂತ್, ವಿ.ಸುಕುಮಾರ್‌ರವರಿದ್ದ ಸಿಪಿಐ(ಎಂ) ರಾಜ್ಯ ನಿಯೋಗ ಇದೇ ಜುಲೈ 18ರಂದು ಅಲ್ಲಿಗೆ ಭೇಟಿ ನೀಡಿತ್ತು.

ಬೆಳಿಗ್ಗೆ 10ರ ಸುಮಾರು ಮೆಟ್ಟಿಲಿಳಿದು ಗುಹೆಯ ಮುಖ್ಯ ಬಾಗಿಲ ಬಳಿ ಹೋದೆವಾದರೂ ಪಂಜರದ ಬಾಗಿಲುಗಳಿಗೆ ಬೀಗ ಹಾಕಿದ್ದರಿಂದ ಒಳಹೋಗಲಾಗಲಿಲ್ಲ. ಅಧರೊಳಗೆ ಇದ್ದ 'ಮುಜಾವರ್' (ವಿಧಿವಿಧಾನ ಮಾಡುವವರು) ಅಲ್ಲಿಗೆ ಬಂದಿದ್ದ ಭಕ್ತಾದಿಗಳೊಂದಿಗೆ ಧಾರ್ಮಿಕ ಆಚರಣೆಗಳಲ್ಲಿ ಮಗ್ನನಾಗಿದ್ದ ಅವರಲ್ಲಿನ ಮಗುವೊಂದರ ತಲೆಗೂದಲನ್ನು ಸರಳಿನ ಸಂದಿಯಿಂದಲೇ ಕೈ ಹೊರಹಾಕಿ ಆಚರಣೆ ಮಾಡುತ್ತಿದ್ದ, ನಮ್ಮನ್ನು ಗುರುತಿಸಿದ ಮಜಾವರ್

ಪುಟ 12ಕ್ಕೆ

ರಾಜಕೀಯ ನೈತಿಕತೆ! ಹಾಗೆಂದರೇನು?

ದೇಶದ ರಾಜಧಾನಿ ನವದೆಹಲಿಯಲ್ಲಿ ಇದೀಗ ಬಾರಿ ರಾಜಕೀಯ ಚಟುವಟಿಕೆಗಳು ನಡೆಯುತ್ತಿವೆ. ದೆಹಲಿ ಮಾತ್ರವಲ್ಲ ದೇಶದ ಉದ್ದಗಲಕ್ಕೂ ಚಟುವಟಿಕೆಗಳು ನಡೆಯುತ್ತಿವೆ.

ದೇಶದ ಸ್ವಾತಂತ್ರ್ಯವನ್ನು ನಾಶ ಮಾಡಿ ಭಾರತವನ್ನು ಅಮೇರಿಕಾದ ಆದೇಶ ಪಾಲಕನ ಅಥವಾ ಅಡಿಯಾಳಿನ ಸ್ಥಾನಕ್ಕೆ ತಳ್ಳುವ ಒಪ್ಪಂದ ಯಾವ ಕಾರಣಕ್ಕೂ ಆಗಲಾರದು ಅಂತ ಎಡಪಕ್ಷಗಳು ಸಮರ ಘೋಷಣೆ ಮಾಡಿವೆ.

ಕಾಂಗ್ರೆಸ್ ಪಕ್ಷ ಈ ಒಪ್ಪಂದ ದೇಶದ ಇಂಧನ ಭದ್ರತೆಗೆ ಅಗತ್ಯ. ಇದರಲ್ಲಿ ಅಪಾಯವೇನಿಲ್ಲ ಅಂತ ವಾದಿಸುತ್ತಾ ಒಪ್ಪಂದಕ್ಕೆ ಮುಂದಾಗಿದೆ.

ಬಿರುಸಿನ ಚಟುವಟಿಕೆ ಅಂದರೆ ಅದರಲ್ಲಿ ಎರಡು ರೀತಿ ಇದೆ. ಮೊದಲನೆಯ ತರಹದ್ದು ಏನಪ್ಪಾ ಅಂದರೆ ಅಣು ಒಪ್ಪಂದ ಎಂದರೇನು, ಅದರ ಪರಿಣಾಮಗಳೇನು? ಅಪಾಯಗಳೇನು ಇತ್ಯಾದಿ ಜನತೆಗೆ ವಿವರಿಸುವುದು. ಈ ಬಗೆಗೆ ಸ್ಪಷ್ಟನೆ ಇಲ್ಲದ ರಾಜಕೀಯ ಪಕ್ಷಗಳ ಮುಖಂಡರನ್ನು ಕಂಡು ವಿವರಿಸುವುದು. ಇದನ್ನು ಎಡಪಕ್ಷಗಳು ಮಾಡುತ್ತಿವೆ. (ಅವಕ್ಕೆ ಬೇರೆ ಇನ್ನೇನು ಕೆಲಸ ಇದೆ).

ಪಾಪ ಕಾಂಗ್ರೆಸ್‌ಗೆ ಅಷ್ಟು ಪುರುಸೊತ್ತಿಲ್ಲ. ಸರ್ಕಾರ ನಡೆಸುತ್ತಾ ಇರೋ ಪಕ್ಷ ಅಲ್ಲವೇ ಪಾಪ. ಅದೂ ಅಲ್ಲದೆ ಈಗ ಬಹುಮತ ಬೇರೆ ಗಳಿಸಿಕೋ ಬೇಕಾಗಿದೆ. ಆದ್ದರಿಂದ ಜನರಿಗೆ ಅಣು ಒಪ್ಪಂದ ಅಂದರೇನು? ಅದರಿಂದ ಯಾವ ಪ್ರಯೋಜನಗಳಿವೆ ಅಂತ ವಿವರಿಸೋ ರ‍್ಯಾಲಿ, ವಿಚಾರಸಂಕಿರಣ ಅಭಿಯಾನಕ್ಕೆ ಎಲ್ಲಿದೆ ಸಮಯ. ಈಗೇನಿದ್ದರೂ ವಿವಿಧ ರಾಜಕೀಯ ಪಕ್ಷಗಳಿಗೆ ಒಪ್ಪಂದದ ಪ್ರಯೋಜನ ಏನೂಂತ 'ತೋರಿಸಿ' ಕೊಡೋದಷ್ಟೇ!

ಈಗಾಗಲೇ ದೇಶಕ್ಕೆ ಒಪ್ಪಂದದಿಂದ ಆಗುವ ಪ್ರಯೋಜನ ಕಾಣಲಾರಂಭಿಸಿದೆ. ಲಕ್ನೋ ವಿಮಾನ ನಿಲ್ದಾಣಕ್ಕೆ ಮಾಜಿ ಪ್ರಧಾನಿ ಚೌಧರಿ ಚರಣ ಸಿಂಗ್‌ರ ಹೆಸರನ್ನಿಡಲಾಗಿದೆ.

ಹಾಗಾಗಿ ಅಣು ಒಪ್ಪಂದಕ್ಕೆ ಚರಣ ಸಿಂಗ್‌ರ ಮಗ ರಾಷ್ಟ್ರೀಯ ಲೋಕದಳದ ಅಜಿತ್‌ಸಿಂಗ್ ಮತ್ತು ಅವರ ಪಕ್ಷದ ಬೆಂಬಲ ಸಿಗಬಹುದು.

ಸಿಬು ಸೋರನ್ ಅಂತ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಮುಖಂಡರು ಇದ್ದರು. ಯುಪಿಎ ಸರ್ಕಾರದಲ್ಲಿ ಕಲ್ಲಿದ್ದಲು ಮಂತ್ರಿಯಾಗಿದ್ದರು. ಹಳೆಯ ಕೊಲೆ ಪ್ರಕರಣವೊಂದರ ಸಂಬಂಧ ಅವರಿಂದ ರಾಜೀನಾಮೆ ಪಡೆಯಲಾಗಿತ್ತು. ಅಣು ಒಪ್ಪಂದದ ದೆಸೆಯಿಂದಾಗಿ ಮತ್ತೆ ಅವರು ಕಲ್ಲಿದ್ದಲು ಮಂತ್ರಿಯಾಗಬಹುದು.

ಅಣು ಒಪ್ಪಂದದಿಂದ ದೇಶದ ಸ್ವಾತಂತ್ರ್ಯ ಹಾಳಾದರೇನು? ನಮ್ಮ ಹಲವು ಎಂ.ಪಿ.ಗಳ ಸ್ವಾತಂತ್ರ್ಯ ಇನ್ನಷ್ಟು ಹೆಚ್ಚಾಗುವ ಅನುಕೂಲವಂತೂ ಇದ್ದೇ ಇದೆ. ಬೇಕಾದರೆ ಇಲ್ಲಿ ನೋಡಿ.


ಈ ಪರಿ ಸ್ವಾತಂತ್ರ್ಯ

ರಾಜೀವ್ ರಂಜನ್ ಅಲಿಯಾಸ್ ಪಪ್ಪು ಯಾದವ್ ಅಂತ ಆರ್‌ಜೆಡಿ ಪಕ್ಷದ ಸಂಸದ. ಬಿಹಾರದಲ್ಲಿ ಒಬ್ಬ ಜನಪರ ಹೋರಾಟಗಾರರೂ, ಸಿಪಿಐ(ಎಂ) ಪಕ್ಷದ ಶಾಸಕರೂ ಆಗಿದ್ದ ಅಜಿತ್ ಸರ್ಕಾರ್‌ರವರ ಕೊಲೆ ಪ್ರಕರಣದಲ್ಲಿ ಶಿಕ್ಷೆ ಅನುಭವಿಸುತ್ತಾ ಇರುವ ಈ ಮನುಷ್ಯನಿಗೆ ಈಗ ಸಂಸತ್‌ಗೆ ಬಂದು 'ಸರ್ಕಾರದ ಪರವಾಗಿ' ಮತ ಚಲಾಯಿಸುವ ಸ್ವಾತಂತ್ರ್ಯ ಸಿಕ್ಕಿದೆ. ಅದೇ ರೀತಿ ಸಿಪಿಐ(ಎಂ.ಎಲ್) ಮುಖಂಡರೂ, ಜವಹರ್ ಲಾಲ್ ನೆಹರೂ ವಿಶ್ವವಿದ್ಯಾಲಯದ ಮುಖಂಡರೂ ಆಗಿದ್ದ ಚಂದ್ರಶೇಖರ್ ಅವರನ್ನು ಕೊಂದ ಆರೋಪ ಎದುರಿಸುತ್ತಿರುವ ಸಂಸದ ಮಹಮದ್ ಶಹಾಬುದ್ದೀನ್ ಅವರಿಗೆ ಸಹ ಜೈಲಿನಿಂದ ಸಂಸತ್ತಿಗೆ ಬಂದು ಹೋಗುವ ಸ್ವಾತಂತ್ರ್ಯ.

ಮತ್ತೊಬ್ಬರು ಸೂರಜ್ ಬಾನ್ ಅನ್ನುವ ಸಂಸದ ಕೊಲೆ ಪ್ರಕರಣವೊಂದರಲ್ಲಿ ಅಪರಾಧಿ ಎಂದು ತೀರ್ಮಾನವಾಗಿ ಜೈಲಿನಲ್ಲಿದ್ದ. ಅವನಿಗೂ ಇದೇ ಭಾಗ್ಯ.

ಇವರು ಅಪರಾಧಿಗಳಾಗಿದ್ದರೂ ಸಂಸತ್‌ನಲ್ಲಿ ಮತ ಚಲಾಯಿಸಬಹುದು ಅಂತ ಕಾನೂನು ಹೇಳಬಹುದು. ಆದರೆ ರಾಜಕೀಯ ನೈತಿಕತೆ ಅಂತ ಒಂದು ಇರಬೇಕಲ್ಲ. ದೇಶದ ಸ್ವಾತಂತ್ರ್ಯ, ಸಾರ್ವಭೌಮತೆಯನ್ನೇ ಒತ್ತೆ ಇಡಲು ನಿಂತಹವರಿಗೆ ಯಾವ ನೈತಿಕತೆ ಅಲ್ಲವೇ?

ಇನ್ನೂ ಸುದ್ದಿಗಳು ಬರುತ್ತಲೇ ಇವೆ. ಒಬ್ಬೊಬ್ಬ ಸಂಸದರ ಬೆಲೆ 10 ಕೋಟಿ ಯಿಂದ 25 ಕೋಟಿ ರೂಗಳಿಗಿಂತಲೂ ಇನ್ನೂ ಮೇಲೇರಿದೆ ಅಂತ ಸುದ್ದಿಗಳು ಹರಿದಾಡುತ್ತಿವೆ. ದೆಹಲಿ ಬಜಾರಿನಲ್ಲಿ ಬಿಕರಿಗೆ ಎಷ್ಟೆಷ್ಟೋ ಸಂಸದರು ನಿಂತಿದ್ದಾರೆಂಬಂತಹ ಪರಿಸ್ಥಿತಿ ರಾಜಕೀಯ ಅನೈತಿಕತೆಯ ಪ್ರತೀಕವಾಗಿದೆ.



...ರೈತರ ಹೋರಾಟ

ಪುಟ 2 ರಿಂದ

ಜನಸ್ತೋಮವನ್ನು ಉದ್ದೇಶಿಸಿ ಪ್ರಾಂತ ರೈತ ಸಂಘ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿರವರು ಮಾತನಾಡುತ್ತ ಅರ್ಥವಿಲ್ಲದ ಹೊಸ ಕೃಷಿ ನೀತಿಗಳು ಜಾರಿ ಬಂದಿದ್ದರಿಂದ ಕೃಷಿ ಕ್ಷೇತ್ರ ಅಧೋಗತಿಗೆ ಇಳಿದಿದೆ ಹೊಸ ಎಪಿಎಂಸಿ, ಮುಕ್ತ ಮಾರುಕಟ್ಟೆ ನೀತಿಗಳಿಂ ಕೃಷಿ ಕ್ಷೇತ್ರ ಸಂಕಷ್ಟದಲ್ಲಿ ಮುಳುಗಿದೆ. ಗೊಬ್ಬರ ಮತ್ತು ಬಿತ್ತನೆ ಬೀಜಗಳ ಮೇಲಿನ ಸಬ್ಸಿಡಿ ಕಡಿತ ಮತ್ತಿತ ಕಾರಣದಿಂದ ಕೃಷಿಯು ವಿನಾಶದ ಹಂಚಿಗೆ ಹೋಗಿ ಎಂದು ವಿವರಿಸಿದರು.

ದೇಶದಲ್ಲಿ ಆಹಾರ ಸಮಸ್ಯೆ ತೀವ್ರಗೊಂಡಿದೆ ದಿನೇ ದಿನೇ ಏರುತ್ತಿರುವ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ, ಜತೆಗೆ ಅಗತ್ಯ ವಸ್ತುಗಳ ಬೆ ಗಗನಕ್ಕೇರುತ್ತಿವೆ. ಹೀಗಾಗಿ ಬಡವರಿಗೆ ಬಿಪಿಎಲ್ ಕಾರ್ಡುಗಳನ್ನು ಶೀಘ್ರವಾಗಿ ವಿತರಿಸಬೇಕು ಕೋಲಾರ ಜಿಲ್ಲೆಯಲ್ಲಿ ಮಳೆ ಅಭಾವ ಇದ್ದು, ಬಿತ್ತನೆ ಮಾಡದೇ ರೈತರು ಸಂಕಷ್ಟದಲ್ಲಿದ್ದಾರೆ. ಆದ್ದರಿಂದ ಜಿಲ್ಲೆಯನ್ನು ಬರಪೀಡಿತ ಜಿಲ್ಲೆ ಎಂದು ಘೋಷಿಸಬೇಕೆಂದು ಬಯ್ಯಾರೆಡ್ಡಿರವರ ಆಗ್ರಹಿಸಿದರು.

ಸಾವಿರಾರು ರೈತರ ಪ್ರತಿಭಟನೆಯ ನೇತೃತ್ವವನ್ನು ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಪಿ.ಆರ್.ಸೂರ್ಯನಾರಾಯಣ, ಕೋಲಾರ ತಾಲ್ಲೂಕು ಅಧ್ಯಕ್ಷ ಹೋಳೂರು ಶಂಕರ್ ಕಾರ್ಯದರ್ಶಿ ಟಿ.ಎಂ.ವೆಂಕಟೇಶ್ ಮುಖಂಡರಾದ ವೀರಪ್ಪರೆಡ್ಡಿ, ಎಲ್.ರಾಮಚಂದ್ರ ಕೃಷ್ಣೇಗೌಡ, ಮುನಿವೆಂಕಟಸ್ವಾಮಿ, ಗೋವಿಂದಪ್ಪ ಗಂಗಪ್ಪ, ಕುರ್ಕಿ ದೇವರಾಜ್ ಪಿ.ಆರ್.ನವೀನ್‌ಕುಮಾರ್ ಮತ್ತಿತರರು ವಹಿಸಿದ್ದರು.

ವರದಿ: ಎಂ. ವಿಜಯಕೃಷ್ಣ

'ತತ್ವ - ಸಿದ್ಧಾಂತ'ಗಳ ದಿವ್ಯ ದರ್ಶನ

ಶ್ರೀ

ಇತ್ತೀಚಿಗೆ ರಾಜಕೀಯದಲ್ಲಿ 'ತತ್ವ' 'ಸಿದ್ಧಾಂತ' ಎಂಬ ಪದಗಳ ಬಳಕೆ ಜಾಸ್ತಿಯಾಗಿದೆ ಅದರ 'ಅರ್ಥ' ಏನೆಂದು ತಿಳಿಯುವ ಕುತೂಹಲವಾಯಿತು. ಸೀದಾ ನಮ್ಮ ಗುರುಗಳಾದ ಪಂಡಿತರ ಮನೆಗೆ ಹೋದೆ. ಅವರನ್ನು "ಗುರುಗಳೇ, 'ತತ್ವ', 'ಸಿದ್ಧಾಂತ' ಪದಗಳ ಅರ್ಥ ವಿವರಿಸಿ ಎಂದು ಕೇಳಿದೆ. ಪಂಡಿತರು ನಿವೃತ್ತರಾದ್ದರಿಂದ ಬಿಡುವಾಗಿದ್ದರು. ಆದರದಿಂದ ನನ್ನನ್ನು 'ಕೂತ್ಕೊಳಪ್ಪ, ಕೂತ್ಕೋ,' ಅಂತ ಉಪಚರಿಸಿ, ಅವರ ಶ್ರೀಮತಿಗೆ 'ಲೇ, ಇವಳೇ, ಅಪರೂಪಕ್ಕೆ ನನ್ನ ಶಿಷ್ಯ ಬಂದಿದ್ದಾನೆ ನೋಡು, ಇಬ್ರಿಗೂ ಕಾಫಿ ತಗೊಂಬಾ' ಎಂದು ಹೇಳಿ, ನೋಡು ,"ತಸ್ಯ ಬಾವ: ಇತಿ ತತ್ವ:", ಎಂದರೆ ಪರಮಾತ್ಮನ ಸ್ವರೂಪವೇ ಆಗಿರುವ ಆತ್ಮನ ಸ್ವರೂಪ, ಎಂದರೆ ಪರಮ ಸತ್ಯ. ಸಿದ್ಧಾಂತ ಎಂದರೆ ಸ್ಥಾಪಿತ ತತ್ವ......, ಎಂದು ವಿವರಿಸುತ್ತಿದ್ದರು. ಅಷ್ಟರಲ್ಲಿ, ಅವರ ಪತ್ನಿ ಚಾಮುಂಡೇಶ್ವರಿ ಅವತಾರ ತಾಳಿ, ಎರಡು ಲೋಟ ತಂದು ನಮ್ಮ ಮುಂದೆ ಕುಕ್ಕಿದರು. ಗಣಿ ಆಳದಲ್ಲಿ ನಿಕ್ಷೇಪದಂತೆ, ಆ ಲೋಟದ ತಳದಲ್ಲಿ ಕಾಫಿ ಕಾಣಿಸುತ್ತಿತ್ತು.

"ಅಲ್ಲ, ಪೇಟೇಲಿ ಪದಾರ್ಥಗಳ ಬೆಲೆ ಎಷ್ಟೆಷ್ಟು ಏರುತ್ತಾ ಹೋಗುತ್ತಿದೆ ನಿಮ್ಗೇನಾದ್ರೂ ಜ್ಞಾನ ಇದ್ಯಾ? ಹಿಂಗೆ ಕೆಲಸಕ್ಕೆ ಬಾರದ ಹರಟೆ ಹೊಡೆಯಕ್ಕೆ ಬಂದೋರಿಗೆಲ್ಲ ಕಾಫಿ ಬಸಿತಾ ಇದ್ರೆ, ಸಂಸಾರ ನಿಭಾಯಿಸಿದಂಗೆ ಇದೆ". ಎಂದು ಚಾಮುಂಡೇಶ್ವರಿ ಅಂತಿಮ ಎಚ್ಚರಿಕೆ ನೀಡಿದರು.

"ಅಯ್ಯೋ, ಹರಟೆ ಅಲ್ವೇ, 'ತತ್ವ',' ಸಿದ್ಧಾಂತ'ದ ಬಗ್ಗೆ ಗಂಭೀರ ಚರ್ಚೆ" ಎಂದರು ಪಂಡಿತರು.

"ಸುಮ್ನೆ ಕೂತ್ಕಳ್ರೀ, 'ತತ್ವ', 'ಸಿದ್ಧಾಂತ'ದ 'ಅರ್ಥ' ನಿಮಗೇನು ಗೊತ್ತು? ಗೊತ್ತಿದ್ದಿದ್ರೆ, ನೀವು ಹೀಗ್ಯಾಕೆ ಇರ್‍ತಿದ್ರಿ?'' ಎಂದರು ಚಾಮುಂಡೇಶ್ವರಿ. "ಹಾಗಿದ್ದರೆ ನಿನಗೆ ಗೊತ್ತೋ?'' ಸವಾಲೆಸೆದರು ಪಂಡಿತರು.

"ಗೊತ್ತಿಲ್ಲದೇ ಏನ್ರೀ, 'ತತ್ವ' ಎಂದರೆ ಹಣ. 'ಸಿದ್ಧಾಂತ' ಎಂದರೆ ಅಧಿಕಾರ ಅಂತ ಅರ್ಥ? ಎಂದರು ಆಕೆ.

"ಛೇ, ಛೇ, ಛೇ, ಏನೇ ಇದು ಅನರ್ಥ?" ಪಂಡಿತರು ಹೌಹಾರಿದರು.

"ಅನರ್ಥ ಅಲ್ಲರೀ, ಇಂದಿನ ಅರ್ಥವೇ ಅದು. ನಮ್ಮ ಪಕ್ಷದ 'ತತ್ವ-ಸಿದ್ಧಾಂತ' ಒಪ್ಪಿ, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ನಮ್ಮ ಪಕ್ಷಕ್ಕೆ ಬಂದಿದ್ದಾರೆ ಎಂದು ಹೇಳುತ್ತಾರಲ್ಲ ಹಾಗಂದ್ರೇನು ಗೊತ್ತಾ? 'ಇಷ್ಟು ಹಣ (ತತ್ವ)ವನ್ನು ನಿನ್ನ ಮುಖದ ಮೇಲೆ ಬಿಸಾಕ್ತೀವಿ, ಇಂಥ ಅಧಿಕಾರ (ಸಿದ್ಧಾಂತ) ಸ್ಥಾನ ಕೊಡ್ತೀವಿ, ನಮ್ಮ ಪಕ್ಷಕ್ಕೆ ಬರ್‍ತಿಯೋ ಇಲ್ವೋ? ಜಲ್ದಿ ಹೇಳು, ಏನೋ ನೀನು ನಮ್ಮೋನು ಅಂತ ನಿಂಗೇ ಫಸ್ಟ್ 'ತತ್ವ-ಸಿದ್ಧಾಂತ'ದ ಡಬಲ್ ಬೆನಿಫಿಟ್ ಆಫರ್ ಕೊಟ್ಟಿದೀವಿ. ಬ್ಯಾಡ ಅಂದ್ರೆ ಹೇಳ್ ಬಿಡು, ಬರೀ ಒಂದಿಷ್ಟು 'ತತ್ವ' ಬಿಸಾಕಿದ್ರೆ ಸಾಕು ಅಯ್ತೊಂಡು , ನಮ್ಮ ಬಾಗಿಲಿಗೆ ಬರೋಕೆ ಬೇಕಾದಷ್ಟು 'ನಾಯಿಕರು' ಕಾಯ್ತಿದಾರೆ. ಅಂತ ಹೇಳ್ತಾರೆ. ಆಗ ಅಯ್ಯೋ, ಬಿಟ್ರೆ ಎರಡೂ ಇಲ್ದಂಗಾಗುತ್ತೆ ಅಂತ, ಆ ಪಕ್ಷದ 'ತತ್ವ-ಸಿದ್ಧಾಂತ' ಎರಡನ್ನೂ ಒಪ್ಪಿಕೊಂಡು ಬರುವವರನ್ನು ಆ ಪಕ್ಷದಲ್ಲಿ ಭವ್ಯವಾಗಿ ಸ್ವಾಗತಿಸಲಾಗುತ್ತದೆ. ಇವೆಲ್ಲ ಏನೂ ಗೊತ್ತಿಲ್ಲದಂಗೆ ಕೆಲಸಕ್ಕೆ ಬಾರದ ಹರಟೆ ಹೊಡಿತಾ ಕೂತ್ಕೋತೀರ." ಎಂದು ಹೇಳಿ ಚಾಮುಂಡೇಶ್ವರಿ ದೇವಿ ನಮಗೆ 'ತತ್ವ-ಸಿದ್ಧಾಂತ'ದ ದಿವ್ಯದರ್ಶನ ಮಾಡಿಸಿ, ಕಾಫಿ ಬಟ್ಟಲು ತೆಗೆದುಕೊಂಡು ಒಳಗೆ ಹೋದರು.

ಬಜೆಟ್: ಭರವಸೆಗಳ ಮಹಾಪೂರ ಜನರ ವಂಚಿಸಿದ ಸರ್ಕಾರ

ಎಸ್. ಪ್ರಸನ್ನಕುಮಾರ

ರ್ನಾಟಕ ರಾಜ್ಯದಲ್ಲಿ ಮೊದಲಬಾರಿಗೆ ಬಿಜೆಪಿ ರ್ಕಾರ ಅಧಿಕಾರಕ್ಕೆ ಬಂದಿದ್ದು ಇದು ಬಿಜೆಪಿಯ ೊದಲ ಬಜೆಟ್ ಆಗಿದೆ. ಯಡಿಯೂರಪ್ಪ ಕತವಾಗಿ 3ನೇ ಬಾರಿಗೆ ಬಜೆಟ್ ಮಂಡನೆ ಾಡಿದ್ದಾರೆ. ಹೇಗಾದರೂ ಅಧಿಕಾರಕ್ಕೆ ಬರಬೇಕೆಂಬ ಕಹತ್ವಾಕಾಂಕ್ಷೆಯೊಂದಿಗೆ ಹಲವು ಭರವಸೆಗಳನ್ನು ನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ್ದರು. ದರಲ್ಲಿ ಮುಖ್ಯವಾಗಿ ರೂ 2/-ಕ್ಕೆ ಅಕ್ಕಿ ನೀಡುವ ರವಸೆ ಹಾಗೂ ಬಡತನ ರೇಖೆಯ ಮಟ್ಟವನ್ನು . 30,000/- ಆದಾಯದ ಮಿತಿ ಏರಿಕೆಯು ಜನರ ಮನವನ್ನು ಸೆಳೆದಿದ್ದವು. ಈ ಎರಡು ವಿಚಾರಗಳ ಸ್ತಾಪವನ್ನು ಕೂಡ ಮಾಡದೇ ಜಾಣ ಮರೆವನ್ನು ಬಜೆಟ್‌ನಲ್ಲಿ ಯಡಿಯೂರಪ್ಪ ತೋರಿರುವುದು ದ್ದು ಕಾಣುತ್ತಿದೆ.

ಯುಪಚಾರ


ಅಭಿವೃದ್ಧಿಪರ ಮಾತುಗಳನ್ನು ಆಡಂಬರದ ಾತುಗಳಿಂದ ಪ್ರಚಾರ ಮಾಡಿದ್ದ ಬಿಜೆಪಿ ಈಗ ಜೆಟ್‌ನಲ್ಲಿಯೂ ಅಭಿವೃದ್ಧಿಯ ಬಗ್ಗೆ ಬರಿ ಿಳೆ ಮಾತುಗಳನ್ನು ಹೇಳಿದ್ದು ಬಿಟ್ಟರೇ ಭಿವೃದ್ಧಿಗೆ ಅಗತ್ಯವಾದ ಹಣ ಡುವಿಕೆಯಾಗಲಿ ಕೃಷಿ, ಕೈಗಾರಿಕೆಗಳ ಿವೃದ್ಧಿಗೆ ಬೇಕಾದ ಹಣ ಹಂಚಿಕೆ ಅಥವಾ ಣ್ಣೋಟವೆ ಕಾಣದಾಗಿದೆ.

ಬಿಜೆಪಿ ಸರ್ಕಾರ ಮಂಡಿಸಿದ ಈ ಮೊದಲ ಜೆಟ್‌ನಲ್ಲಿ ವಿವಿಧ ಜಾತಿ ಸಂಘಗಳಿಗೆ ಹಣ ಡುವ, ಹಾಗೂ ಗೋಶಾಲೆಗಳಿಗೆ ಬೆಂಬಲ ಗೂ ಮಹಾತ್ಮಾಗಾಂಧಿ ಹೆಸರಲ್ಲಿ ಗೋವು ಾರಿತ ಗ್ರಾಮೋದ್ಯೋಗ ಹೆಸರಲ್ಲಿ ೀಮೂತ್ರ ಹಾಗೂ ಸೆಗಣಿಗಳ ವ್ಯಪಾರ ಂದ್ರಗಳನ್ನು ಮೈಸೂರು, ಶಿವಮೊಗ್ಗಗಳಲ್ಲಿ ಆರಂಭ ಡುವಂತಹ ಸಂಘ ಪರಿವಾರವನ್ನು ಸಂಪ್ರೀತ ಳಿಸುವ ಯೋಜನೆಗಳನ್ನು ಘೋಷಣೆ ಡಲಾಗಿದೆ. ಸಂಸ್ಕೃತ ವಿಶ್ವವಿದ್ಯಾಲಯ ಹಾಗೂ ರ್ನಾಟಕ ಜ್ಞಾನ ಮತ್ತು ಉನ್ನತ ಶಿಕ್ಷಣ ಯೋಗದಂತಹ ಸಂಘ ಪರಿವಾರದ ಕೇಂದ್ರಗಳನ್ನು ುಸ್ಥುವ ಕೆಲಸಕ್ಕೆ ಗಮನ ನೀಡಲಾಗಿದೆ.

ತ್ತಲೆಯಲ್ಲಿ ವಿದ್ಯುತ್ ಉತ್ಪಾದನೆ

ರಾಜ್ಯದ ವಿದ್ಯುತ್; ನೀರಾವರಿ, ಕೈಗಾರಿಕೆ ವಣಿಗೆಗೆ ಅಗತ್ಯವಾದ ಹಣ ಹೂಡಿಕೆಗಳನ್ನು ರ್ಪಕವಾಗಿ ಮಾಡದೇ ಬಾಯುಪಚಾರಕ್ಕೆ ಮಿತವಾಗಿದ್ದಾರೆ. ಮುಂದಿನ ಐದು ವರ್ಷಗಳಲ್ಲಿ 00 ಮೆಗಾವ್ಯಾಟ್ ಹೆಚ್ಚುವರಿ ಉತ್ಪಾದಿಸುವ ತುಗಳನ್ನಾಡಿದ್ದಾರೆ. ಆದರೆ ಈಗ ರಾಜ್ಯದಲ್ಲಿ ದ್ಯುತ್ ಉತ್ಪಾದನಾ ಸಾಮರ್ಥ್ಯ 5600 ಮೆ.ವ್ಯಾ. ನ್ನು ಅದನ್ನು ಸಮರ್ಪಕವಾಗಿ ಬಳಸಲು ತ್ಯವಾದ ಸಂಪನ್ಮೂಲಗಳನ್ನು ನೀಡಲಾಗಿಲ್ಲ. ದ್ದಲು ಬಳಸಿ ಉತ್ಪಾದಿಸುವ ಶಾಖೋತ್ಪನ್ನ ದ್ಯುತ ಉತ್ಪಾದನೆಗೆ ಅಗತ್ಯವಾದ ಕಲ್ಲಿದ್ದಲು ರೈಕೆಯಾಗದೇ ರಾಯಚೂರು ಮುಂತಾದ ಕಡೆ ದ್ಯುತ ಉತ್ಪಾದನೆ ಕುಂಠಿತವಾಗುತ್ತಿರುವ ಪರಿಸ್ಥಿತಿ ಾಯಿಸಲು ಏನೇನು ಕ್ರಮಗಳನ್ನು ಕೈಗೊಳ್ಳಲು ಂದಾಗಿಲ್ಲ, ಬದಲಾಗಿ ಈ ವರ್ಷದಲ್ಲಿ 1000 ಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಉತ್ಪಾದನೆ ಡುವುದಾಗಿ ಘೋಷಣೆ ಮಾಡಲಾಗಿದೆ. ಆದರೆ 00 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು ಹಣ ಡಿಕೆ ಬಗ್ಗೆ ಯಾವುದೇ ನಿರ್ಧಿಷ್ಟ ಕ್ರಮಗಳು ಂಡಿಲ್ಲ, ಬದಲಾಗಿ ಖಾಸಗೀ ಸಹಭಾಗಿತ್ವದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಿಸುವುದಾಗಿ ಹೇಳಲಾಗಿದೆ. ಖಾಸಗೀರಂಗದ ಮೇಲೆ ವಿದ್ಯುತ್‌ಗಾಗಿ ಆಧಾರ ಪಡುವುದೆಂದರೇ ವಿದ್ಯುತ್ ಮತ್ತಷ್ಟು ದುಬಾರಿ ದರಕ್ಕೆ ಹೋಗುವುದೆಂದೇ ಸ್ಪಷ್ಟ.

ಕಳೆದ ಎರಡು ದಶಕಗಳಿಂದಲೂವಿದ್ಯುತ್ ಉತ್ಪಾದನೆಗೆ ಗತ್ಯವಾದ ಹಣ ಹೂಡಿಕೆಗಳನ್ನು ಸರಕಾರಗಳು ಮಾಡದೇ ಬರೀ ಭರವಸೆಗಳಿಗೆ ಸೀಮಿತವಾಗಿರುವುದೇ ಇಂದಿನ ವಿದ್ಯುತ್ ಕೊರತೆಗೆ ಮೂಲ ಕಾರಣವಾಗಿದೆ. ಕಳೆದ ಮೂರು ಬಜೆಟ್‌ಗಳನ್ನೂ ಮಂಡಿಸಿದ ಯಡಿಯೂರಪ್ಪ ಕೂಡ ಇಂತಹ ಪರಿಸ್ಥಿತಿಗೆ ಹೊಣೆಯಾಗಿದ್ದಾರೆ. ವಿದ್ಯುತ್ ಕೊರತೆ ಅನುಭವಿಸುತ್ತಿರುವ 10 ರಾಜ್ಯಗಳಲ್ಲಿ ಕರ್ನಾಟಕವೂ 8ನೇ ಸ್ಥಾನದಲ್ಲಿದೆ. ಆದರೇ ಪಶ್ಚಿಮ ಬಂಗಾಳ ರಾಜ್ಯವು ವಿದ್ಯುತ್ ರಂಗದಲ್ಲಿ ಮಿಗಿತಾಯ ಹೊಮದಿದ ರಾಜ್ಯಗಳ ಪಟ್ಟಿಯಲ್ಲಿರುವುದು ಆ ರಾಜ್ಯದ ಸಿಪಿಐ(ಎಂ) ನೇತೃತ್ವದ ಎಡರಮಗ ಸರ್ಕಾರದ ಅಭಿವೃದ್ಧಿಯ ಕುರಿತು ದೂರದೃಷ್ಟಿಗೆ ಸಾಕ್ಷಿಯಾಗಿದೆ.



ಇಂತಹ ಪರಿಸ್ಥಿತಿಗಳಲ್ಲಿ ಅಗ್ಗದ ಪ್ರಚಾರ ಗಿಟ್ಟಸಲು ರಾಜ್ಯದ 15 ಲಕ್ಷ ಪಂಪಸೆಟ್‌ಗಲಿಗೆ ಉಚಿತ ವಿದ್ಯುತ್ ಕೊಡುವುದಾಗಿ ಪ್ರಕಟಿಸಿದ್ದಾರೆ. ಆದರೇ ಉಚಿತ ವಿದ್ಯುತ್ ಉಚಿತವಲ್ಲ ಏಕೆಂದರೆ ಪಂಪ್‌ಸೆಟ್‌ಗಲಿಗೆ ಕಡ್ಡಾಯ ಮೀಟರ್ ಅಳವಡಿಕೆ ಮಾಡಿದರೇ ಮಾತ್ರ ಉಚಿತವೆಂಬುದು ಸೋಜಿಗವಾಗಿದೆ. ವಿಶ್ವಬ್ಯಾಂಕಿನ ನಿರ್ದೇಶನದ ಜಾಗತೀಕರಣ ನೀತಿಗಳ ಭಾಗವಾಗಿ ವಿದ್ಯುತ್ ರಂಗದಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮುಕ್ತ ಅವಕಾಶ ನೀಡಲು ಅವರ ಮೊದಲ ಷರತ್ತೇ ಈ ಮೀಟರಿಕರಣವಾಗಿದೆ.

ಬೀದಿಪಾಲು


ಇಂದಿನ ರಾಜ್ಯದ ವಿದ್ಯುತ್ ಪರಿಸ್ಥಿತಿಯಲ್ಲಿ ವಿದ್ಯುತ್ ಕೊರತೆಯಿಂದಾಗಿ ಲೋಡ್ ಶೆಡ್ಡಂಗ್ ಅನಿಯುಮಿತವಾಗಿ ಆರಂಭವಾಗಿದೆ. ಈಗಾಗಲೇ ಇಂಧನ ಖಾತೆ ಮಂತ್ರಿ ಈಶ್ವರಪ್ಪನವರು ವಿದ್ಯುತ್ ಲೋಡ್ ಶೆಡ್ಡಿಂಗ್ ಬಗ್ಗೆ ಪರಿಹಾರ ಕ್ರಮಗಳೇನೆಂದು ಕೇಳಿದ ಪ್ರಶ್ನೆಗೆ, ದೇವರೆ ಗತಿ ಎಂದು ಸಾರಿದ್ದಾರೆ. ಈ ಬಾರಿ ಮುಂಗಾರು ಮಳೆ ಕೊರತೆಯಿಂದಾಗಿ ಈಗಾಗಲೇ 124 ತಾಲೂಕುಗಳಲ್ಲಿ ಬಿತ್ತನೆ ಆಗದೇ ಬರದ ಕಾರ್ಮೋಡ ನಿರ್ಮಾಣವಾಗಿದೆ. ಇ ಹಿನ್ನಲೆಯಲ್ಲಿ ಉಚಿತ ವಿದ್ಯುತ್ ಅಲ್ಲ ಲೋಡ್ ಶೆಡ್ಡಿಂಗ್ ಮಾತ್ರ ಬಿಜೆಪಿಯಿಂದ ಕಾರ್ಯಸಾಧ್ಯ. ಹೀಗಾಗಿ ವಿದ್ಯುತ್ ಉತ್ಪಾದನೆಗೆ ಸಂಪನ್ಮೂಲ ಸಂಗ್ರಹ ಹಾಗೂ ಹನ ಹೂಡಿಕೆ ಮಾಡಲು ಕಣ್ಣೋಟವೇ ಇಲ್ಲದ ಈ ಬಜೆಟ್ ಕರ್ನಾಟಕವನ್ನು ಕಗ್ಗತ್ತಲಿಗೆ ತಳ್ಳುವಂತಹದ್ದಾಗಿದೆ. ವಿದ್ಯುತ್ ಕೊರತೆಯ ತೀವ್ರತೆಯೂ ಖಂಡಿತವಾಗಿಯೂ ರಾಜ್ಯ ಕೈಗಾರಿಕೆಗಳು ತೀವ್ರ ಸಂಕಷ್ಟಕ್ಕೆ ಗುರಿಯಾಗಿ ಸಾವಿರಾರು ಸಂಖ್ಯೆಯಲ್ಲಿ ಮುಚ್ಚಿ ಹತ್ತಾರು ಸಾವಿರ ಕಾರ್ಮಿಕರು ಬೀದಿ ಪಾಲಾಗುವ ಅಪಾಯಗಳು ಮುಂದಿವೆ.

ರೈತನ ಮರೆತರು

ತೀವ್ರ ಬರಗಾಲ ರಾಜ್ಯವನ್ನು ಆವರಿಸಿರುವ ಈ ಸಂದರ್ಭದಲ್ಲಿ ರಾಜ್ಯ ಬಜೆಟ್‌ನಲ್ಲಿ ರೈತರ ಮೇಲೆ ಪ್ರಮಾಣ ಮಾಡಿ ಅಧಿಕಾರಕ್ಕೆ ಬಂದಿರುವ ಈ ಸರ್ಕಾರ ರಾಜ್ಯದ ರೈತಾಪಿ ಜನ ಬರಗಾಲದಿಂದ ನರಳದಂತೆ ಉಪಶಮನದ ದಿಟ್ಟ ಕ್ರಮಗಳನ್ನೇನೂ ಕೈಗೊಳ್ಳದಿರುವುದು ಆತಂಕಕಾರಿಯಾಗಿದೆ. ಬರಗಾಲದಲ್ಲೂ ಅಗ್ಗದ ಪ್ರಚಾರದ ಸುಗ್ಗಿ ಮಾಡಿಕೊಳ್ಳಲು ಬಿಜೆಪಿ ಸರ್ಕಾರವು 50 ಲಕ್ಷ ರೈತ ಕುಟುಂಬಗಳಿಗೆ ಒಂದು ಕುಟುಂಬಕ್ಕೆ ರೂ 1000/- ನೀಡುವುದಾಗಿ ಹೇಳಿದ್ದಾರೆ. ಒಂದು ಸಾವಿರ ರೂಪಾಯಿಗಳಿಂದ ರೈತರ ಒಂದು ವರ್ಷದ ಸಂಕಷ್ಟ ಬಗೆಹರಿಯುಲು ಸಾಧ್ಯವೇ? ವಾಸ್ತವದಲ್ಲಿ ಬರಗಾಲ ಎದುರಿಸಲು ಹಳ್ಳಿಗಳಲ್ಲಿ ಜನ ಮತ್ತು ಜಾನುವಾರುಗಳಿಗೆ ಅಗತ್ಯವಾಗಿರುವ ಮೇವಿನ ಸಮರ್ಪಕ ವ್ಯವಸ್ಥೆ, ಕೂಲಿ ಕೆಲಸದ ಉದ್ಯೋಗ ಅವಕಾಶಗಳನ್ನು ಒದಗಿಸಲು ಅಗತ್ಯವಾದ ಕಾಮಗಾರಿಗಳ ಯೋಜನೆ ಮುಂತಾಗಿ ಪ್ರಸ್ತಾಪವೂ ಇಲ್ಲ. ಸಾವಯುವ ಕೃಷಿ ಮಾಡುವ ರೈತರಿಗೆ ರೂ 2000/- ನೀಡುವುದಾಗಿ ಘೋಷಣೆ ಮಾಡಿರುವ ಸರ್ಕಾರವು ಮಳೆಯೇ ಇಲ್ಲದೇ ಬಿತ್ತನೆಯೂ ಮಾಡದಿರುವಾಗ ಸಾವಯುವ ಕೃಷಿಗೆ ಅವಕಾಶವಾದರೂ ಎಲ್ಲಿ?

ಉದ್ಯೋಗವೆಲ್ಲಿ?

ಮುಂದಿನ ಐದು ವರ್ಷಗಳಲ್ಲಿ 10ಲಕ್ಷ ಉದ್ಯೋಗ ಸೃಷ್ಟಿಮಾಡುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಆದರೇ ಹೇಗೆ? ಯಾವ ಕೈಗಾರಿಕೆಗಳ ಮೂಲಕ, ಯಾವ ಯೋಜನೆಗಳ ಮೂಲಕ ಎಂಬುದು ಮಾಹಿತಿ ಇಲ್ಲವೇ ಇಲ್ಲ. ನಿರುದ್ಯೋಗಿ ಯುವಜನರಿಗೆ ನಿರುದ್ಯೋಗ ಭತ್ಯೆಯ ಭರವಸೆ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದರೂ ಅದರ ಸುಳಿವೇ ಇಲ್ಲ.



ಅರೆಕಾಸು

ಮೂಲ ಸೌಕರ್ಯಗಳ ಅಭಿವೃದ್ಧಿ ವಿಚಾರದಲ್ಲಿ ಬೆಂಗಳೂರು ನಗರದಲ್ಲೇ ಮೂವತ್ತಾರು ಸಾವಿರ ಕೋಟಿ ಅಗತ್ಯವಿದೆ ಎಂದು ಹೇಳಿದ ಸರ್ಕಾರ 1800 ಕೋಟಿ ನೀಡುತ್ತಿರುವುದಾಗಿ ಹೇಳಿದ್ದು, ಅದರಲ್ಲಿ ಬಿಬಿಎಂಪಿ(ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ)ಯ ಆಡಳಿತ ವೆಚ್ಚಗಳ ಕೊರತೆ ನೀಗಿಸಲು ರೂ 300/- ಒಳಗೊಂಡು 1800 ಕೋಟಿ ನಿಗದಿ ಮಾಡಿದ್ದಾರೆ. 36000/- ಕೋಟಿ ಎಲ್ಲಿ 1800/- ಕೋಟಿ ಎಲ್ಲಿಗೆ? ಬಕಾಸುರನ ಹೊಟ್ಟೆಗೆ ಅರಕಾಸಿನ ಮಜ್ಜಿಗೆ ಎನ್ನುವಂತಾಗಿದೆ. ಬಿಜೆಪಿಯ ಅಭಿವೃದ್ಧಿ ಮಂತ್ರ ರಾಜ್ಯಸರ್ಕಾರ ಹಣ ಹೂಡದೇ ಖಾಸಗೀ ಸಹಭಾಗಿತ್ವ ಹೆಸರಲ್ಲಿ ರಾಜ್ಯದ ಇಡೀ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಖಾಸಗೀ ಬಂಡವಾಳಗಾರರ ಮೇಲೆ ಆಧಾರಪಟ್ಟು ಬಂಡವಾಳಗಾರರ ಲಾಭಕೋರತನಕ್ಕೆ ರಾಜ್ಯದ ಮೂಲಭೂತ ಸೌಕರ್ಯಗಳನ್ನು ತೆರೆದಿಡುವುದೇ ಆಗಿದೆ. ಯಾವ ಬಂಡವಾಳಗಾರರ ಲಾಭವಿಲ್ಲದೇ ಇಂತಹ ತೊಡಗಲು ಸಾಧ್ಯ?

ರಾಜ್ಯದ ದುಡಿಯುವ ಕಾರ್ಮಿಕ ವರ್ಗದ ಬಗ್ಗೆ, ಬೀಡಿ ಕಾರ್ಮಿಕರ, ದರ್ಜಿಗಳು ಮತ್ತಿತರ ಕಾರ್ಮಿಕ ಕಲ್ಯಾಣಕ್ಕಾಗಿ ಕೇವಲ ರೂ 5ಕೋಟಿ ಮಾತ್ರ ಪ್ರಕಟಿಸಿರುವುದು ಕಾರ್ಮಿಕರ ಕಲ್ಯಾಣದ ಬಗ್ಗೆ ಬಿಜೆಪಿ ಸರ್ಕಾರಕ್ಕಿರುವ ಕಾಳಜಿಯ ಬಯಲು ಮಾಡುತ್ತದೆ. ರಾಜ್ಯ ಸರ್ಕಾರದ ಬಜೆಟ್‌ನ ಒಟ್ಟು 55313.41 ಕೋಟಿಗಳಲ್ಲಿ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೆ ರೂ 5ಕೋಟಿ ಮಾತ್ರ.

ಸರಾಯಿ ಹೋಗಿ ಬ್ರಾಂಡಿ ಬಂತು

ಮತ್ತೊಂದೆಡೆ ಸರಾಯಿ ನಿಷೇಧದ ಬಗ್ಗೆ ಜಂಭದಿಂದ ಮೆರೆಯುತ್ತಿರುವ ಬಿಜೆಪಿಯು ಈಗ ಸರಾಯಿ ಬದಲಾಗಿ ಚೀಪ್‌ಲಿಕ್ಕರ್ ವ್ಯಾಪಾರವನ್ನು ಉತ್ತೆಜಿಸಲು 1000 ಚಿಲ್ಲರೆ ಮದ್ಯದಂಗಡಿಗಳನ್ನು ಹಾಗೂ 500 ಬಾರ್ ಅಂಡ್ ರೆಸ್ಟೋರೆಂಟ್‌ಗಳನ್ನು ತೆರೆಯುಲು ಅವಕಾಶ ಮಾಡಿಕೊಡುವುದಾಗಿ ಪ್ರಕಟಿಸಲಾಗಿದೆ. ಸರಾಯಿ ಹೋಯಿತು ಲಿಕ್ಕರ್ ಮತ್ತು ಕಳ್ಳಭಟ್ಟಿ ಬಂತು ಡುಂ-ಡುಂ ಎಂದಂತಾಗಿದೆ.

ಶಿಕ್ಷಣ ವ್ಯಾಪಾರ

ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಗಳಲ್ಲಿ ದುಬಾರಿ ಶಿಕ್ಷಣ ಶುಲ್ಕಗಳನ್ನು ಕಡಿಮೆ ಮಾಡುವುದಾಗಲಿ ಸರ್ಕಾರವೇ ವೃತ್ತಿಶಿಕ್ಷಣ ಮುಂತಾಗಿ ಜವಾಬ್ದಾರಿ ವಹಿಸುವ ಬಗ್ಗೆಯಾಗಲೀ ಚಕಾರವೇ ಇಲ್ಲ. ಆದರೇ ಖಾಸಗೀ ವಿಶ್ವವಿದ್ಯಾಲಯಗಳ ಪ್ರೋತ್ಸಾಹಿಸಲು ಕಂಕಣ ಬದ್ಧವಾಗಿರುವುದಾಗಿ ಪ್ರಕಟಿಸಲಾಗಿದೆ. ಅಂದರೆ ಖಾಸಗೀ ವಿಶ್ವವಿದ್ಯಾಲಯಗಳ ಮೂಲಕ ಶಿಕ್ಷಣ ದುಭಾರಿ ವ್ಯಾಪಾರಿ ಸರಕಾಗಿಸಲು ಬಿಜೆಪಿ ಸರ್ಕಾರದ ಆದ್ಯತೆ ಎಂಬುದು ನಿಶ್ಚಿತವಾಗಿದೆ.

ಮಹಿಳಾ ಅಭಿವೃದ್ಧಿ ಎಂದರೆ ಅಗ್ಗದ ಪ್ರಚಾರದ 'ಭಾಗ್ಯಲಕ್ಷ್ಮೀ' ಯೋಜನೆಯೊಂದೇ ಆಗಿದೆ. ತಕ್ಷಣಕ್ಕೆ ಕೈಗೇನೂ ದೊರೆಯದೇ ಮಗು 18 ವರ್ಷಗಳ ನಂತರ ಪಡೆಯುಬಹುದಾದ ಯೋಜನೆಯನ್ನೇ ಭಾರಿ ಪ್ರಚಾರಕ್ಕೆ ಬಳಸಲಾಗುತ್ತಿದೆ. ಮಹಿಳಾ ಸಬಲೀಕರಣಕ್ಕೆ ನಿರ್ಧಿಷ್ಟ ಕ್ರಮಗಳೇನೂ ಇಲ್ಲ. ಸ್ತ್ರೀ ಶಕ್ತಿ ಗುಂಪುಗಳಿಗೆ ಅನುದಾನ ಹೆಚ್ಚಳವೇನೂ ಇಲ್ಲ. ಬದಲಾಗಿ ತಾಲೂಕಿಗೊಂದು 'ಸ್ತ್ರೀ ಶಕ್ತಿ ಭವನ'ವೇ ಮಹಿಳಾ. ಸಬಲೀಕರಣವೆಂಬಂತೆ ಬಿಂಬಿಸಲಾಗುತ್ತಿದೆ.

ಗ್ರಾಮ ಪಂಚಾಯತಿ ಸದಸ್ಯರಾದ 90,000 ಸದಸ್ಯರಿಗೆ ಮಾಸಿಕ ಸಂಭಾವನೆಯು ಚುನಾವಣೆಗೆ ಕಾರ್ಯಕರ್ತರನ್ನು ಸೃಷ್ಟಿಸುವ ತಂತ್ರವೇ ಹೊರತು ಗ್ರಾಮೀಣ ಸಮಗ್ರ ಅಭಿವೃದ್ಧಿಗೆ ಮೂಲಭೂತ ಸೌಕರ್ಯಗಳ ಒದಗಿಸಲು ಹಾಗೂ ರೈತರ ಏಳಿಗೆಗೆ ಸಹಾಯವಾಗುವುದಿಲ್ಲ. ಒಟ್ಟಾರೆಯಾಗಿ ಬರೀ ಭರವಸೆಗಳ ಬಜೆಟ್ ಬಿಜೆಪಿ ಬಜೆಟ್. ವಿದ್ಯುತ್, ಕೃಷಿ, ಕೈಗಾರಿಕೆ ಅಭಿವೃದ್ಧಿಗೆ ಮಾರಕವಾಗಿರುವ ಬಜೆಟ್. ಕೇವಲ ಮೂಗಿಗೆ ತುಪ್ಪಹಚ್ಚಿ ದಾರಿತಪ್ಪಿಸುವ ಬಜೆಟ್‌ನ್ನು ಜನರ ಹೋರಾಟಗಳಿಂದ ಹಿಮ್ಮೆಟ್ಟಿಸುವುದೊಂದೇ ದಾರಿ.

ಸಿಂಧನೂರು : ದೇವದಾಸಿಯರ ಪ್ರತಿಭಟನೆ

ಸತತ 2 ವರ್ಷಗಳಿಂದ ಹೋರಾಟದ ಹಾದಿ ಹಿಡಿದಿರುವ ಕರ್ನಾಟಕ ರಾಜ್ಯ ದೇವದಾಸಿ ಮಹಿಳಾ ವಿಮೋಚನಾ ಸಂಘಟನೆ ಸರ್ಕಾರದ ಹುಸಿ ಭರವಸೆಗೆ ಬೇಸತ್ತು, ರಾಜ್ಯ ಸಮಿತಿ ಸಭೆ ಸೇರಿ ಚರ್ಚಿಸಿ, ತನ್ನ ಕೆಳಗಿನ ಘಟಕಗಳಿಗೆ ಜುಲೈ 10 ಮತ್ತು 11, 2008 ರಂದು ಮುಷ್ಕರಕ್ಕೆ ಧುಮುಕುವಂತೆ ಕರೆ ನೀಡಿತ್ತು. ಈ ಕರೆಯ ಮೇರೆಗೆ 05.07.2008ರಂದು ತಾಲ್ಲೂಕು ಸಮಿತಿ ಸಭೆ ಸೇರಿ ಚರ್ಚಿಸಿ, 10.07.2008ರಂದು ಒಂದು ದಿನದ ಧರಣ ಮಾಡಲು ತೀರ್ಮಾನಿಸಿತು.

10.07.08ರಂದು ದೇವದಾಸಿಯರು ತಮ್ಮ ಕೆಲಸ ಬೊಗಸೆ ಬದಿಗೊತ್ತಿ ಸಿಂಧನೂರು ಪ್ರವಾಸಿ ಮಂದಿರದಲ್ಲಿ ಬಂದು ಸೇರ ತೊಡಗಿದರು; ಮುಂಜಾನೆ 11.30ಕ್ಕೆ ಪ್ರವಾಸಿ ಮಂದಿರದ ಮೆರವಣಿಗೆಯ ಮೂಲಕ ಘೋಷಣೆಯನ್ನು ಕೂಗುತ್ತಾ ತಹಶೀಲ್ ಆಫೀಸಿಗೆ ಬಂದರು. ಇವರು ಬರುವಷ್ಟರಲ್ಲಿ ಇವರಿಗಾಗಿ ಪಿಳಿ ಪಿಳಿ ಕಣ್ಣು ಬಿಡುತ್ತಾ ಕಾದು ತಲೆ ಎತ್ತಿ ನಿಂತಿದ್ದ ಶಾಮಿನಾರು ಮೆರವಣಿಗೆಕಾರರು ಬಂದು ತನ್ನ ಎದೆಯಂಗಳದ ತುಂಬಿ ಕುಂತಾಗ ಮುಖ ಹರಳಿ ಕುಲು ಕುಲು ನಗುತ್ತಾ ಶೋಭೆಗೊಂಡಿತು.

ಧರಣೆಯಲ್ಲಿ ಕುಳಿತ ದೇವದಾಸಿಯವರ ಮಧ್ಯೆ ರಾಜ್ಯ ಸಮಿತಿ ಗುರುತಿಸಿ ಸರ್ಕಾರದ ಮುಂದಿಟ್ಟ 14 ಬೇಡಿಕೆಗಳ ಬಗ್ಗೆ ಮಧ್ಯಾಹ್ನ 1.00 ಗಂಟೆಗೆ ಪ್ರಾರಂಭದ ಚರ್ಚೆ ಸಾಯಂಕಾಲ 5.00 ಗಂಟೆಯವರೆಗೆ ನಡೆಯಿತು. ಈ ಧರಣೆ ನಿರತರನ್ನು ಉದ್ದೇಶಿಸಿ, ಮಾತನಾಡುತ್ತಾ ಕಾಂ:ನಾರಾಯಣ ಕಿಲ್ಲೇದ್, ಕೃಷಿ ಕೂಲಿಕಾರರ ಸಂಘಟನೆಯ ಬೆಂ... ಸೂಚಿಸಿದರು. ಡಿವೈಎಫ್ಐನ ಕಾಂ:ಅಪ್ಪಣ್ಣ ಕಾಂ... ಕಾಂ: ಚಂದ್ರಪ್ಪ, ಮಹೇಶ ಮತ್ತು ಹಮಾ... ಸಂಘಟನೆಯ ಅಧ್ಯಕ್ಷರಾದ ಕಾಂ:ಯಂಕಪ್ಪ ಮುಖಂಡ ಶಂಕ್ರಪ್ಪ ಧರಣೆಯಲ್ಲಿ ಭಾಗವ... ಬೆಂಬಲಿಸಿದರು. ಕಾಂ:ನರಸಿಂಹಪ್ಪ ನೇತ... ವಹಿಸಿದ್ದರು.

ಲಿಂಗಸ್ಗೂರು : ದೇವದಾಸಿಯರ ಹೋರಾಟ



ಸಾವಿರಾರು ವರ್ಷಗಳಿಂದ ದೇವದಾಸಿ ಪಟ್ಟ ಕಟ್ಟಿಸಿಕೊಂಡ ಮಹಿಳೆಯರ ಬದುಕಿನಲ್ಲಿ ನೂರಾರು ನೋವುಗಳು ಮೊಳೆತು ಸಸಿಯಾಗಿ ಗಿಡವಾಗಿ ಬೆಳೆದು ಮರವಾಗಿ ಬಲಿತು, ಅವರ ಜೀವನವನ್ನೇ ನರಕಮಯಗೊಳಿಸಿವೆ. ಅಂತಹ ನರಕ ಸದೃಶ್ಯ ನೋವುಗಳ ಹೊಂಡದಲ್ಲಿ ಈಜಿ ತಮ್ಮ ಜೀವ ಸವೆಸಿದರೂ ಕಾಳಜಿ. ತೋರದ ಸರ್ಕಾರಕ್ಕೆ ಧಿಕ್ಕಾರ ಹಾಕುತ್ತಿರುವರು. ನೋವು ತುಂಬಿದ ದುರ್ಗಮದ ದಾರಿಯಲ್ಲಿ ಕೆಂಡ ದುಂಡೆಗಳ ನಡುವೆ ಸಾಗಿ ಬಂದ ಅವರ ರೊಚ್ಚಿನ ಘೋಷಣೆ ಮಹಿಳೆಯರಲ್ಲಿ ಕಂಡು ಬಂತು.

ಲಿಂಗಸ್ಗೂರಿನ ಗುರುಭವನದಿಂದ 180 ರಿಂದ 200 ಜನರ ಮೆರವಣಿಗೆ ಕಾಂ: ಚಾಂದ್ಬಿಯವರ ಮುಖಂಡತ್ವದಲ್ಲಿ ಸಾಗಿತು. ಮೆರವಣಿಗೆಕಾರರ ಘೋಷಣೆಗಳು ಮೊಳಗುತ್ತಿದ್ದವು. ಕಾಂ: ಚಾಂದ್ಬಿ ಮತ್ತು ಕಾಂ:ಸರಸ್ವತಿ ಪಾದರಸದಂತೆ ಓಡಾಡಿ ಸಂಬಾಳಿಸುವ ಅವರ ಚಾಣಾಕ್ಷತೆ ಬೀದಿ ದೀಪದಂತೆ ಪಿಳಿ ಪಿಳಿ ಕಣ್ಣು ಬಿಡುತ್ತಾ ದಾರಿಯುದ್ದಕ್ಕೂ ಎಡ-ಬಲಕ್ಕೆ ನೋಡುತ್ತಾ ನಿಂತವರ ಮುಖ... ಆಶ್ಚರ್ಯ ಮೂಡಿಸಿತ್ತು. ಕಾಂ: ಪದ್ಮ ಸೇನಾನಿಯ... ಮೆರವಣಿಗೆಕಾರರ ಮುಂದೆ ಸಾಗಿದ್ದಳು. ಬ... ಸ್ಟಾಂಡಿನ ಮೂಲಕ ಕೋರ್ಟಿನ ಮುಂದೆ ಹಾ... ತಹಶೀಲ್ ಆಫೀಸ್ ತಲುಪಿತು. ಕಾಂ:ಪದ್ಮ, ಕಾ... ನರಸಿಂಹಪ್ಪ, ಕಾಂ: ಶಿವಾನಂದ ಸಭೆಯನ್ನುದ್ದೇ... ಮಾತಾಡಿದರು. ಕಾಂ:ಚಾಂದ್ಬಿಯವರು ಮನವಿ... ಓದಿ ತಹಶೀಲ್ದಾರ್‌ರಿಗೆ ಒಪ್ಪಿಸಿದರು. ಕಾ... ಸರಸ್ವತಿಯವರು ವಂದಿಸಿದರು.

ವರದಿ:ನರಸಿಂಹಪ್ಪ, ಸಿಂಧನೂ...



ಕನಸಿಗೊಂದು ಗೂಡು ಕಟ್ಟುವವರಿಗಾಗಿ...

ಕೊಡಗು ಜಿಲ್ಲಾ ಕಟ್ಟಡ ಕಾರ್ಮಿಕರ ಸಂಘ(ರಿ), ವಿರಾಜಪೇಟೆ, ಇದರ ವಾರ್ಷಿಕ ಮಹಾಸಭೆಯು ದಿ:04.06.08ರಂದು ವಿರಾಜಪೇಟೆ ಪಟ್ಟಣ ಪಂಚಾಯಿತಿಯ ಸಭಾಂಗಣದಲ್ಲಿ ನಡೆಯಿತು.

'ನಮ್ಮ ಸುಂದರ ಸ್ವಪ್ನಗಳನ್ನು ಸಾಕಾರಗೊಳಿಸಲು ಮನೆ ಕಟ್ಟಿಕೊಡುವ ಕಟ್ಟಡ ಕಾರ್ಮಿಕರ ಬದುಕು ಬಹಳ ದುರ್ಬಲವಾಗಿದೆ. ಅವರ ಸಮಸ್ಯೆಗಳು ಹತ್ತು ಹಲವಾರು, ಅವರು ಕನಿಷ್ಠ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ ಎಂದು'



ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಪಟ್ಟಣ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ: ಕಾಂತಿ ಬೆಳ್ಯಪ್ಪನವರು ನುಡಿದರು.

ಇನ್ನೋರ್ವ ಅತಿಥಿಯಾಗಿ ಪಟ್ಟಣ ಪಂಚಾಯಿತಿಯ ಉಪಾಧ್ಯಕ್ಷರಾದ ಶ್ರೀ ಎಸ್.ಹೆಚ್.ಮೊಯಿನುದ್ದೀನ್‌ರವರು ಭಾಗವಹಿಸಿದ್ದರು. ಸಿ.ಐ.ಟಿ.ಯು. ನ ರಾಜ್ಯ ಸಮಿತಿಯ ಸದಸ್ಯರಾಗಿರುವ ಕಾಂ: ಅಲ್ಲಾ ಭಕ್ಸ್ ರವರು ಮಾತನಾಡಿ ಹಮಾಲಿ ಕಾರ್ಮಿಕರು, ದಿನಗೂಲಿ ನೌಕರರು, ಕಟ್ಟಡ ಕಾರ್ಮಿಕರು ಅಸಂಘಟಿತ ಕಾರ್ಮಿಕರಾಗಿದ್ದು ಅವರ ಬೇಡಿಕೆಗಳ ಅಗತ್ಯವನ್ನು ವಿವರಿಸಿದರು.

ಕಲ್ಯಾಣ ನಿಧಿಗೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರನ್ನು ಸೇರಿಸಿ ಅದರ ಸೌಲಭ್ಯಗಳನ್ನು ಪಡೆಯಲು ಕಾರ್ಯಕ್ರಮ ರೂಪಿಸಬೇಕೆಂದು ಕರೆ ನೀಡಿದರು. ಕೊಡಗು ಜಿಲ್ಲಾ ಕಟ್ಟಡ ಕಾರ್ಮಿಕರ ಸಂಘ(ರಿ) ವಿರಾಜಪೇಟೆ ಇದರ ಗೌರವ ಅಧ್ಯಕ್ಷರಾದ ಶ್ರೀ.ಐ.ಆರ್.ಪ್ರಮೋದ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯದರ್ಶಿ ಜೋಸ್‌ವಾಸ್‌ರವರು ವರದಿ ವಾಚಿಸಿದರು. ಚರ್ಚೆಯ ಬಳಿಕ ವರದಿಯನ್ನು ಅಂಗೀಕರಿಸಲಾಯಿತು.

ಉಪಾಧ್ಯಕ್ಷರಾದ ಸೇದು ಮಾತನಾಡಿದರು. ಸಂಘದ ವತಿಯಿಂದ ಜನಶ್ರೀ ವಿಮಾ ಯೋಜನೆಯಡಿಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ಸದಸ್ಯರಾದ ಷಣ್ಮುಖರವರು ಸಂಘದ ಕಛೇರಿಗೆ ಒಂದು ದೂರವಾಣಿ ಉಪಕರಣವನ್ನು ಉಚಿತವಾಗಿ ನೀಡಿರುವರು.

ಸಂಘದ ನೂತನ ಪದಾಧಿಕಾರಿಗಳಾಗಿ ಅಬ್ದುಲ್ ರಜಾಕ್ ಅಧ್ಯಕ್ಷರಾಗಿಯೂ ಐ.ಆರ್.ಪ್ರಮೋದ್, ಗೌರವ ಅಧ್ಯಕ್ಷರಾಗಿಯೂ, ಜೋಸ್‌ವಾಸ್ ಕಾರ್ಯದರ್ಶಿಯಾಗಿಯೂ, ಎಂ.ಸೇದು ಹಾಗೂ ಶ್ರೀಮತಿ ಪದ್ಮಾವತಿಯವರುಗಳನ್ನು ಉಪಾಧ್ಯಕ್ಷರುಗಳಾಗಿಯೂ ಹಾಗೂ ಇತರ ಹಲವರನ್ನು ಸಂಘದ ಸಮಿತಿ ಸದಸ್ಯರುಗಳಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಕಟ್ಟಡ ನಿರ್ಮಾಣ ಕಾರ್ಮಿಕರಿಂದ ಪ್ರತಿಭಟನೆ

ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಸಿಬ್ಬಂದಿ ಕೊರತೆಯಿಂದ ಕಾರ್ಮಿಕರ ಪರವಾದ ಅಗತ್ಯ ಕಾರ್ಯಗಳು ನಡೆಯುತ್ತಿಲ್ಲ ಎಂದು ಟೀಕಿಸಿ ಸಿಐಟಿಯು ರಾಜ್ಯ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಒಕ್ಕೂಟದ ಸದಸ್ಯರು ಜುಲೈ 15 ರಂದು ಪ್ರತಿಭಟನೆ ನಡೆಸಿದರು.

ಬೆಂಗಳೂರು ನಗರದ ಎಂ.ಜಿ.ರಸ್ತೆಯ ಮಹಾತ್ಮಗಾಂಧಿ ಪ್ರತಿಮೆ ಎದುರು ಪ್ರತಿಭಟನೆ ನಡೆಸಿದ ಸದಸ್ಯರು, 'ಕಲ್ಯಾಣ ಮಂಡಳಿಗೆ ಈ ಕೂಡಲೇ ಅಗತ್ಯ ಸಿಬ್ಬಂದಿಯನ್ನು ನೇಮಿಸಬೇಕು. ಕಾರ್ಮಿಕರ ನೋಂದಣಿ ಮತ್ತು ಗುರುತಿನ ಚೀಟಿ ವಿತರಿಸುವ ಕಾರ್ಯವನ್ನು ತ್ವರಿತಗೊಳಿಸಬೇಕು' ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ವೀರಸ್ವಾಮಿ ಮಾತನಾಡಿ 'ಕಲ್ಯಾಣ ಮಂಡಳಿಗೆ ಸಿಬ್ಬಂದಿಯನ್ನು ನೇಮಿಸಬೇಕು. ಕಾರ್ಮಿಕರ ಸಂಕಷ್ಟಗಳನ್ನು ಪರಿಹರಿಸಲು ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿದರು.

ಕಾರ್ಮಿಕರಿಗೆ ನೀಡಲಾಗುವ 300 ರೂಪಾ... ಪಿಂಚಣಿಯನ್ನು ಒಂದು ಸಾವಿರ ರೂಪಾಯಿಗೆ ಏರಿಸಬೇಕು. ಕಾರ್ಮಿಕರ ವಯಸ್ಸಿನ ದೃಢೀಕರ... ಪತ್ರವನ್ನು ಆರೋಗ್ಯ ಇಲಾಖೆಯಿಂದ ವಿತರಿಸಲ... ಕ್ರಮ ತೆಗೆದುಕೊಳ್ಳಬೇಕು ಎಂದು ಅವರು ' ಆಗ್ರಹಿಸಿದರು. ಸಿಐಟಿಯು ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್, ಸಂಘದ ಜಿಲ್ಲಾ ಘಟಕದ ಸಂಚಾಲಕರಾದ ಎಸ್.ಶಂಕರ್, ಟಿ.ಎಂ.ರಾಮಕೃಷ್ಣ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಅಣು ಒಪ್ಪಂದ ಒಳ ಹೊರಗಿನ ಇನ್ನಷ್ಟು ವಿವರಗಳು ಹಾಗೂ ಯುರೇನಿಯಂ ಕೊರತೆ ಎಂಬ ಸುಳ್ಳಿನ ಬಗೆಗೆ ಈ ಲೇಖನದಲ್ಲಿ

ಪಾರದರ್ಶಕತೆ ಅಭಾವದ ಭಾರತ - ಅಮೆರಿಕಾ 123 ಪರಮಾಣು ಒಪ್ಪಂದ ಹೈಡ್ ಆಕ್ಟ್ ದೇಶಕ್ಕೆ ಅಘಾತಕಾರಿ

ಜಿ.ಎಸ್.ನಾಗರಾಜ್, ಶಿವಮೊಗ್ಗ

ನಿತ್ಯ ಅವಶ್ಯಕ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ಹಿಂದಿನ ದಾಖಲೆಗಳನ್ನು ಮೀರಿ ಹಣದುಬ್ಬರ ನಾಗಾಲೋಟದಲ್ಲಿ ನಡೆದಿದೆ. ಮಾವೋವಾದಿಗಳು ಹಾಗೂ ಭಯೋತ್ಪಾದಕರ ಕಾರ್ಯಾಚರಣೆ ದೇಶಾದ್ಯಂತ ಹರಡಿದೆ. ಜಮ್ಮು ಕಾಶ್ಮೀರದಲ್ಲಿ ರಾಜ್ಯ ಸರ್ಕಾರದ ಕ್ರಮದಿಂದಾಗಿ ಸಮಾಜವನ್ನು ಇಬ್ಭಾಗ ಮಾಡುವಂತಹ ಗಲಭೆ, ದಂಗೆ ಪ್ರಾರಂಭವಾಗಿ, ಪಿ.ಡಿ.ಪಿ ರಾಜ್ಯ ಸರ್ಕಾರಕ್ಕೆ ಬೆಂಬಲ ಹಿಂತೆಗೆದುಕೊಂಡು ಕಾಂಗ್ರೆಸ್ ಸರ್ಕಾರ ಪತನಗೊಂಡಿದೆ. ಈಶಾನ್ಯ ರಾಜ್ಯಗಳಲ್ಲಿ ಬಿಕ್ಕಟ್ಟು ದಿನ ದಿನಕ್ಕೆ ಉಲ್ಬಣಗೊಳ್ಳುತ್ತಿದೆ. ಕಾಂಗ್ರೆಸ್ ಪಕ್ಷ ಸತತವಾಗಿ 13 ರಾಜ್ಯಗಳ ಚುನಾವಣೆಗಳಲ್ಲಿ ಹೀನಾಯ ಸೋಲನ್ನು ಅನುಭವಿಸಿದೆ. ಆದರೆ, ಮೇಧಾವಿ ಪ್ರಧಾನ ಮಂತ್ರಿ ಶ್ರೀ ಮನಮೋಹನ ಸಿಂಗ್‌ರವರಿಗಾಗಲೀ ಅಥವಾ ಕಾಂಗ್ರೆಸ್ ಪಕ್ಷಕ್ಕಾಗಲೀ ಇವುಗಳು ಗಮನ ಕೊಡುವಂತಹ ಸಮಸ್ಯೆಯೇ ಆಗಿಲ್ಲ. ಆದರೆ ಬಹುಸಂಖ್ಯಾತ ಅಮೇರಿಕನ್ನರಿಂದ ಅವಹೇಳನಕ್ಕೆ ನಗೆಪಾಟಲಾಗಿರುವ ಅಮೇರಿಕಾದ ಯುದ್ಧದಾಹಿ ಜಾರ್ಜ್ ಬುಷ್‌ರವರ ಮನವೊಲಿಕೆಗೆ ತಮ್ಮ ಸರ್ಕಾರವನ್ನು ಬಲಿಕೊಡಲು ನಮ್ಮ ಪ್ರಧಾನಮಂತ್ರಿಗಳು ತಯಾರಾಗಿದ್ದಾರೆ. ಅದು ಸಹ ಭಾರತ ಸಂಸತ್ತು ಚರ್ಚೆ ನಡೆಸಿ 2007ನೇ ನವೆಂಬರ್‌ನಲ್ಲಿ ತನ್ನ ವಿರೋಧವನ್ನು ವ್ಯಕ್ತಪಡಿಸಿರುವ ಹಾಗೂ ಶ್ರೀ ಬುಷ್‌ರವರು ಅಧ್ಯಕ್ಷ ಸ್ಥಾನದಿಂದ ನಿವೃತ್ತಿ ಹೊಂದಿದ ನಂತರ ವಸ್ತು ಸಹ ಜಾರಿ ಬರುವ ಭಾರತ ಅಮೇರಿಕಾ ಪರಮಾಣು ಒಪ್ಪಂದದ ವಿಚಾರದಲ್ಲಿ.

ಎಡಪಕ್ಷಗಳು ಮೊದಲಿನಿಂದಲೂ ಈ ಭಾರತ, ಅಮೇರಿಕಾ ಪರಮಾಣು ಒಪ್ಪಂದ, ದೇಶದ ವಿದೇಶಾಂಗ ನೀತಿ ಆಂತರಿಕ ಭದ್ರತೆ ಹಾಗೂ ದೇಶದ ಹಿತಕ್ಕೆ ಧಕ್ಕೆ ತರುವಂತಹುದು, ಅಮೇರಿಕಾದ ಆಂತರಿಕ ಕಾನೂನು ಹೈಡ್ ಆಕ್ಟ್‌ಗೆ ಈ ಒಪ್ಪಂದ ಬದ್ಧವಾಗಿರುವಂತಹುದು ಹಾಗೂ ಒಪ್ಪಂದದ ಹೆಸರಿನಲ್ಲಿ ಭಾರತ ಅಮೇರಿಕಾ ಭಾಂದವ್ಯ ಬೆಳೆಸುವ ತಂತ್ರಗಾರಿಕೆ ಎಂದು ಪ್ರತಿಪಾದಿಸುತ್ತಾ ಬಂದಿದೆ.

ಆದರೆ ಕೇಂದ್ರ ಸರ್ಕಾರದ ಹಾಗೂ ಕಾಂಗ್ರೆಸ್ ವಕ್ತಾರರು, ಕೆಲವು ಮಾಧ್ಯಮದವರು ಈ ಒಪ್ಪಂದ ದೇಶದ ಪ್ರಗತಿಗೆ ಅತ್ಯಾವಶ್ಯಕವಾದಂತಹ ವಿದ್ಯುತ್ ಉತ್ಪಾದನೆ, ಇಂಧನ ಪೂರೈಕೆಗೆ ಅತ್ಯವಶ್ಯಕವಾಗಿರತಕ್ಕಂತ ಯುರೇನಿಯಂ, ಅದಕ್ಕೆ ಸಂಬಂಧಪಟ್ಟ ರಿಯಾಕ್ಟರ್ ಹಾಗೂ ತಾಂತ್ರಿಕತೆ ಪಡೆಯುವುದು ಸೇರಿದಂತೆ ದೇಶದ ಸರ್ವತೋಮುಖ ಅಭಿವೃದ್ಧಿಗೆ ಅತ್ಯಾವಶ್ಯಕವಾದುದು ಎಂದು ಪ್ರತಿಪಾದಿಸುತ್ತಿದ್ದಾರೆ. ಈ ಒಪ್ಪಂದದ ಅನ್ವಯ ಅಂತರರಾಷ್ಟ್ರೀಯ ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದ - ಸಿಟಿಬಿಟಿಗೆ ಸಹಿ ಹಾಕದಿರುವುದರಿಂದ ಈ ಬಗ್ಗೆ ವಿಧಿಸಿರುವ ಅಂತರರಾಷ್ಟ್ರೀಯ ದಿಗ್ಬಂಧನದಿಂದ ಮುಕ್ತಗೊಳ್ಳಬಹುದೆಂದು ಅವರು ವಾದಿಸುತ್ತಿದ್ದಾರೆ.

ಭಾರತ, ಅಮೇರಿಕಾ ಪರಮಾಣು ಒಪ್ಪಂದದ ಬಗ್ಗೆ ಮೇಲ್ಕಂಡ ಎರಡು ವಿಭಿನ್ನ ಪ್ರತಿಕ್ರಿಯೆಗಳು ಇದ್ದು ಈ ಬಗ್ಗೆ ಜೂನ್ 15-22, 2008ರ ಪೀಪಲ್ಸ್ ಡೆಮೊಕ್ರಸಿ ಆಂಗ್ಲ ಪತ್ರಿಕೆಯಲ್ಲಿ ಶ್ರೀ ಪ್ರಬೀರ್ ಪುರಕಾಯಿಸ್ಥಾರವರ ಲೇಖನದ "ದಿ ನ್ಯೂಕ್ಲಿಯರ್ ಡೀಲ್ : ಗಾಗ್ ಆರ್ಡರ್ಸ್ ಅಂಡ್ ಯುರೇನಿಯಂ ಶಾರ್ಟೇಜ್" ಎಂಬ ಶಿರೋನಾಮೆಯಲ್ಲಿ ಪ್ರಕಟವಾಗಿದ್ದು, ಈ ಲೇಖನ ಈ ವಿಷಯದ ಮೇಲೆ ಬೆಳಕು ಚೆಲ್ಲುತ್ತದೆ. ಅದರ ಕನ್ನಡ ಅನುವಾದ ಈ ಕೆಳಗಿನಂತೆ ಇದೆ.

ಭಾರತ, ಅಮೇರಿಕಾ ನಾಗರೀಕ ಪರಮಾಣು ಒಪ್ಪಂದದ ಬಗ್ಗೆ ಅಮೇರಿಕಾದ ವಿದೇಶಿ ವ್ಯವಹಾರಗಳಿಗೆ ಸಂಬಂಧಪಟ್ಟ ಅಮೇರಿಕಾದ ಸಂಸತ್ತಿನ ಸಮಿತಿಯ 40 ಪ್ರಶ್ನೆಗಳಿಗೆ ಅಮೇರಿಕಾ ಸರ್ಕಾರದ ಆಡಳಿತ ಉತ್ತರಗಳನ್ನು ಕೊಟ್ಟಿದ್ದು ಈ ಉತ್ತರಗಳನ್ನು ಸಾರ್ವಜನಿಕವಾಗಿ ಬಹಿರಂಗಗೊಳಿಸಬಾರದೆಂದು ದಿಗ್ಬಂಧನ ವಿಧಿಸಿದೆ. ಈ 40 ಪ್ರಶ್ನೆಗಳನ್ನು 2007ನೇ ಇಸವಿ ಅಕ್ಟೋಬರ್‌ದಲ್ಲಿ ಭಾರತ, ಅಮೇರಿಕಾ ನಾಗರೀಕ ಒಪ್ಪಂದಕ್ಕೆ ಸಂಬಂಧಪಟ್ಟ ಅಮೇರಿಕಾ ಸರ್ಕಾರದ ಇಲಾಖೆಗೆ ಕಳುಹಿಸಿಕೊಡಲಾಗಿತ್ತು. ಈ ಪ್ರಶ್ನೆಗಳು ಭಾರತ, ಅಮೇರಿಕಾ ಸರ್ಕಾರಗಳು ಸಾರ್ವಜನಿಕರಿಗೆ 123 ಒಪ್ಪಂದದ ಬಗ್ಗೆ ಪ್ರತ್ಯೇಕವಾಗಿ ಕೊಟ್ಟ ಸ್ಪಷ್ಟನೆಗಳಿಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಅಮೇರಿಕಾ ಸರ್ಕಾರದ ಸ್ಪಷ್ಟನೆ ಪ್ರಕಾರ 123 ಒಪ್ಪಂದ ಹೈಡ್ ಆಕ್ಟ್ ಗೆ ಬದ್ಧವಾಗಿದೆ ಎಂತಲೂ ಭಾರತ ಸರ್ಕಾರ ಹೈಡ್ ಆಕ್ಟ್‌ಗೂ ಭಾರತಕ್ಕೂ ಸಂಬಂಧ ವಿಲ್ಲವೆಂದು, ಭಾರತಕ್ಕೆ 123 ಮಾತ್ರ ಅನ್ವಯವಾಗುತ್ತದೆ ಎಂದು ಪ್ರತಿಪಾದಿಸುತ್ತದೆ. ಹೈಡ್ ಆಕ್ಟ್‌ನಲ್ಲಿ ನಮೂದಿಸಲಾಗಿರುವ ನಿರ್ದಿಷ್ಟವಾದ ಪ್ರಶ್ನಾತೀತ ನಿಯಮಗಳನ್ನು 123 ಒಪ್ಪಂದ ತೆಗೆದು ಹಾಕಿದೆ ಎನ್ನುವ ಮಟ್ಟಕ್ಕೆ ಭಾರತ ಸರ್ಕಾರದ ವಕ್ತಾರರು ಹೇಳುತ್ತಿದ್ದಾರೆ.



ಈ ರೀತಿ 123 ಒಪ್ಪಂದ ಹಾಗೂ ಹೈಡ್ ಆಕ್ಟಿನ ಬಗ್ಗೆ ಎರಡು ಸರ್ಕಾರಗಳು ವಿರೋಧ ನೀತಿ ತಳೆದಿದ್ದು ಈ ಬಗ್ಗೆ ಅಮೇರಿಕಾದ ಸಂಸತ್ತು ಹೈಡ್ ಆಕ್ಟ್ ಹಾಗೂ 123 ಒಪ್ಪಂದದ ಬಗ್ಗೆ ವಿವರವಾದ ಸ್ಪಷ್ಟನೆಯನ್ನು ಕೇಳಿತ್ತು.

ಅಮೇರಿಕಾದ ಆಡಳಿತ ವರ್ಗ ಈ ಪ್ರಶ್ನೆಗಳಿಗೆ ಈ ವರ್ಷದ ಮಾರ್ಚ್ ತಿಂಗಳಿನಲ್ಲಿ ಉತ್ತರಿಸಿತ್ತು. ಈ ಉತ್ತರಗಳು ಅನ್ ಕ್ಲಾಸಿಫೈಡ್ ಅಂದರೆ ಸಾರ್ವಜನಿಕವಾಗಿ ಪ್ರಕಟಣೆ ಮಾಡದಂತಹ ದಸ್ತಾವೇಜುಗಳು ಅಲ್ಲದಿದ್ದರೂ ಸಹ ಅಮೇರಿಕಾ ಸರ್ಕಾರ ಈ ಉತ್ತರಗಳನ್ನು ಹಾಗೂ ಸ್ಪಷ್ಟನೆಗಳನ್ನು ಸಾರ್ವಜನಿಕವಾಗಿ ಪ್ರಕಟಣೆ ಮಾಡದಂತೆ ದಿಗ್ಬಂಧನ ಹೇರಿದೆ. ಈ ಉತ್ತರಗಳು ವಿದೇಶಿ ವ್ಯವಹಾರಕ್ಕೆ ಸಂಬಂಧಪಟ್ಟ ಕಚೇರಿ ಅಲ್ಮೇರದಲ್ಲಿ ಬೀಗ ಹಾಕಿ ಇಡಲಾಗಿದೆ ಎಂದು ಅಮೇರಿಕಾದ ವಾಷಿಂಗ್‌ಟನ್ ಪೋಸ್ಟ್ ಪತ್ರಿಕೆ ತನ್ನ ಮೇ ತಿಂಗಳ 6ನೇ ತಾರೀಖಿನ ಪತ್ರಿಕೆಯಲ್ಲಿ ಪ್ರಕಟಿಸಿದೆ. ಅಮೇರಿಕಾದ ಅಧಿಕಾರಿಗಳಿಗೆ ಈ ಉತ್ತರಗಳನ್ನು ಪ್ರಚಾರ ಮಾಡದಿರಲು ಆದೇಶ ನೀಡಲಾಗಿದೆ. ಪ್ರಚಾರವಾದಲ್ಲಿ ಈ ಒಪ್ಪಂದ ಮುರಿದು ಬೀಳುವ ಪರಿಸ್ಥಿತಿ ಬರಬಹುದೆಂದು ಈ ಆದೇಶ ನೀಡಲಾಗಿದೆ.

ಅಮೇರಿಕಾ ಸಂಸತ್ತಿನ ವಿದೇಶಿ ವ್ಯವಹಾರಗಳ ಸಮಿತಿ ವಕ್ತಾರ ಲೀನ್ ವೆಲ್ ಪ್ರಕಾರ ಸರ್ಕಾರದ ಇಲಾಖೆ ವಿವರವಾದ ಮಾಹಿತಿಯನ್ನು ಒದಗಿಸಿದೆ. ಆದರೆ ಇದರಲ್ಲಿನ ಕೆಲವು ವಿವರಣೆಗಳು ಸೂಕ್ಷ್ಮವಾದ ವಿದೇಶಿ ನೀತಿಗಳಿಗೆ ಸಂಬಂಧಪಟ್ಟಿದೆಂದು ಪರಿಗಣಿಸಿ ಇದನ್ನು ಪ್ರಕಟಿಸದಿರಲೂ ನಿರ್ಧರಿಸಲಾಗಿದೆ. ಅಮೇರಿಕ ಸಂಸ್ಥಾನದ ಕಾನೂನು ರಚಿಸುವವರು ತಮ್ಮ ಕಡೆಯಿಂದ ಈ ಒಪ್ಪಂದಕ್ಕೆ ಧಕ್ಕೆ ತರದಿರಲು ನಿರ್ಧರಿಸಿದ್ದಾರೆ.

ಹೈಡ್ ಆಕ್ಟ್ ಅಮೇರಿಕಾ ಸಂಸ್ಥಾನದ ಕಾಂಗ್ರೆಸ್‌ನಲ್ಲಿ ಮಂಜೂರಾದ ಆಕ್ಟ್ ಆಗಿದ್ದು 123 ಭಾರತ, ಅಮೇರಿಕಾ ಪರಮಾಣು ಒಪ್ಪಂದ ಹೈಡ್ ಆಕ್ಟ್ ನಿಯಮಾವಳಿಗಳಿಗೆ ಬದ್ಧವಾಗದಿದ್ದಲ್ಲಿ ತನ್ನ ಸಾರ್ವಭೌಮತ್ವವನ್ನು ರಕ್ಷಿಸಿಕೊಳ್ಳುವಲ್ಲಿ ತೀವ್ರ ಆಸಕ್ತಿ ತೋರಿಸಿದ ಅಮೇರಿಕಾ ಸಂಸತ್ತನ್ನು ಮೀರಿ ನಿಲ್ಲುವಂತಹ ನಿಯಮಾವಳಿಗಳಿಗೆ ಒಪ್ಪಿ ಅದನ್ನು ಪ್ರಚಾರ ಮಾಡಲು ದಿಗ್ಬಂಧನ ಹೇರಿದೆ ಎಂದರೆ ನಂಬುವುದಕ್ಕೆ ಅಸಾಧ್ಯವಾದ ಸಂಗತಿಯಾಗಿದೆ. ಆದರೆ ಏಕೆ ಈ ನಿರ್ಬಂಧ? ಏಕೆಂದರೆ ಈ ಮಾಹಿತಿಗಳನ್ನು ಅಥವಾ ವಿವರಣೆಗಳನ್ನು ಬಹಿರಂಗಗೊಳಿಸಿದರೆ ಭಾರತ ಸರ್ಕಾರ ಈವರೆವಿಗೂ ಈ ಒಪ್ಪಂದದ ಬಗ್ಗೆ ಸಾರ್ವಜನಿಕವಾಗಿ ಕೊಡುತ್ತಿರುವ ವಿವರಣೆ ಭರವಸೆ, ಸುಳ್ಳಾಗಿದ್ದು ಎಡಪಕ್ಷಗಳು ಮೊದಲಿನಿಂದಲೂ ವ್ಯಕ್ತಪಡಿಸುತ್ತಿರುವ ವಾಸ್ತವಾಂಶವನ್ನು ಪುಷ್ಟಿಗೊಳಿಸುತ್ತದೆ. ಅಂದರೆ 123 ಒಪ್ಪಂದ ಸಂಪೂರ್ಣವಾಗಿ ಹೈಡ್ ಆಕ್ಟ್ ನಿಯಮಾವಳಿಗಳಿಗೆ ಅನುಗುಣವಾಗಿದೆ ಹಾಗೂ ಹೈಡ್ ಆಕ್ಟ್ ನಿಯಮಗಳನ್ನು ಅಣು ಒಪ್ಪಂದದಲ್ಲಿ ಅಳವಡಿಸಲಾಗಿದೆ. ನಿರ್ಬಂಧಪಡಿಸಿರುವ ಅಮೇರಿಕಾ ಸರ್ಕಾರದ ಆದೇಶಕ್ಕೆ ಇದಲ್ಲದೇ ಬೇರೆ ಉತ್ತರವಿಲ್ಲ.

ಸಾರ್ವಜನಿಕ ವಲಯಕ್ಕೆ ಬಿಡುಗಡೆ ಮಾಡದ ಸ್ಪಷ್ಟನೆ ಹಾಗೂ ಅಮೇರಿಕಾ ಸರ್ಕಾರದ ವಿವರಣೆಗಳು ಏನನ್ನು ಬಹಿರಂಗಗೊಳಿಸುತ್ತದೆ? ಭಾರತ ಸರ್ಕಾರದ ಅಧಿಕಾರಿಗಳ ಹೇಳಿಕೆಗಳಿಗೆ ಅಮೇರಿಕಾದ ವಿದೇಶಾಂಗ ಸಚಿವೆ ಕಾಡಲೀನ ರೈಸ್ ಹಾಗೂ ನಿಕಬರ್ನ್ಸ್ ಅಮೇರಿಕಾ ಕಾಂಗ್ರೆಸ್‌ನಲ್ಲಿ ಹಾಗೂ ಇನ್ನಿತರ ವೇದಿಕೆಗಳಲ್ಲಿ ವಿಭಿನ್ನವಾದ ಹೇಳಿಕೆಗಳನ್ನು ಕೊಟ್ಟಿದ್ದಾರೆ. ವಾಷಿಂಗ್‌ಟನ್ ಪೋಸ್ಟ್ ಪತ್ರಿಕೆಯ ವರದಿಯಂತೆ ಈ ಬಿವರಗಳು, ಅಥವಾ ಮಾಹಿತಿ ಕೇಳಿರುವಂತಹ ಪ್ರಶ್ನೆಗಳು ನಿರ್ದಿಷ್ಟ ಹಾಗೂ ವಿಸ್ತಾರವಾಗಿದ್ದು, ಉತ್ತರಗಳು ಹಾಗೂ ವಿವರಣೆಗಳು ಭಾರತ ವಕ್ತಾರರು ನುಣುಚಿಕೊಳ್ಳುವುದಕ್ಕಾಗಲೀ ಅಥವಾ ಮುಚ್ಚು ಹಾಕುವುದಕ್ಕಾಗಲೀ ಸಾಧ್ಯವಿಲ್ಲದಂತವುಗಳಾಗಿವೆ.

ಪ್ರಮುಖ ಪ್ರಶ್ನೆಗಳು

ಪ್ರಶ್ನೆಗಳು ಹಾಗೂ ಅದಕ್ಕೆ ಕೊಟ್ಟಿರುವ ಉತ್ತರಗಳು ಸಾರ್ವಜನಿಕವಾಗಿ ಪ್ರಕಟವಾಗದೇ ಇರುವುದರಿಂದ ಪ್ರಶ್ನೆಗಳು ಹಾಗೂ ಅದಕ್ಕೆ ಕೊಟ್ಟಿರುವ ಉತ್ತರಗಳು ಈ ಕೆಳಗಿನಂತೆ ಇರಬಹುದೆಂದು ಭಾವಿಸಬಹುದು.

ಈ ಹೊಸ 123 ಒಪ್ಪಂದ ಪರಮಾಣು ಉಪಯೋಗಕ್ಕೆ ಸಂಬಂಧಪಟ್ಟ ತಾಂತ್ರಿಕತೆ ಪಡೆಯಲು ಅವಕಾಶ ಒದಗಿಸುತ್ತದೆ ಹಾಗೂ ಈ ಬಗ್ಗೆ ಭಾರತದ ಮೇಲೆ ಹೇರಿರುವಂತಹ ನಿರ್ಬಂಧದಿಂದ ಹೊರಬರಬಹುದೆಂದು ಲೋಕಸಭೆಯಲ್ಲಿ ಶ್ರೀ ಮನಮೋಹನಸಿಂಗ್‌ರವರು ತಿಳಿಸಿದ್ದಾರೆ. ಆದ್ದರೆ ಎಡಪಕ್ಷದವರು ಹೈಡ್ ಆಕ್ಟ್ ನಿರ್ದಿಷ್ಟವಾಗಿ ಅಂತಹ ತಾಂತ್ರಿಕತೆಯ ವರ್ಗಾವಣೆಗೆ ನಿರ್ಬಂಧವನ್ನು ಸೂಚಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಅಂತಹ ತಾಂತ್ರಿಕತೆಯ ವರ್ಗಾವಣೆಗೆ ಅವಕಾಶ ಇದೆಯೇ ಎನ್ನುವ ಪ್ರಶ್ನೆಗೆ ನಿರ್ದಿಷ್ಟ ಹಾಗೂ ಸ್ಪಷ್ಟ ಉತ್ತರ ವರ್ಗಾವಣೆಗೆ ಅವಕಾಶವಿಲ್ಲ ಹಾಗೂ ಈ ಉತ್ತರ ಮನಮೋಹನ್‌ಸಿಂಗ್ ಹಾಗೂ ಇತರೆ ಯುಪಿಎ ಸರ್ಕಾರದವರು ಕೊಟ್ಟಿರುವ ಉತ್ತರಕ್ಕೆ ತದ್ವಿರುದ್ಧವಾಗಿದೆ. ಈ ತಾಂತ್ರಿಕತೆ ಎರಡು ಬಗೆಯದಾಗಿದೆ. (ಶಾಂತಿಯುತ ಹಾಗೂ ಮಿಲಿಟರಿ ಉಪಯೋಗಕ್ಕೆ) ಈ ತಾಂತ್ರಿಕತೆಯನ್ನು ಹಲವಾರು ಕ್ಷೇತ್ರಗಳಲ್ಲಿ ಉಪಯೋಗಿಸಬಹುದು. ಆದುದರಿಂದ ಅಂತಹ ತಾಂತ್ರಿಕತೆಯ ವರ್ಗಾವಣೆಗೆ ನಿರ್ಬಂಧ ಅಂದರೆ ಅಣು. ಇಂಧನಕ್ಕೆ ಸಂಬಂಧಪಟ್ಟ ತಾಂತ್ರಿಕತೆಯನ್ನು ಪಡೆಯಲು ನಿಷಿದ್ಧ ಹಾಗೂ ಇನ್ನಿತರೆ ತಾಂತ್ರಿಕತೆ ಪಡೆಯಲು ನಿರ್ಬಂಧ. ಆದುದರಿಂದ ಯುಪಿಎ ವಕ್ತಾರರು ನಿರ್ಬಂಧದಿಂದ ಮುಕ್ತಿ ಪಡೆಯುವ ಮಾತು ಸತ್ಯಕ್ಕೆ ದೂರವಾಗಿದೆ.

ಈ ಒಪ್ಪಂದ ಜಾರಿಗೆ ಬಂದರೂ ಸಹ ಎರಡು

ಪುಟ 10ಕ್ಕೆ

ಭಾರತವು ಸಾಮ್ರಾಜ್ಯಶಾಹಿಯ ಅಡಿಯಾಳು ಮಿತ್ರನಾಗಬೇಕೆ?

ಜನಪ್ರತಿನಿಧಿಗಳು ಸರಿಯಾಗಿ ನಿರ್ಧರಿಸಲಿ

ಸೀತಾರಾಂ ಯೆಚೂರಿ

ಕಳೆದ ನಾಲ್ಕು ವರ್ಷಗಳಿಂದ ಮನಮೋಹನ ಸಿಂಗ್ ಸರಕಾರ ಅನುಸರಿಸಿಕೊಂಡು ಬಂದಿರುವ ನೀತಿಗಳ ಪರಿಣಾಮವಾಗಿ ಈಗಾಗಲೇ ಕೋಮುವಾದಿ ಶಕ್ತಿಗಳಲ್ಲಿ ಮತ್ತೆ ಅಧಿಕಾರಕ್ಕೆ ಮರಳುವ ಹೊಸ ಆಸೆ ಚಿಗುರಿದೆ. ಹೀಗಿರುವಾಗ ಅವನ್ನೆಲ್ಲ ಎದುರಿಸುವ ಬದಲು ಕೇವಲ ಅಮೆರಿಕಾದೊಡನೆ ಯುದ್ಧತಂತ್ರಗಳಲ್ಲಿ, ಅದೂ ಒಂದು ಅಡಿಯಾಳು ಮಿತ್ರನಾಗಿ ಸೇರಿಕೊಳ್ಳಲು ಅವಕಾಶ ನೀಡಲಿಲ್ಲ ಎಂಬ ಕಾರಣಕ್ಕೆ ಕೋಮುವಾದದ ಬಗ್ಗೆ ಮಾತಾಡುವುದು ಜನಗಳಿಗೆ ಮಾಡುವ ವಂಚನೆಯಾಗುತ್ತದೆ. ಕೋಮುವಾದದ ವಿರುದ್ಧ ಅವಿರತ ಹೋರಾಟ ನಡೆಸುತ್ತಲೇ, ಭಾರತ ದೇಶ ಅಮೆರಿಕನ್ ಸಾಮ್ರಾಜ್ಯಶಾಹಿಯ ಅಡಿಯಾಳಾಗದಂತೆ ನೋಡಿಕೊಳ್ಳ ಬೇಕಾದ ಹೊಣೆ ದೇಶದ ಎಲ್ಲಾ ಪ್ರಗತಿಪರ ಶಕ್ತಿಗಳ ಮೇಲಿದೆ.

ಜುಲೈ 21 ಮತ್ತು 22 ರಂದು ಲೋಕಸಭೆಯ ವಿಶೇಷ ಅಧಿವೇಶನ ನಡೆಯಲಿದೆ. ಅದರಲ್ಲಿ ಮನಮೋಹನ ಸಿಂಗ್ ಸರಕಾರ ವಿಶ್ವಾಸಮತ ಕೇಳಲಿದೆ. ಗೆದ್ದರೆ ಅದಕ್ಕೊಂದು ಯುಕ್ತತೆ, ಕ್ರಮಬದ್ಧತೆ ಬರುತ್ತದೆ. ಅದೀಗ ಈ ಸರಕಾರಕ್ಕೆ ಅಗತ್ಯವಾಗಿದೆ. ಆಗ ಅದು ಬಯಸುವ ಭಾರತ-ಅಮೆರಿಕಾ ಪರಮಾಣು ವ್ಯವಹಾರಕ್ಕೆ ಕೂಡಾ ಒಂದು ಯುಕ್ತತೆ ಬರುತ್ತದೆ, ಅದು ಕ್ರಮಬದ್ಧ ಎಂದು ಹೇಳಲು ಅದಕ್ಕೆ ಸಾಧ್ಯವಾಗುತ್ತದೆ. ಅದಕ್ಕಾಗಿ ಕಾಂಗ್ರೆಸ್ ಮುಖಂಡರು ಸರ್ವ ಪ್ರಯತ್ನ ನಡೆಸಿದ್ದಾರೆ.

ಇನ್ನೊಂದೆಡೆ ಎಡಶಕ್ತಿಗಳು ಈ ವಿಶ್ವಾಸಮತದಲ್ಲಿ ಸರಕಾರವನ್ನು ಸೋಲಿಸಲೇಬೇಕು ಎನ್ನುತ್ತಿವೆ. ಏಕೆಂದರೆ ಈ ವ್ಯವಹಾರ ದೇಶಕ್ಕೆ ಅಪಾಯಕಾರಿ, ಆಗ ಭಾರತವು ಅಮೆರಿಕನ್ ಸಾಮ್ರಾಜ್ಯಶಾಹಿಯ ಜಾಗತಿಕ ಯುದ್ಧ ತಂತ್ರಗಳ ಜಾಲದಲ್ಲಿ ಸಿಲುಕಿಕೊಂಡು ತನ್ನ ಸಾರ್ವಭೌಮತ್ವವನ್ನು ಕಳಕೊಳ್ಳಬೇಕಾಗುತ್ತದೆ.

ಕಾಂಗ್ರೆಸ್ ಮುಖಂಡರಲ್ಲಿ ಕೆಲವರು ಮತ್ತು ಇನ್ನೂ ಇತರ ಕೆಲವು ಮಂದಿ ಮನಮೋಹನ ಸಿಂಗ್ ಸರಕಾರದ ವಿರುದ್ಧ ಮತನೀಡುವಾಗ ನೀವು ಬಿಜೆಪಿಯ ಜತೆಗೂಡಿದಂತಾಗುವುದಿಲ್ಲವೇ, ಇದು ನಿಮಗೆ ಸರಿಯೆನಿಸುತ್ತದೆಯೇ ಎಂದು ಎಡಪಕ್ಷಗಳನ್ನು ಕೇಳುತ್ತಿದ್ದಾರೆ. ಏಕೆಂದರೆ ಈ ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ದೂರವಿಡಲಿಕ್ಕಾಗಿಯೇ ಎಡಪಕ್ಷಗಳು ಯುಪಿಎಯ ಅಲ್ಪಮತದ ಸರಕಾರಕ್ಕೆ ಹೊರಗಿನಿಂದ ಬೆಂಬಲ ನೀಡಿದ್ದು ತಾನೇ? ಒಂದು ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಮೇಲೆ ಬೆಂಬಲ ನೀಡಿದ್ದೇನೋ ನಿಜ

ಹೊಣೆ ನಿಭಾಯಿಸಲು

ಆದರೆ ಇಲ್ಲಿರುವ ಪ್ರಮುಖ ಪ್ರಶ್ನೆ ಭಾರತದ ಸಾರ್ವಭೌಮತೆಯನ್ನು, ಸ್ವತಂತ್ರ ವಿದೇಶಾಂಗ ನೀತಿಯನ್ನು ಮತ್ತು ನಮ್ಮ ಭದ್ರತೆಯ ಪ್ರಶ್ನೆಗಳಲ್ಲಿ ನಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದು. ಅದಕ್ಕೆ ಈ ವ್ಯವಹಾರವನ್ನು ಪೂರೈಸಲೇಬೇಕು ಎಂದು ಹಟತೊಟ್ಟಂತಿರುವ ಈ ಸರಕಾರವನ್ನು ಸೋಲಿಸಲೇಬೇಕು. ಆದ್ದರಿಂದ ನಮ್ಮ ರಾಷ್ಟ್ರೀಯ ಹಿತಾಸಕ್ತಿಯ ರಕ್ಷಣೆಯ ತಮ್ಮ ಹೊಣೆ ನಿಭಾಯಿಸಲು, ಭಾರತ ಅಮೆರಿಕನ್ ಸಾಮ್ರಾಜ್ಯಶಾಹಿಯ ಅಡಿಯಾಳು ಮಿತ್ರನಾಗುವುದನ್ನು ತಪ್ಪಿಸಲು ಈ ಸರಕಾರದ ವಿರುದ್ಧ ಮತ ಚಲಾಯಿಸಲೇ ಬೇಕಾಗಿದೆ. ಆದ್ದರಿಂದ ಬೇರೆ ಯಾರ್‍ಯಾರು ಸರಕಾರದ ವಿರುದ್ಧ ಮತ ನೀಡುತ್ತಿದ್ದಾರೆ ಎಂಬುದು ಗೌಣವಾಗುತ್ತದೆ.

ಉದಾಹರಣೆಗೆ ರೈಲಿನಲ್ಲಿ ನಾವು ಹೋಗಬೇಕೆಂದಿರುವ ಸ್ಥಳಕ್ಕೆ ಪ್ರಯಾಣ ಮಾಡುತ್ತಿರುವಾಗ ನಮ್ಮ ಸಹಯಾತ್ರಿಕರು ಇಂತವರೇ ಇರಬೇಕು ಎಂದು ಹೇಳಲು ಸಾಧ್ಯವೇ? ಸಹಯಾತ್ರಿಕರು ನಮಗೆ ಇಷ್ಟವಾಗಲಿಲ್ಲ ಎಂದು ನಾವು ನಮ್ಮ ಉದ್ದೇಶಿತ ಸ್ಥಳಕ್ಕೆ ಪ್ರಯಾಣವನ್ನು ನಿಲ್ಲಿಸುತ್ತೇವೆಯೇ?

ಬಿಜೆಪಿಯ ಅಳಲು

ನಿಜ, ಬಿಜೆಪಿಗೆ ಸರಕಾರದ ವಿರುದ್ಧ ಮತನೀಡಲು ತನ್ನದೇ ಕಾರಣಗಳಿವೆ. ಈಗ ಅದು ಹೇಗಾದರೂ ಅಧಿಕಾರಕ್ಕೆ ಮರಳಬೇಕೆಂಬ ಆಕಾಂಕ್ಷೆಯಿಂದ ಮಾತ್ರವೇ ಈ ಪರಮಾಣು ವ್ಯವಹಾರವನ್ನು ವಿರೋಧಿಸುತ್ತಿದೆ. ವಾಸ್ತವವಾ... ಅಮೆರಿಕಾದೊಂದಿಗೆ ಯುದ್ಧ ಸಂಬಂಧಗಳನ್ನು ಬಲಪಡಿಸುವ ಪ್ರಕ್ರಿಯೆ ಆರಂಭವಾದದ್ದೇ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಆಳ್ವಿಕೆಯಲ್ಲಿ. ದುರದೃಷ್ಟವಶಾತ್ ಯುಪಿಎ ಸರಕಾರ ಅದನ್ನು ಮುಂದುವರೆಸುತ್ತಿಧೆ. ಇಂತಹ ಒಂದು ಭಾರತ-ಅಮೆರಿಕಾ ಪರಮಾಣು ವ್ಯವಹಾರ ಸಹಜವಾಗಿ ತಮ್ಮ ಸರಕಾರದ ಆಶ್ರಯದಲ್ಲಿ ನಡೆಯಬೇಕಾಗಿತ್ತು, ಮನಮೋಹನ್ ಸಿಂಗ್‌ರಿಂದ ಅಲ್ಲ ಎಂಬುದು ಅವರ ಅಳಲು ಇರಬಹುದು.

ಅದೇನೇ ಇರಲಿ, 14ನೇ ಲೋಕಸಭೆಯಲ್ಲಿ ಬಿಜೆಪಿ ಪ್ರಧಾನ ಪ್ರತಿಪಕ್ಷವಾದರೂ ಈ ನಾಲ್ಕು ವರ್ಷಗಳಲ್ಲಿ ಪ್ರತಿಪಕ್ಷಗಳ [illegible] ಮಾಡುವಂತೆ ಒಮ್ಮೆಯೂ ಅವಿಶ್ವಾಸ ಠರಾವನ್ನು ತರುವ ಪ್ರಯತ್ನ ಮಾಡಲಿಲ್ಲ ಎಂಬುದು ಗಮನಾರ್ಹವಲ್ಲವೇ? ಅದಕ್ಕೆ ನಿಜವಾಗಿಯೂ ಈ ವ್ಯವಹಾರದ ಬಗ್ಗೆ ಪ್ರಬಲ ವಿರೋಧವೇನಾದರೂ ಇದ್ದರೆ, ಇಂತಹ ಒಂದು ಅವಿಶ್ವಾಸ ಠರಾವನ್ನು ಮೊದಲೇ ತರಬೇಕಾಗಿತ್ತು. ಅದು ತರದಿರಲು ಕಾರಣ ಈ ಮೂಲಕ ಅವರು ಬುಶ್ ಆಡಳಿತಕ್ಕೆ ಬೇಸರ ಉಂಟು ಮಾಡಬಾರದು ಎಂಬ ಅದರ ಆಶಯದಿಂದ ಎಂಬುದು ಕೆಲವು ವೀಕ್ಷಕರ ಅಭಿಪ್ರಾಯ.

ಪ್ರಧಾನ ಮಂತ್ರಿಗಳು ಈ ವ್ಯವಹಾರಕ್ಕೆ ಬಿಜೆಪಿಯ ಬೆಂಬಲ ಗಿಟ್ಟಿಸಲು ಗಂಭೀರ ಪ್ರಯತ್ನ ನಡೆಸಿದ್ದರೆಂಬುದೂ ಸ್ಪಷ್ಟ. ಮಾಜಿ ಪ್ರಧಾನಿ ವಾಜಪೇಯಿಯವರನ್ನು ಭಾರತದ ರಾಜಕಾರಣದ 'ಭೀಷ್ಮ ಪಿತಾಮಹ' ಎಂದು ವರ್ಣಿಸಿ ಅವರು ಈ ಬಗ್ಗೆ ಬಿಜೆಪಿಯೊಂದಿಗೆ ಮಾತುಕತೆ ನಡೆಸಿದ್ದರು ಹಾಗೂ ಲಿಖಿತವಾಗಿ ಬಿಜೆಪಿಯ ಆಕ್ಷೇಪಗಳನ್ನು ನಿವಾರಿಸಿದ್ದರು ಎಂದೂ ನಂಬಲಾಗಿದೆ. ಬಿಜೆಪಿ ಮುಖಂಡತ್ವ ಪ್ರಧಾನ ಮಂತ್ರಿಗಳ ಭರವಸೆಯನ್ನು ಸ್ವೀಕರಿಸಿತು, ಆದರೆ ಮನಮೋಹನ ಸಿಂಗ್ ಸರಕಾರದ ವಿರುದ್ಧ ಯಾವುದೇ ಪ್ರಶ್ನೆಯಲ್ಲೂ ಅದು ವಿರೋಧ ಪಕ್ಷದ ಪಾತ್ರ ವಹಿಸಿದ್ದೇ ಬಹಳ ಅಪರೂಪ ಎಂಬ ಸಂಗತಿಯ ಹಿನ್ನೆಲೆಯಲ್ಲಿ ಹಿಂಜರಿಯಿತು





ಕೋಮುವಾದದ ವಿರುದ್ಧ ನಿಂತರೇ?

ಕೆಲವು ಕಾಂಗ್ರೆಸ್ ಮುಖಂಡರು ಮತ್ತು ಇತರರೂ ಈಗ ಕೋಮುವಾದದ ವಿರುದ್ಧ ಹೋರಾಡುವ ಮಾತಾಡುತ್ತಾರೆ. ಆದರೆ ನಿಜವಾಗಿ ಕಾಂಗ್ರೆಸ್ ಮುಖಂಡರು ಕಳೆದ ನಾಲ್ಕು ವರ್ಷಗಳಲ್ಲಿ ಈ ನಿಟ್ಟಿನಲ್ಲಿ ಏನು ಮಾಡಿದ್ದಾರೆ? ಈ ಅವಧಿಯಲ್ಲಿ 13 ರಾಜ್ಯಗಳ ವಿಧಾನ ಸಭೆಗಳಿಗೆ ಚುನಾವಣೆ ನಡೆಯಿತು. ಅವುಗಳಲ್ಲಿ ಹಲವು ಕಾಂಗ್ರೆಸ್ ಅಥವ ಅದರ ಮಿತ್ರ ಪಕ್ಷದ ಆಳ್ವಿಕೆಯಲ್ಲಿ ಇದ್ದವುಗಳು. ಅಲ್ಲೆಲ್ಲಾ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು ಕಾಂಗ್ರೆಸನ್ನು ಸೋಲಿಸಿ ಸರಕಾರ ರಚಿಸಿದವು. ಏಕೆಂದರೆ ಕಾಂಗ್ರೆಸ್ ಪರ್ಯಾಯ ನೀತಿಗಳನ್ನು ಜಾರಿಗೊಳಿಸುವಲ್ಲಿ ವಿಫಲವಾಯಿತು, ಅದರಿಂದ ಉಂಟಾದ ಜನಗಳ ಅಸಂತೃಪ್ತಿಯಿಂದ ಕೋಮುವಾದಿ ಶಕ್ತಿಗಳು ಪ್ರಯೋಜನಪಡುವಂತಾಯಿತು ಎಂಬುದು ವಾಸ್ತವ.

ಇನ್ನೊಂದೆಡೆ, ಎಡ ಆಳ್ವಿಕೆಯ ರಾಜ್ಯಗಳಲ್ಲಿ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾಗಳಲ್ಲಿ ಒಬ್ಬನೇ ಒಬ್ಬ ಬಿಜೆಪಿ ಎಂ.ಪಿ ಮಾತ್ರವಲ್ಲ, ಎಂ.ಎಲ್.ಎ. ಕೂಡಾ ಆರಿಸಿ ಬಂದಿಲ್ಲ ಎಂಬುದನ್ನು ಗಮನಿಸಬೇಕು. ಅಷ್ಟೇ ಅಲ್ಲ, ಲೋಕಸಭೆಗೆ ಆರಿಸಲ್ಪಟ್ಟ ಎಡಪಕ್ಷಗಳ 61 ಸದಸ್ಯರಲ್ಲಿ 54 ಮಂದಿ ಕಾಂಗ್ರೆಸನ್ನು ಸೋಲಿಸಿಯೇ ಗೆದ್ದು ಬಂದಿದ್ದರೂ, ಒಂದು ಜಾತ್ಯಾತೀತ ಸರಕಾರ ರಚನೆಯಾಗಲಿ ಎಂದು ಎಡಪಕ್ಷಗಳು ಕಾಂಗ್ರೆಸ್ ನೇತೃತ್ವದ ಯುಪಿಎ ಗೆ ಹೊರಗಿನಿಂದ ಬೆಂಬಲ ನೀಡಲು ಹಿಂಜರಿಯಲಿಲ್ಲ. ಹೀಗಿರುವಾಗ ಎಡಪಕ್ಷಗಳು ಕೋಮುವಾದಿಗಳಿಗೆ ಅನುಕೂಲ ಮಾಡಿ ಕೊಡುತ್ತಿವೆ ಎಂಬ ಆರೋಪ ಎಷ್ಟು ಸರಿ. ಎಡಪಕ್ಷಗಳಿಗೆ ಜಾತ್ಯಾತೀತತೆಯ ಬಗ್ಗೆ ಕಾಂಗ್ರೆಸ್ ಅಥವ ಬೇರೆ ಯಾರಿಂದಲೂ ಸರ್ಟಿಫಿಕೇಟಿನ ಅಗತ್ಯವೇನೂ ಇಲ್ಲ.

ಅಷ್ಟೇ ಅಲ್ಲ, ಬಾಬ್ರಿ ಮಸೀದಿ ಧ್ವಂಸದ ನಂತರದ ಅವಧಿಯಲ್ಲಿ ಕೇಂದ್ರದಲ್ಲಿ 1996ರಲ್ಲಿ ಒಂದು ಜಾತ್ಯಾತೀತ ಸಂಯುಕ್ತ ರಂಗ ಸರಕಾರ ರಚನೆಯಾದಾಗ ಕಾಂಗ್ರೆಸ್ ಹೊರಗಿನಿಂದ ಬೆಂಬಲ ಕೊಟ್ಟಿತು. ಆದರೆ ಒಂದು ವರ್ಷದೊಳಗೆ ಬೆಂಬಲ ಹಿಂತೆಗೆದು ಕೊಳ್ಳುವ ಬೆದರಿಕೆ ಹಾಕಿದಾಗ ಸಂಯುಕ್ತ ರಂಗ ಸರಕಾರ ಪ್ರಧಾನ ಮಂತ್ರಿಯನ್ನು ಬದಲಿಸಬೇಕಾಯಿತು. ಆದರೂ ಮತ್ತೆ ಒಂದು ವರ್ಷದೊಳಗೆ ಕಾಂಗ್ರೆಸ್ ಬೆಂಬಲವನ್ನು ಹಿಂತೆಗೆದು ಕೊಂಡಿತು. ಈ ಮೂಲಕ ಕೋಮುವಾದಿಗಳು ಅಧಿಕಾರಕ್ಕೆ ಬಂದು ವಾಜಪೇಯಿ ಸರಕಾರ 1998ರಿಂದ 2004ರವರೆಗೆ ಆಳ್ವಿಕೆ ನಡೆಸಲು ಅವಕಾಶವಾಯಿತು. ಅದಷ್ಟೇ ಅಲ್ಲ, ಆ ಎರಡೂ ಸಂದರ್ಭಗಳಲ್ಲಿ ಬಿಜೆಪಿಯೊಂದಿಗೆ ಮತನೀಡಿದ ಕಾಂಗ್ರೆಸ್ ನ ಮುಖಂಡರಿಗೆ ಈಗ ಎಡಪಕ್ಷಗಳು ಈ ಪರಮಾಣು ವ್ಯವಹಾರವನ್ನು ವಿರೋಧಿಸುವ ಭರದಲ್ಲಿ ಎಡಪಕ್ಷಗಳು ಬಿಜೆಪಿಯೊಂದಿಗೆ ಮತ ನೀಡುತ್ತಿವೆ ಎಂದು ಮೂದಲಿಸುವ ನೈತಿಕ ಹಕ್ಕಾದರೂ ಎಲ್ಲಿದೆ ಎಂಬುದು ಸಹಜವಾದ ಪ್ರಶ್ನೆ.



ಎಂದು ಹೇಳಲಾಗುತ್ತಿದೆ.

ಬೇಗನೆ ಚುನಾವಣೆ ನಡೆದರೆ ತನಗೆ ಸ್ವಲ್ಪ ಪ್ರಯೋಜನ ದೊರೆಯಬಹುದು ಎಂಬ ನಿರೀಕ್ಷೆಯಿಂದ ಬಿಜೆಪಿ ವಿಶ್ವಾಸಮತವನ್ನು ವಿರೋಧಿಸಬಹುದು. ಆದರೆ ಇದೊಂದೇ ಕಾರಣಕ್ಕೆ ಎಡಪಕ್ಷಗಳು ತಮ್ಮ ನಿರ್ಣಯವನ್ನು ಮರು ಪರಿಶೀಲಿಸಿ ಅಮೆರಿಕನ್ ಸಾಮ್ರಾಜ್ಯಶಾಹಿಯೊಂದಿಗೆ ಸಾಮರಿಕ ಸಂಬಂಧಗಳಿಗೆ ಸೌಲಭ್ಯ ಕಲ್ಪಿಸುವ , ಆಮೂಲಕ ಭಾರತವನ್ನು ಅದರ ಅಡಿಯಾಳು ಮಿತ್ರನಾಗಿ ಮಾಡುವ ಈ ವ್ಯವಹಾರಕ್ಕೆ ಅವಕಾಶ ನೀಡಬೇಕು ಎಂದು ಹೇಗೆ ತಾನೇ ನಿರೀಕ್ಷಿಸಲು ಸಾಧ್ಯ?

ವಂಚನೆ ಬೇಡ

ಕಳೆದ ನಾಲ್ಕು ವರ್ಷಗಳಿಂದ ಮನಮೋಹನ್ ಸಿಂಗ್ ಸರಕಾರ ಅನುಸರಿಸಿಕೊಂಡು ಬಂದಿರುವ ನೀತಿಗಳ ಪರಿಣಾಮವಾಗಿ ಜನಗಳ ಮೇಲೆ ಅಸಹನೀಯ ಆರ್ಥಿಕ ಹೊರೆಗಳು ಬಿದ್ದಿವೆ. ಇವು ಈಗಾಗಲೇ ಕೋಮುವಾದಿ ಶಕ್ತಿಗಳಿಗೆ ದೊಡ್ಡ ಚುನಾವಣಾ ಪ್ರಯೋಜನಗಳನ್ನು ಕೊಡಮಾಡಿವೆ. ಹಣದುಬ್ಬರದ , ಜೀವನಾವಶ್ಯಕ ವಸ್ತುಗಳ ಬೆಲೆಗಳ ನಾಗಾಲೋಟವನ್ನು ತಡೆಯುವಲ್ಲಿ ಈ ಸರಕಾರ ವಿಫಲವಾಗಿದೆ. ಕೃಷಿ ಬಿಕ್ಕಟ್ಟು ಆಳಗೊಂಡು ಗ್ರಾಮೀಣ ಭಾರತದಲ್ಲಿ ಉಂಟಾಗಿರುವ ಸಂಕಟವನ್ನು ನಿವಾರಿಸುವಲ್ಲಿ ಅದು ಅಸಮರ್ಥವಾಗಿದೆ. ಅತ್ತ ಕೋಮುವಾದವನ್ನು ಸೈದ್ಧಾಂತಿಕವಾಗಿ ಮತ್ತು ರಾಜಕೀಯವಾಗಿ ಎದುರಿಸುವಲ್ಲಿಯೂ ಅದು ಅಸಮರ್ಥವಾಗಿದೆ. ಇವೆಲ್ಲಾ ಈಗಾಗಲೇ ಕೋಮುವಾದಿ ಶಕ್ತಿಗಳಲ್ಲಿ ಮತ್ತೆ ಅಧಿಕಾರಕ್ಕೆ ಮರಳುವ ಹೊಸ ಆಸೆ ಚಿಗುರಿಸಿವೆ. ಹೀಗಿರುವಾಗ ಅವನ್ನೆಲ್ಲ ಎದುರಿಸುವ ಬದಲು ಕೇವಲ ಅಮೆರಿಕಾದೊಡನೆ ಯುದ್ಧತಂತ್ರಗಳಲ್ಲಿ, ಅದೂ ಒಂದು ಅಡಿಯಾಳು ಮಿತ್ರನಾಗಿ ಸೇರಿಕೊಳ್ಳಲು ಅವಕಾಶ ನೀಡಲಿಲ್ಲ ಎಂಬ ಕಾರಣಕ್ಕೆ ಕೋಮುವಾದದ ಬಗ್ಗೆ ಮಾತಾಡುವುದು ಜನಗಳಿಗೆ ಮಾಡುವ ವಂಚನೆಯಾಗುತ್ತದೆ.

ಒಂದೆಡೆಯಲ್ಲಿ ಕೋಮುವಾದದ ವಿರುದ್ಧ ಅವಿರತ ಹೋರಾಟ ನಡೆಸುತ್ತಲೇ, ಭಾರತವು ಅಮೆರಿಕನ್ ಸಾಮ್ರಾಜ್ಯಶಾಹಿಯ ಅಡಿಯಾಳಾಗದಂತೆ ನೋಡಿಕೊಳ್ಳಬೇಕಾದ ಹೊಣೆ ದೇಶದ ಎಲ್ಲಾ ಪ್ರಗತಿಪರ ಶಕ್ತಿಗಳ ಮೇಲಿದೆ. ○

'ಐಎಇಎ ಒಪ್ಪಂದ ನಮ್ಮನ್ನು ಹೈಡ್ ಆಕ್ಟ್ ನಿಂದ ಬಚ್ಚಿಡುವುದಿಲ್ಲ

– ಪ್ರಬೀರ್ ಪುರಕಾಯಸ್ಥ

ಪರಮಾಣು ನಿಶ್ಶಸ್ತ್ರೀಕರಣ ತಜ್ಞ

"ಸುರಕ್ಷಣಾ ಒಪ್ಪಂದದಲ್ಲಿನ ಅವಕಾಶಗಳನ್ನು ಅಸ್ಪಷ್ಟವಾಗಿಡುವುದು ಭಾರತದ ಹಿತಾಸಕ್ತಿಯಿಂದ ಒಳ್ಳೆಯದಲ್ಲ. ಅಂತರ್ರಾಷ್ಟ್ರೀಯ ಅಣುಶಕ್ತಿ ಸಂಸ್ಥೆ(ಐಎಇಎ)ಯ ವಿವಾದ ಇತ್ಯರ್ಥ ಅಂಗ ಒಂದು ತಟಸ್ಥ ಅಂಪೈರ್ ಅಲ್ಲ-ಅದು ಆ ಸಂಸ್ಥೆಯ ಆಡಳಿತಗಾರರ ಮಂಡಳಿ. ಇಲ್ಲಿ ವ್ಯಾಖ್ಯೆ ನೀಡುವಲ್ಲಿ ರಾಜಕೀಯವೇ ಪ್ರಮುಖ, ಕಾನೂನುಪರತೆ ಅಲ್ಲ. ಇರಾನಿನ ಸಂದರ್ಭದಲ್ಲಿ ಇದು ಕಂಡು ಬಂತು. ಪೂರ್ಣ ಪರಮಾಣು ಇಂಧನ ಆವರ್ತದ ಕಾನೂನು ಹಕ್ಕು ಅದಕ್ಕಿದ್ದರೂ ಐಎಇಎ ಆಡಳಿತಗಾರರ ಮಂಡಳಿ ಆ ವಿಷಯವನ್ನು ಅಮೆರಿಕಾದ ಒತ್ತಾಯದ ಮೇರೆಗೆ ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ನಿರ್ಬಂಧ ಹೇರಲು ಕಳಿಸಿತು. ಭಾರತ ಸರಕಾರವೂ ಸೇರಿದಂತೆ ಬಹುಪಾಲು ದೇಶಗಳು ಅಮೆರಿಕಾವನ್ನು ಹಿಂಬಾಲಿಸಿದ್ದು ಕಾನೂನು ಪಾಲಿಸಲಾಗುತ್ತಿದೆ ಎಂದು ಮನದಟ್ಟು ಮಾಡಿಕೊಂಡೇನಲ್ಲ, ಕೇವಲ ಅದರ ಭುಜಬಲದಿಂದಾಗಿ......

ಆದ್ದರಿಂದ 'ಸರಿಪಡಿಕೆ ಕ್ರಮಗಳು' ಎಂಬ ಅಸ್ಪಷ್ಟ ಪದವನ್ನು ಸುರಕ್ಷಣ ಒಪ್ಪಂದದ ಪ್ರಸ್ತಾವನೆಯಲ್ಲಿ ಬಳಸಿರುವುದರಿಂದ ಮುಂದೆ ಭಾರತ ಅದಕ್ಕೆ ಯಾವುದೇ ವ್ಯಾಖ್ಯೆ ಕೊಡಲು, ನೆರವಾಗುತ್ತದೆ ಎಂದು ಕೈತೊಳೆದುಕೊಳ್ಳುವುದು ಸಾಧ್ಯವಿಲ್ಲ. ಕಠಿಣ ಪರಿಸ್ಥಿತಿ ಬಂದಾಗ ಹೈಡ್ ಆಕ್ಟ್ ನ ಅಂಶಗಳದ್ದೇ ಕೈಮೇಲಾಗುತ್ತದೆ. ಸರಕಾರ ಏನೇ ಹೊಸೆಯಲಿ, ಇದು ಭಾರತ- ಐಎಇಎ ಒಪ್ಪಂದದಲ್ಲೇ ಅಡಕವಾಗಿದೆ."

★

'ವಾಸ್ತವ ಸಂಗತಿಗಳಿಂದ ತೀರ್ಮಾನಿಸಿ, ಕೇವಲ ನಂಬಿಕೆಗಳಿಂದಲ್ಲ'

– ಅಶೋಕ ಪಾರ್ಥಸಾರಥಿ

ಪ್ರಧಾನಮಂತ್ರಿ ಇಂದಿರಾಗಾಂಧಿಯವರಿಗೆ ವಿಜ್ಞಾನ ಸಲಹೆಗಾರರಾಗಿದ್ದವರು

"ಇತ್ತೀಚಿನ ಒಂದು ಪತ್ರಿಕಾ ಸಂಪಾದಕೀಯ 'ತನ್ನ ಸರಕಾರವನ್ನೇ ಒಂದು ನಂಬಿಕೆಯ ವಿಷಯದಲ್ಲಿ ಪಣಕ್ಕಿಡಲು ಖಂಡಿತಾ ರಾಜಕೀಯ ಧೈರ್ಯ ಬೇಕು' ಎಂದಿದೆ. ಇದು ಅತ್ಯಂತ ಆಶ್ಚರ್ಯಕರ. ಎಲ್ಲಾ ಸಾರ್ವಜನಿಕ ಧೋರಣೆಗಳು ವಾಸ್ತವ ಸಂಗತಿಗಳನ್ನು ಆಧರಿಸಿರಬೇಕು. ಇಲ್ಲಿ ವಾಸ್ತವ ಸಂಗತಿಗಳೆಂದರೆ ಹೈಡ್ ಆಕ್ಟ್ ಮತ್ತು 123 ಒಪ್ಪಂದ. ಈ ವ್ಯವಹಾರದ ಪ್ರತಿಪಾದಕರು ವಾಕರಿಕೆ ಬರುವಷ್ಟು ಬಳಸಿರುವ ಒಂದು ಪದವೆಂದರೆ ಇದು ನಮ್ಮ 'ರಾಷ್ಟ್ರೀಯ ಹಿತಾಸಕ್ತಿ' ಗೆ ಅನುಗುಣವಾಗಿದೆ ಎಂದು. ಹೌದೇ? ಇಲ್ಲ ಎಂದೇ ನನಗನಿಸುತ್ತದೆ. ಏಕೆ? ಹೈಡ್ ಮತ್ತು 123ರ ಸ್ವರೂಪ, ವ್ಯಾಪ್ತಿ, ವಿಷಯ, ಆಶಯ ಮತ್ತು ವಿವರವಾದ ಅಂಶಗಳೇ ಕಾರಣ........

ವಾಸ್ತವ ಸಂಗತಿಗಳು ಮತ್ತು ಅವನ್ನು ಆಧರಿಸಿದ ವಿಶ್ಲೇಷಣೆ ಇಂತಹ ಒಂದು ಅತ್ಯಂತ ಕ್ಲಿಷ್ಟ ರಾಜಕೀಯ-ತಾಂತ್ರಿಕ-ಕಾನೂನು ಒಪ್ಪಂದದಲ್ಲಿ ವಾಸ್ತವ ಸಂಗತಿಗಳು ನಂಬಿಕೆಗಳನ್ನು ಬದಿಗಿಡಬೇಕು, ಅವು ಯಾರದೇ ನಂಬಿಕೆಗಳಾಗಿರಲಿ. ಪರಮಾಣು ವ್ಯವಹಾರ ರಾಷ್ಟ್ರೀಯ ಹಿತಾಸಕ್ತಿಗೆ ಅನುಗುಣವಾಗಿದೆ ಎಂದು ಎಷ್ಟೇ ಬಾರಿ ವಾಕರಿಕೆ ಬರುವವರೆಗೆ ಹೇಳಿದರೂ ಪ್ರಯೋಜನವಿಲ್ಲ."

★

'ಅಮೆರಿಕಾದೊಂದಿಗೆ ಭುಜಕ್ಕೆ ಭುಜಕೊಟ್ಟು ನಿಲ್ಲುತ್ತೇವೆ ಎಂಬ ಪ್ರಧಾನಿಗಳ ಉದ್ಗಾರವನ್ನು ಇರಾಕಿಗಳು, ಅಫಘಾನರು ಮತ್ತು ಭಾರತದ ಚಿಂತನಶೀಲರೂ ಒಪ್ಪುವುದು ಕಷ್ಟ'

– ಎಂ.ಕೆ.ಭದ್ರಕುಮಾರ್

ಭಾರತದ ಮಾಜೀ ರಾಯಭಾರಿ, ಭಾರತೀಯ ವಿದೇಶ ಸೇವೆಯ ಅಧಿಕಾರಿ

"ಕಳೆದ ಬುಧವಾರ ಹೊಕ್ಕೈಡೋದಲ್ಲಿ' ಭಾರತ ಮತ್ತು ಅಮೆರಿಕಾ ಎತ್ತರಕ್ಕೆ ನಿಲ್ಲಬೇಕು, ಭುಜಕ್ಕೆ ಭುಜ ಕೊಟ್ಟು, ಅದು ಈಗ ಸಂಭವಿಸಲಿದೆ? ಎಂಬ ಪ್ರಧಾನ ಮಂತ್ರಿ ಮನಮೋಹನ ಸಿಂಗರ ಟಿಪ್ಪಣಿ ಒಂದು ದುರದೃಷ್ಟಕರ ಹೇಳಿಕೆ. ಏತಕ್ಕಾಗಿ ಪ್ರಧಾನ ಮಂತ್ರಿಗಳು ಸಮಕಾಲೀನ ವಿಶ್ವ ಸನ್ನಿವೇಶದಲ್ಲಿ ಇಂತಹ ಒಂದು ಹೇಳಿಕೆ ನೀಡುವಂತಾಯಿತು ಎಂದು ನಮಗೆಂದೂ ತಿಳಿಯಲಿಕ್ಕಿಲ್ಲ. ಪಕ್ಕದಲ್ಲಿ ನಿಂತಿದ್ದ ಅಮೆರಿಕಾದ ಅಧ್ಯಕ್ಷ ಜಾರ್ಜ್ ಬುಶ್‌ರವರನ್ನು ಅಟ್ಟಕ್ಕೇರಿಸಲು ಹೇಳಿದ್ದರೂ ಈ ವೈಯಕ್ತಿಕ ರಾಯಭಾರ ಬಹಳ ಜಾಸ್ತಿಯೇ ಆಯಿತು. ಹಾಗೆ ಹೇಳುವಾಗ ಡಾ. ಸಿಂಗ್ ತನ್ನ ಈ ಅಭಿಪ್ರಾಯವನ್ನು ನಮ್ಮ (ಭಾರತೀಯ) ಜನಗಳ ಚಿಂತನಶೀಲ ವಿಭಾಗ ಕೂಡ ಒಪ್ಪುತ್ತದೆ ಎಂದು ಸೇರಿಸಿದ್ದು ಆಶ್ಚರ್ಯಕರ.

ಡಾ.ಸಿಂಗ್ ರವರ ಹೇಳಿಕೆ ಪ್ರಸಕ್ತ ಪ್ರಾದೇಶಿಕ ಮತ್ತು ಅಂತರ್ರಾಷ್ಟ್ರೀಯ ಸನ್ನಿವೇಶದಲ್ಲಿ ಬಹಳ ಎಡವಟ್ಟು ಉಂಟು ಮಾಡುತ್ತದೆ. ಡಾ.ಸಿಂಗ್ ಹೀಗೆ ಹೇಳಿದ ಸ್ವಲ್ಪ ಸಮಯದಲ್ಲೇ ಒಂದು ಅಮೆರಿಕನ್ ವಿಮಾನ ಅಫಘಾನಿಸ್ತಾನದ ಮೇಲೆ ಮತ್ತೊಂದು ಯುದ್ಧಾಪರಾಧ ಎಸಗಿತು. ಒಂದು ಮದುವೆ ದಿಬ್ಬಣದಲ್ಲಿದ್ದ 41 ಅಫಘಾನ್ ನಾಗರಿಕರನ್ನು ಕೊಂದಿತು. ಇವರಲ್ಲಿ ಹೆಚ್ಚಿನವರು ಮಹಿಳೆಯರು ಮತ್ತು ಮಕ್ಕಳು. ಮತ್ತೆ ಯುದ್ಧ-ವಿರೋಧಿ ಚಳುವಳಿಗಾರರ ಒಂದು ಪ್ರಖ್ಯಾತ ವೇದಿಕೆ ಜುಲೈ 9ರ ವೇಳೆಗೆ, ಅಂದರೆ ಡಾ.ಸಿಂಗ್ ಹಾಗೆಂದು ಹೇಳಿದ ದಿನದ ವರೆಗೆ 2003ರ ಅಮೆರಿಕನ್ ಅತಿಕ್ರಮಣದಲ್ಲಿ 12,36,604 ಇರಾಕಿಗಳು ಪ್ರಾಣ ಕಳಕೊಂಡರು ಎಂಬ ಅಂಕಿ-ಅಂಶ ಪ್ರಕಟಿಸಿದೆ.

ಈ ಸಂದರ್ಭದಲ್ಲಿ ನಾವು ಬುಶ್ ಆಡಳಿತದೊಂದಿಗೆ ಎತ್ತರಕ್ಕೆ , ಭುಜಕ್ಕೆ ಭುಜಕೊಟ್ಟು ನಿಲ್ಲುತ್ತೇವೆ ಎನ್ನುವಾಗ ಆ ದುರ್ದೈವಿ ಅಫಘಾನರು ಮತ್ತು ಇರಾಕಿಗಳು ನಾವು ಭಾರತೀಯರ ಬಗ್ಗೆ ಎಷ್ಟೊಂದು ಹೀನವಾಗಿ ಯೋಚಿಸಬಹುದು! ಭಾರತೀಯರ ಚಿಂತನಶೀಲ ವಿಭಾಗ ಕೂಡಾ ಇದನ್ನು ಒಪ್ಪುವುದು ಬಹಳ ಕಷ್ಟ."

★

'ಭಾರತದ ಸಂವಿಧಾನಿಕ ಕಣ್ನೋಟಕ್ಕೆ ಬಗೆದ ವಿಶ್ವಾಸದ್ರೋಹ'

– ವಿ.ಆರ್.ಕೃಷ್ಣ ಅಯ್ಯರ್

ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು

"ಈ ವ್ಯವಹಾರದ ಗಂಭೀರ ಪರಿಣಾಮಗಳು ಬಹಳ ಆಳವಾಗಿವೆ. ಡಾ. ಮನಮೋಹನ್ ಸಿಂಗ್ ಮಾಡು-ಇಲ್ಲವೆ- ಮಡಿ ಎಂಬ ದೃಢ ನಿಶ್ಚಯದಿಂದ ಲೋಕಸಭೆಯ ವಿಶ್ವಾಸ ಮತವನ್ನು ಕೇಳಿರುವುದರಿಂದಲೇ ಇದು ಸ್ಪಷ್ಟ. ಅವರು ತಮ್ಮ ಸರಕಾರದ ಉಳಿವನ್ನೇ ಈ ಇಂಧನ ವ್ಯವಹಾರದಲ್ಲಿ ಪಣಕ್ಕಿಟ್ಟಿದ್ದಾರೆ. ಸದನದಲ್ಲಿ ಯಾರೇ ಮತ ಗೆದ್ದರೂ ದೇಶ ತನ್ನ ಸೌಹಾರ್ದತೆ, ಸಮಗ್ರತೆ ಮತ್ತು ಸೋದರತ್ವವನ್ನು ಕಳಕೊಂಡಿದೆ. ಅಮೆರಿಕನ್ ದೊಡ್ಡ ವ್ಯಾಪಾರಸ್ಥರ ಹೂಡಿಕೆಗಳನ್ನು ಪ್ರೋತ್ಸಾಹಿಸುವ ಜಾರ್ಜ್ ಬುಶ್‌ರವರ ಹಮಾರಿ ಪ್ರಾಬಲ್ಯ ಮೆರೆಸುವ ಕಾರ್ಯತಂತ್ರ ಭಾರತದ ರಾಷ್ಟ್ರೀಯ ಧೋರಣೆ ಆಗಿಬಿಟ್ಟಿದೆ. ಸೋನಿಯಾ-ಮನಮೋಹನ್ ವಚನ ಅದಕ್ಕೆ ಅನುಕೂಲ ಕಲ್ಪಿಸಿ ಕೊಟ್ಟಿದೆ. ಇದರಿಂದ ನೆಹರೂ-ಇಂದಿರಾ ಸಮಾಜವಾದಿ ಮಾದರಿ ಅಲಿಪ್ತ ನಿಲುವು ಮತ್ತು ಪಂಚಶೀಲದ ನೀತಿಗಳನ್ನು ಕೈಬಿಟ್ಟಂತೆಯೇ. ಈ ಮೂಲಭೂತ ಸಮರ ಈ ವಿವಾದದ ಜ್ವಲಂತ ತಿರುಳು. ಈ ಅಸಹ್ಯಕರ ಬಚ್ಚಿಟ್ಟ ಅಜೆಂಡಾ ವಾಸ್ತವವಾಗಿ ಭಾರತೀಯ ಜನತೆಯ ಐತಿಹಾಸಿಕವಾದ "ಅದೃಷ್ಟದೊಡನೆ ಸಮಾಗಮ"ದ ಸೋಲಿಗೆ ಕಾರಣವಾಗಬಹುದು, ಭಾರತದ ಸಂವಿಧಾನಿಕ ಕಣ್ನೋಟ ಮತ್ತು ಗುರಿಸಾಧನೆಗೆ ಬಗೆದ ವಿಶ್ವಾಸಘಾತವಾಗಬಹುದು,

ಒಂದು ಸರಳ ಒಪ್ಪಂದ ಕುರಿತಾದ ವಿವಾದದಂತೆ ಕಾಣುವ ಇದರಲ್ಲಿ ಅಡಕವಾಗಿರುವ ಸೈದ್ಧಾಂತಿಕ ಸಮರದ ನಿಜ ಸ್ವರೂಪವನ್ನು ಕಡೆಗಣಿಸದಿರೋಣ. ಪರಮಾಣು ನೆಪದಿಂದ ನಾವು ಮೋಸ ಹೋಗುವುದು ಬೇಡ."

★

'ಇದು ಬಲಪಂಥದತ್ತ ತಿರುವು'

– ಪ್ರಫುಲ್ ಬಿದ್ವಯಿ

ಪ್ರಸಿದ್ಧ ಅಂಕಣಕಾರ

ವಾಸ್ತವವಾಗಿ ಇದು ಒಂದು ಕೆಟ್ಟ ಚೌಕಾಸಿ. ಮನಮೋಹನ ಸಿಂಗ್ ಕಟ್ಟಾ ನವ-ಉದಾರವಾದಿಗಳ ಒಂದು ತಂಡವನ್ನೇ ನಿರ್ಮಿಸಿದ್ದು, ಅವರು ಎಡಪಕ್ಷಗಳ ಬಲವಾದ ವಿರೋಧದ ನಡುವೆ ಈ ಚೌಕಾಸಿಯನ್ನು ಮುಂದೊತ್ತಲು ಇನ್ನೊಂದು ತರ್ಕ ಒದಗಿಸಿದರು. ಎಡಪಕ್ಷಗಳೊಂದಿಗೆ ಸಂಬಂಧ ಕಡಿದುಕೊಂಡರೆ ಯುಪಿಎ ಗೆ ಹಲವಾರು 'ಮುಕ್ತ ಮಾರುಕಟ್ಟೆ' ಕ್ರಮಗಳನ್ನು ತರಲು ಸಾಧ್ಯವಾಗುತ್ತದೆ ಎಂದು. ಎಡಪಕ್ಷಗಳಿಂದಾಗಿ ಇದುವರೆಗೆ ಇವನ್ನು ತಡೆಹಿಡಿಯಬೇಕಾಗಿ ಬಂದಿತ್ತು - ಖಾಸಗೀಕರಣ, ಸಾರ್ವಜನಿಕ ವಲಯದ ಕಂಪನಿಗಳ ಶೇರುಗಳ ಮಾರಾಟ, ಕಾರ್ಮಿಕ ಹಕ್ಕುಗಳನ್ನೆಲ್ಲಾ ಕಳಚಿ ಹಾಕುವುದು, ಹಲವು ವಲಯಗಳಲ್ಲಿ ವಿದೇಶಿ ನೇರ ಹೂಡಿಕೆ ಮಿತಿ ಹೆಚ್ಚಳ ಇತ್ಯಾದಿ..... ಆದರೆ ಇಂತಹ ಒಂದು ನಿರ್ಣಯದ ರಾಜಕೀಯ ಪರಿಣಾಮಗಳು ಬಹಳ ಸ್ಪಷ್ಟ. ಎಸ್‌ಪಿಯೊಂದಿಗೆ ಯುಪಿಎ ಅಧಿಕಾರ ಹಂಚಿಕೊಳ್ಳುವ ಮೈತ್ರಿ ಕೇವಲ ಒಂದು ಕಾರ್ಯತಂತ್ರದ ಬದಲಾವಣೆಯಲ್ಲ. ಕೋಮುವಾದದ ವಿರುದ್ಧ ಒಂದು ಕಾವಲು ಬುರುಜಿನಂತಿದ್ದ, ಪಿ. ಚಿದಂಬರಂ ರವರೇ ಹೇಳಿದಂತೆ 'ಯುಪಿಯ ಯ ಪ್ರಜ್ಞೆಯಂತೆ' ಕೆಲಸ ಮಾಡಿದ, ಅದರ ನೀತಿಗಳನ್ನು ಪ್ರಗತಿಪರ ದಿಕ್ಕಿನಲ್ಲಿ ಪ್ರಭಾವಿಸಿದ ಎಡಪಕ್ಷಗಳೊಂದಿಗಿನ ರಾಜಕೀಯ ಮೈತ್ರಿಯಿಂದ ಪಲ್ಲಟಗೊಂಡು ಯುಪಿಎ, 1990ರ ದಶಕದಲ್ಲಿ ಬಿಜೆಪಿಯನ್ನು ವಿರೋಧಿಸಿದ ದಾಖಲೆಯಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಅದರೊಂದಿಗೆ ಚೆಲ್ಲಾಟ ನಡೆಸಿರುವ, ಸಂಘ ಪರಿವಾರಕ್ಕೆ ಹಲವು ವಿಧಗಳಲ್ಲಿ ನೆರವಾಗಿರುವ, ಎಲ್ಲಾರೀತಿಗಳ ವ್ಯಾಪಾರಸ್ಥರೊಂದಿಗೆ ನಿಕಟ ಸಂಪರ್ಕ ಹೊಂದಿರುವ ಎಸ್‌ಪಿ ಯತ್ತ ವಾಲುತ್ತಿದೆ. ○

.......ಹೈಡ್ ಆಕ್ಟ್ ದೇಶಕ್ಕೆ ಅಘಾತಕಾರಿ

ಪುಟ 7 ರಿಂದ

ಬಗೆಯ ತಾಂತ್ರಿಕತೆಯ ಬಗ್ಗೆ ನಿರ್ಬಂಧ ಮುಂದುವರಿಯುತ್ತದೆ. ಈ ಒಪ್ಪಂದದ ಅನ್ವಯ ನಿರ್ಬಂಧದಿಂದ ಮುಕ್ತವಾಗುವುದು ಒಂದೇ ಒಂದು ವಿಷಯದಲ್ಲಿ. ಅದು ಯಾವುದೆಂದರೆ ಅಮೇರಿಕಾ ಮತ್ತು ಇತರೆ ದೇಶದಿಂದ ಅತಿ ದುಬಾರಿಯ ರಿಯಾಕ್ಟರ್‌ಗಳನ್ನು ಖರೀದಿಸುವ ಬಗ್ಗೆ ಮಾತ್ರ. ಈ ಒಪ್ಪಂದ ಅಮೇರಿಕಾ ಹಾಗೂ ಇತರೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸಂಕಷ್ಟದಲ್ಲಿರುವ ಅಣು ಕೈಗಾರಿಕೆಯನ್ನು ಪುನಃ ಚೇತನಗೊಳಿಸುವ ಯೋಜನೆ ಆಗಿದೆ ವಿನಃ ಭಾರತದಲ್ಲಿ ಅಣು ವಿದ್ಯುತ್ ಅನ್ನು ಉತ್ಪಾದಿಸುವುದಕ್ಕಲ್ಲ.

ಅಮೇರಿಕಾ ಎಲ್ಲ ತಾಂತ್ರಿಕತೆಯ ಬಗ್ಗೆ ತನ್ನ ನಿರ್ಬಂಧಗಳನ್ನು ತೆಗೆದುಹಾಕಿದ್ದರೂ ಸಹ ಈ ತಾಂತ್ರಿಕತೆಯನ್ನು ಪಡೆಯಲು 40 ಎನ್‌ಎಸ್‌ಜಿ ದೇಶಗಳು ಸಹ ತಮ್ಮ ಪಾಲಿನ ಎಲ್ಲ ನಿರ್ಬಂಧಗಳನ್ನು ತೆಗೆದು ಹಾಕಬೇಕಾಗಿದೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಅದೇ ಸಮಯದಲ್ಲಿ ಎನ್‌ಎಸ್‌ಜಿಯ ಇತರೆ ದೇಶಗಳ ಮೇಲೆ ಅಮೇರಿಕಾ ಯಾವ ರೀತಿಯ ವಿನಾಯಿತಿಯನ್ನು ಭಾರತಕ್ಕೆ ಕೊಡಲಾಗಿದೆಯೋ ಅದೇ ರೀತಿಯ ವಿನಾಯಿತಿಯನ್ನು ಅಮೇರಿಕಾ ಒತ್ತಾಯ ಮಾಡಬೇಕೆಂದು ಹೈಡ್ ಆಕ್ಟ್ ನಿರ್ದಿಷ್ಟವಾಗಿ ಹೇಳುತ್ತದೆ. ಇಲ್ಲದೆ ಇದ್ದರೆ ಈ ಒಪ್ಪಂದ ಅಮೇರಿಕಾದ ಆರ್ಥಿಕ ಹಿತಾಸಕ್ತಿಗೆ ಧಕ್ಕೆಯನ್ನುಂಟುಮಾಡುತ್ತದೆ. ಆದರೆ ಅಮೇರಿಕಾದ ವಿದೇಶಾಂಗ ವ್ಯವಹಾರಗಳ ಸಮಿತಿ ನಿರ್ದಿಷ್ಟವಾಗಿ ಏನು ಉತ್ತರ ಕೊಟ್ಟಿದೆ ಎಂದು ಗೊತ್ತಿಲ್ಲ. ಆದರೆ ಇತ್ತೀಚೆಗೆ ಅಮೇರಿಕಾ ವಿಷಯದಲ್ಲಿ ಎನ್‌ಎಸ್‌ಜಿ ದೇಶಗಳು ನಿಗದಿಪಡಿಸಿರುವ ಮಾರ್ಗದರ್ಶನ ಸೂಚನೆಗಳನ್ನು ಬೆಂಬಲಿಸಿದೆ. ಈ ಮಾರ್ಗದರ್ಶಿ ಸೂಚನೆಗಳು ಸಿಟಿಬಿಟಿ ಸಹಿ ಹಾಕದಿರುವ ರಾಷ್ಟ್ರಗಳಿಗೆ ತಂತ್ರಜ್ಞಾನ ವರ್ಗಾವಣೆಯ ನಿರ್ಬಂಧ ಹೇರಿದೆ. ಭಾರತ ಸಿಟಿಬಿಟಿಗೆ ಸಹಿ ಹಾಕಿರುವುದಿಲ್ಲ. ಪರಮಾಣು ರಿಯಾಕ್ಟರುಗಳ ಪರಿಪೂರ್ಣ ತನಿಖೆಗೆ ಅವಕಾಶ ಕೊಡದಿರುವ ದೇಶಗಳಿಗೆ ಐಎಇಎ (ಅಂತರಾಷ್ಟ್ರೀಯ ಪರಮಾಣು ಶಕ್ತಿ ಸಂಘ) ನಿರ್ಬಂಧವನ್ನು ಹೇರಿದೆ. ಆದುದರಿಂದ ಭಾರತ ಎನ್‌ಎಸ್‌ಜಿ ರಾಷ್ಟ್ರಗಳಿಂದ ಪರಿಪೂರ್ಣ ವಿನಾಯ್ತಿ ಪಡೆಯಲು ಹೇಗೆ ಸಾಧ್ಯ? ಹಾಗೆ ವಿನಾಯ್ತಿ ಪಡೆಯುವುದು ಕಷ್ಟಸಾಧ್ಯವೆಂದು ಹಲವಾರು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಹೊರ ನಡೆದರೆ?

ಅಮೇರಿಕಾ ಈ ಅಣು ಒಪ್ಪಂದದಿಂದ ಹೊರನಡೆದರೆ ಅದರ ಪರಿಣಾಮ ಏನಾಗುತ್ತದೆ ಎಂಬುದೇ ಮುಂದಿನ ಪ್ರಶ್ನೆ. ಭಾರತದ ರಿಯಾಕ್ಟರುಗಳಿಗೆ ಅಣುಶಕ್ತಿ ಉತ್ಪಾದನೆಗೆ ಬೇಕಾದ ಇಂಧನವನ್ನು ಬೇರೆ ಮೂಲಗಳಿಂದ ಪಡೆಯಲು ಅಮೇರಿಕಾ ಸಹಾಯ ಮಾಡಬೇಕೆಂಬ ಕಾನೂನುಬದ್ಧ ಹೊಣೆಗಾರಿಕೆ ಇದೆಯೇ? ಒಪ್ಪಂದವನ್ನು ರದ್ದುಪಡಿಸಲು ಕನಿಷ್ಟ ಒಂದು ವರ್ಷದ ಸೂಚನೆ ಇಲ್ಲದೆ ಒಪ್ಪಂದ ರದ್ದು ಮಾಡುವ ಅಧಿಕಾರವಿಲ್ಲ ಎಂಬ ಕಾಲಮಿತಿಯ ಅಂಶ ನಿಯಮದಲ್ಲಿ ಅಳವಡಿಸಲಾಗಿದೆಯೇ ಅಥವಾ ತನಗಿಷ್ಟ ಬಂದಂತೆ ತತ್‌ಕ್ಷಣವೇ ರದ್ದುಗೊಳಿಸುವ ಅಧಿಕಾರ ಹೊಂದಿದೆಯೇ? ಈ ಪ್ರಶ್ನೆಗಳಿಗೆ ಅಮೇರಿಕಾ ಸರ್ಕಾರ ಕೊಟ್ಟಿರುವ ಉತ್ತರ : ಒಪ್ಪಂದವನ್ನು ರದ್ದುಪಡಿಸುವ ಬಗ್ಗೆ ಈ ರೀತಿಯಾದ ಯಾವುದೇ ಕಾನೂನುಬದ್ಧ ಅಧಿಕಾರವಿಲ್ಲ. ಅದೇ ರೀತಿ ಒಪ್ಪಂದವನ್ನು ರದ್ದುಪಡಿಸಲು ಒಂದು ವರ್ಷದ ಕಾಲಾವಕಾಶ ಕೊಡುವ ಕಾನೂನುಬದ್ಧ ಹೊಣೆಗಾರಿಕೆ ಇಲ್ಲವೆಂದು ತಿಳಿದುಬಂದಿದೆ. ತನಗೆ ಇಷ್ಟಬಂದ ಸಮಯದಲ್ಲಿ ಒಡಂಬಡಿಕೆಯನ್ನು ರದ್ದುಪಡಿಸುವ ಅಧಿಕಾರ ಅಮೇರಿಕಾಕ್ಕೆ ಇದೆ. ಆದರೆ ಈ ತೀರ್ಮಾನವನ್ನು ತೆಗೆದುಕೊಳ್ಳಲು ಒಪ್ಪಂದವನ್ನು ರದ್ದುಪಡಿಸುವಂತಹ ಕೆಲವು ಕ್ರಮವನ್ನು ಭಾರತ ತೆಗೆದುಕೊಂಡಿದೆ ಎಂದು ಅಮೇರಿಕಾ ತೀರ್ಮಾನಕ್ಕೆ ಬರಬೇಕಾಗುತ್ತದೆ. ಅದೇ ಸಮಯದಲ್ಲಿ ಈ ಕಾರಣಗಳು ಏನು ಬೇಕಾದರೂ ಆಗಬಹುದು. ತೀರ್ಮಾನಕ್ಕೆ ಬರಲು ಉಭಯ ಪಕ್ಷಗಳಿಗೂ ಸ್ವಾತಂತ್ರ್ಯ ಇದೆ. ಉದಾಹರಣೆಗೆ : ಇರಾನಿನ ಬಗ್ಗೆ ಇಂತಹ ತೀರ್ಮಾನ ತೆಗೆದುಕೊಳ್ಳಲು ಹೈಡ್ ಆಕ್ಟಿನ ಅನ್ವಯ ಈಗ ಅಮೇರಿಕಾ ಪ್ರತಿಪಾದಿಸುತ್ತಿರುವ ಸಕಾರಣವಲ್ಲದ ಕಾರಣಗಳು ಸಾಕಾಗಬಹುದು.

ಇಂಧನ ಸರಬರಾಜಿನ ಬಗ್ಗೆ ಭರವಸೆ:

ಭಾರತದ ರಿಯಾಕ್ಟರ್‌ಗಳಿಗೆ ಇಂಧನ ಸರಬರಾಜಿನ ಬಗ್ಗೆ ಅಮೇರಿಕಾದ ಭರವಸೆ 123 ಒಪ್ಪಂದದ ಪ್ರಮುಖವಾದ ಅಂಶ. ಈ ಬಗ್ಗೆಯೂ ಸಹ ಅಮೇರಿಕಾದ ವಿದೇಶಾಂಗ ಸಮಿತಿ ಅಮೇರಿಕಾ ಸರ್ಕಾರದಿಂದ ವಿವರವಾದ ವಿವರಣೆಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಕೇಳಿದೆ. ಅಣು ಒಪ್ಪಂದವನ್ನು ರದ್ದುಮಾಡಿ 123 ಒಪ್ಪಂದದ 12ನೇ ನಿಯಮದ ಅನ್ವಯ ಅಮೇರಿಕಾ ಒಂದು ವೇಳೆ ಇಂಧನ ಸರಬರಾಜನ್ನು ನಿಲ್ಲಿಸಿದಲ್ಲಿ ಅದಕ್ಕೆ ಬದಲಿ ವ್ಯವಸ್ಥೆ ಮಾಡಿಕೊಳ್ಳಲು ಕಟಿಬದ್ಧವಾಗಿದೆ ಎಂದು ಭಾರತ ಸರ್ಕಾರದ ಪರವಾಗಿ ವ್ಯಾಖ್ಯಾನ ಮಾಡಲಾಗುತ್ತಿದೆ. ಆದರೆ ಅಮೇರಿಕಾ ಸರ್ಕಾರದ ಅಣು ಒಪ್ಪಂದಕ್ಕೆ ಸಂಬಂಧಪಟ್ಟ ಇಲಾಖೆ ಅಂತಹ ಸಂದರ್ಭದಲ್ಲಿ ಇತರೆ ಕಡೆಗಳಿಂದ ಇಂಧನ ಪಡೆಯಲು ಸಹಾಯ ಮಾಡಬೇಕೆಂಬ ಬದ್ಧತೆ ಇಲ್ಲ ಹಾಗೂ ಇಂಧನವನ್ನು ಸರಬರಾಜು ಮಾಡುವ ಯಾವುದೇ ಭರವಸೆ 123 ಒಪ್ಪಂದದಲ್ಲಿ ಇಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಅಣುಶಕ್ತಿಯ ಬಗ್ಗೆ ವಿಧಿಸಲಾಗಿರುವ ದಿಗ್ಬಂಧವನ್ನು ತೆಗೆದುಹಾಕುವಂತಹ ಅಂಶವಾಗಲೀ, ಒಪ್ಪಂದವನ್ನು ರದ್ದುಪಡಿಸುವ ಸಮಯದಲ್ಲಿ ಅದರ ರದ್ಧತಿಗೆ ಒಂದು ವರ್ಷದ ಕಾಲಾವಕಾಶ ಕೊಡುವ ಅಂಶವಾಗಲೀ, ಬದಲಿ ಇಂಧನ ಪೂರೈಕೆಗೆ ವ್ಯವಸ್ಥೆ ಮಾಡಿಕೊಡುವ ಬದ್ಧತೆಯಾಗಲೀ 123 ಒಪ್ಪಂದದಲ್ಲಿ ಕಾಣುವುದಿಲ್ಲವೆಂಬುದು ಎಡಪಕ್ಷಗಳ ಆತಂಕವಾಗಿದೆ. ಎಡಪಕ್ಷಗಳ ತಿಳುವಳಿಕೆ ಪ್ರಕಾರ

→

ಯುರೇನಿಯಂ ಕೊರತೆ : ಕಾಲ್ಪನಿಕ ಕಟ್ಟುಕತೆ

ಭಾರತ ದೇಶದಲ್ಲಿನ ಯುರೇನಿಯಂ ಕೊರತೆ ಕಾಲ್ಪನಿಕ ಕಟ್ಟುಕತೆ ಎಂದು ಎಡಪಕ್ಷಗಳು ಸ್ಪಷ್ಟಪಡಿಸಿ ಹೇಳಿಕೆ ಕೊಟ್ಟಿವೆ. ಸರ್ಕಾರದ ದಾಖಲೆಗಳ ಪ್ರಕಾರ ಪಿ.ಡಬ್ಲ್ಯು.ಡಿ (power reactors) ರಲ್ಲಿ 330 ವರ್ಷ 10,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವಷ್ಟು ಯುರೇನಿಯಂ ನಮ್ಮಲ್ಲಿ ಇದೆ ಎಂದು ವ್ಯಕ್ತವಾಗುತ್ತದೆ, ಕೇಂದ್ರದ ಸಚಿವರಾದ ಜಯರಾಮ್ ರಮೇಶ್‌ರವರು ಈಗಿರುವ ರಿಯಾಕ್ಟರನ್ನು ಉಪಯೋಗಿಸಿ ನಿಗದಿತ 4000 MW: ವಿದ್ಯುತ್ ಉತ್ಪಾದಿಸಲು ಸಾಕಾಗುವಷ್ಟು ಯುರೇನಿಯಂ ನಮ್ಮ ದೇಶದಲ್ಲಿ ಇಲ್ಲ ಎಂದು ಹೇಳುತ್ತಿದ್ದಾರೆ. ಭೂಮಿಯೊಳಗೆ ಯುರೇನಿಯಂ ನಿಕ್ಷೇಪ ಇದ್ದರೂ ಸಹ ವಿದ್ಯುತ್ ಶಕ್ತಿ ಉತ್ಪಾದಿಸಲು ಅಣುಶಕ್ತಿ ಕೇಂದ್ರಕ್ಕೆ ಯುರೇನಿಯಂ ಏಕೆ ಇಲ್ಲ ಎಂಬುದೇ ಯಕ್ಷಪ್ರಶ್ನೆ.

ಈ ಪ್ರಶ್ನೆಗೆ ಉತ್ತರ ಹುಡುಕಲು ನಾವು ಮನಮೋಹನಸಿಂಗ್‌ರವರು ದೇಶದ ಅರ್ಥಮಂತ್ರಿ ಹಾಗೂ ಮೋಂಟೇಕ್‌ಸಿಂಗ್ ಅಹ್ಲುವಾಲಿಯಾರವರು ಅರ್ಥ ಶಾಖೆಯ ಕಾರ್ಯದರ್ಶಿಯಾಗಿದ್ದ ಕಾಲಕ್ಕೆ ಹೋಗಬೇಕಾಗಿದೆ. ಈ ಇಬ್ಬರೂ ಮೇಧಾವಿಗಳು ಆಗ ಅಣುಶಕ್ತಿಗೆ ಸಂಬಂಧಪಟ್ಟ ವಿಭಾಗದ ಬಡ್ಜೆಟ್‌ನ್ನು ಕಡಿತಗೊಳಿಸಿದ್ದರಿಂದ ಯುರೇನಿಯಂ ನಿಕ್ಷೇಪದ ಗಣಿ ಕೈಗಾರಿಕೆಗೆ ತೀವ್ರತರವಾದ ಕೊರತೆ ಉಂಟಾಯಿತು. ಯುರೇನಿಯಂ ನಿಕ್ಷೇಪದ ಗಣಿ ಕೈಗಾರಿಕೆಗೆ ತೀವ್ರತರವಾದ ಕೊರತೆ ಉಂಟಾಯಿತು. ಯುರೇನಿಯಂ ಅಣು ರಿಯಾಕ್ಟರ್ (ಪಿ.ಡಬ್ಲ್ಯುಆರ್) ಸ್ಥಾಪಿಸಲು ನಿಗದಿತ ವೇಳೆಗಿಂತ ನಿಧಾನವಾಗು ವುದರಿಂದ ಹಾಗೂ ಭಾರತ ತೀವ್ರತರವಾದ ಹಣದ ಕೊರತೆ ಅನುಭವಿಸುತ್ತಿರುವುದರಿಂದ, ಹಣದ ಕೊರತೆಯಾಗದ ರೀತಿಯಲ್ಲಿ ಯುರೇನಿಯಂ ಗಣಿ ಅಗೆತದ ಅವಶ್ಯಕತೆಯನ್ನು ಕಡಿತಗೊಳಿಸಬೇಕಾಗಿದೆ ಎಂದು ಸಮಜಾಯಿಷಿಯನ್ನು ಕೊಟ್ಟಿದ್ದರು. ಆದರೆ ರಿಯಾಕ್ಟರ್‌ಗಳ ಸ್ಥಾಪನೆ ತೀವ್ರಗೊಂಡ ಸಮಯದಲ್ಲೂ ಸಹ ಯುರೇನಿಯಂ ಗಣಿಗಾರಿಕೆಯನ್ನು ಏಕೆ ನಿರ್ಲಕ್ಷ್ಯ ಮಾಡಲಾಯಿತು ಎಂಬುದು ಸ್ಪಷ್ಟವಾಗಿರುವುದಿಲ್ಲ. ಅತೀ ಶೀಘ್ರದಲ್ಲಿಯೇ ಯುರೇನಿಯಂ ಕೊರತೆ ವೃದ್ಧಿಯಾಗುವ ಸೂಚನೆ ಇದ್ದರೂ ಸಹ ಯುರೇನಿಯಂ ಗಣಿಗೆ ಸಂಬಂಧಪಟ್ಟ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ಹಾಗೂ ಅಟಾಮಿಕ್ ಎನರ್ಜಿ ಕಮಿಷನ್ ಏಕೆ ವೃದ್ಧಿಗೊಳಿಸಲು ಪ್ರಯತ್ನ ಮಾಡಲಿಲ್ಲ? ತಕ್ಷಣದಲ್ಲಿ ಯುರೇನಿಯಂ ಕೊರತೆ ಎದುರಿಸಬೇಕೆಂದು ಕಂಡುಬಂದ ನಂತರ ಹೋದ ವರ್ಷದಿಂದ ಮಾತ್ರ ಯುರೇನಿಯಂ ಕೈಗಾರಿಕಾ ಕಾರ್ಯಕ್ರಮವನ್ನು ವೃದ್ಧಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಈ ಕೊರತೆ ತಾತ್ಕಾಲಿಕವೆಂದು, ಹೊಸ ಗಣಿಗಳ ಕೆಲಸ ಪ್ರಾರಂಭವಾದ ನಂತರ, ಹಳೆ ಗಣಿಗಳನ್ನು ವಿಸ್ತರಿಸಿದ ನಂತರ ಹಾಗೂ ಮುಚ್ಚಲಾದ ಒಂದು ಗಣಿಯನ್ನು ಪುನಃ ಪ್ರಾರಂಭಿಸಿದ ನಂತರ ಈ ಕೊರತೆಯನ್ನು ಹೋಗಲಾಡಿಸಲಾಗುತ್ತದೆ ಎಂದು ನೂಕ್ಲಿಯರ್ ಪವರ್ ಕಾರ್ಪೋರೇಷನ್ ಹೇಳಿಕೆಯನ್ನು ಕೊಟ್ಟಿದೆ. ತೀವ್ರತರವಾದ ವಿದ್ಯುತ್ ಕೊರತೆ ಅನುಭವಿಸುತ್ತಿರುವ ಸಮಯದಲ್ಲಿ ದೇಶದಲ್ಲಿ ಸಾಕಷ್ಟು ಯುರೇನಿಯಂ ನಿಕ್ಷೇಪವಿದ್ದರೂ ಸಹ ದುಬಾರಿಯಾದ ಯುರೇನಿಯಂ ರಿಯಾಕ್ಟರ್‌ಗಳನ್ನು ಚಾಲನೆ ಮಾಡದೇ ಸ್ಥಗಿತಗೊಳಿಸಿರುವುದು ಏಕೆ ಎಂಬುದು ಮುಖ್ಯ ಪ್ರಶ್ನೆ. ಇದಕ್ಕೆ ಕಾರಣ ಅರ್ಹತೆಯ ಅಭಾವವೋ ಅಥವಾ ಕಣ್ಣಿಗೆ ಕಾಣದ ಬೇರೆ ಏನಾದರೂ ಕಾರಣ ಇದೆಯೇ?

ಎಡಪಕ್ಷಗಳು ಮಾತ್ರ ದೇಶದಲ್ಲಿ ಸಾಕಷ್ಟು ಯುರೇನಿಯಂ ನಿಕ್ಷೇಪ ಇದೆ ಎಂದು ಹೇಳುತ್ತಾ ಇವೆ. ಅಟಾಮಿಕ್ ಎನರ್ಜಿ ಕಮಿಷನ್ ಅಧ್ಯಕ್ಷ ಶ್ರೀ ಕಾಕೋಡ್ಕರ್‌ರವರ ಹೇಳಿಕೆ ಪ್ರಕಾರ ಭಾರತ 30,000 ದಿಂದ 40,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು ಪ್ರಾರಂಭಿಸಿದರೆ ಯುರೇನಿಯಂ ಕೊರತೆ ಇದೆ. ಅದರಲ್ಲೂ ನಾವು ಈಗ ಲೈಟ್ ವಾಟರ್ ರಿಯಾಕ್ಟರ್‌ಗಳನ್ನು ಉಪಯೋಗಿಸುತ್ತಿದ್ದೇವೆ. ನಾವು ಸ್ಥಾಪಿಸಿರುವ ಅಣು ಸ್ಥಾವರದ ಶಕ್ತಿ 4000 ಮೆಗಾವ್ಯಾಟ್. (ಅದು ಸಹ ಪವರ್ ರಿಯಾಕ್ಟರ್ ಅನ್ನು ಉಪಯೋಗಿಸಿ) ಆದ್ದರಿಂದ ಕಾಕೋಡ್ಕರ್‌ರವರು ಹೇಳುತ್ತಿರುವ ಕೊರತೆ ಕೊರತೆಯೇ ಅಲ್ಲ. ವಿರೋಧಾಭಾಸದ ಹೇಳಿಕೆ ಉದ್ದೇಶಪೂರ್ವಕವಾಗಿ ವಿಷಯವನ್ನು ಮಬ್ಬುಗೊಳಿಸಿ ದೇಶವನ್ನು ತಪ್ಪುದಾರಿಗೆ ಎಳೆಯುವಂಥದಾಗಿದೆ. ಭಾರತ, ಅಮೇರಿಕಾ ಅಣು ಒಪ್ಪಂದದ ಪ್ರಮುಖ ಉದ್ದೇಶ ಭಾರತ ಸರ್ಕಾರ ಪ್ರತಿಪಾದಿಸುವ ಉದ್ದೇಶವಾಗಿರದೆ ಬೇರೆಯೇ ಆಗಿದೆ. ಅಮೇರಿಕಾ ಮತ್ತು ಭಾರತದ ಎರಡೂ ಸರ್ಕಾರಗಳ ವ್ಯೂಹಾತ್ಮಕ ತಂತ್ರಗಾರಿಕೆ (strategic alliance) ಯಾಗಿದೆಯೇ ವಿನಃ ಬೇರೆ ಏನೂ ಅಲ್ಲ.

ಆದುದರಿಂದಲೇ ಈ ಗೋಪ್ಯ ಹಾಗೂ ಪಾರದರ್ಶಕತೆ ಇಲ್ಲದ ಒಪ್ಪಂದ. ಇದು ಯುರೇನಿಯಂ ಹಾಗೂ ರಿಯಾಕ್ಟರ್‌ಗಳನ್ನು ಪಡೆಯುವ ಸಾಮಾನ್ಯ ಒಪ್ಪಂದವಾದರೆ, ಅದಕ್ಕೆ ಬೇರೆ ಪರ್ಯಾಯ ಭಾರತದ ಅತಿಯಾದ ಉತ್ಸಾಹ ಮತ್ತು ಪಾರದರ್ಶಕತೆ ಇಲ್ಲದಿರುವುದು ಈ ಒಪ್ಪಂದದ ಮೂಲಭೂತವಾದ ಹಾಗೂ ಪ್ರಮುಖ ಅಂಶವಾಗಿದೆ. ಸಾರ್ವಜನಿಕ ಪ್ರಕಟಣೆಗೆ ನಿರ್ಬಂಧ ಹೇರಿರುವ ಈ ಆದೇಶ ಹಾನಿಕಾರಕ, ಅನಾರೋಗ್ಯದ ಖಾಯಿಲೆಯ ಕುರುಹು ಆಗಿದೆ. ○

ಬೀಜಗಳಿಗೊಂದು ವಿನೂತನ ಖಜಾನೆ

ನೀವು ಚಿನ್ನಾಭರಣಗಳನ್ನು, ವಜ್ರವೈಡೂರ್ಯಗಳನ್ನು ಬೆಲೆ ಬಾಳುವ ದಾಖಲೆಗಳನ್ನು ಸುರಕ್ಷಿತವಾಗಿ ತಿಜೋರಿಗಳಲ್ಲಿ ಸಂರಕ್ಷಿಸಿಡುವುದನ್ನು ಕಂಡಿದ್ದೀರಿ. ಆದರೆ ಇತ್ತೀಚೆಗೆ ಒಂದು ಬೃಹತ್ತಾದ ವಿಶಿಷ್ಟ ಸಂದೂಕಗಳುಳ್ಳ ಗೋವ್ಮ್ಮಟಾಕಾರದ ತಿಜೋರಿಯೊಂದನ್ನು ವಿಶ್ವ ವಿಖ್ಯಾತರು ಉದ್ಘಾಟನೆ ಮಾಡಿದರು. ಐರೋಪ್ಯ ಒಕ್ಕೂಟದ ಆಯುಕ್ತರಾದ ಜೋಸ್ ಮ್ಯಾನ್ಯುಯಲ್ ಬರಾಸೊ; ಕೆನ್ಯಾದ ಪರಿಸರವಾದಿ ಮತ್ತು ನೋಬೆಲ್ ಪ್ರಶಸ್ತಿ ವಿಜೇತೆ ವಾಂಗರಿ ಮಥಾಯ್ ಮತ್ತು ನಾರ್ವೆ ದೇಶದ ಪ್ರಧಾನ ಮಂತ್ರಿಗಳಾದ ಜೆನ್ಸ್ ಸ್ಟೋಲ್ಟನ್‌ಬರ್ಗ್ ಸಂಯುಕ್ತವಾಗಿ ಬೀಜಗಳನ್ನು ಅದರಲ್ಲಿಡುವ ಮೂಲಕ ಈ "ಬೀಜಗಳ ಖಜಾನೆಯನ್ನು ಅತ್ಯಂತ ವಿನೂತನವಾಗಿ ಉದ್ಘಾಟಿಸಿದರು. ನಿಮಗೆ ಬಹಳ ವಿಚಿತ್ರ ಅನಿಸಬಹುದು. ಬೀಜಗಳಿಗೆ ಇಂತಹ ಸುರಕ್ಷತೆ ಅಗತ್ಯವಿದೆಯಾ?" ಇದು ಬಹಳ ವಿಚಿತ್ರ ಅನಿಸಿದರೂ ವಾಸ್ತವವಾಗಿ ಅದು 'ಹೀಗೂ ಉಂಟೂ'

ಉತ್ತರ ಧ್ರುವದಿಂದ ಒಂದು ಸಾವಿರ ಕಿಲೋಮೀಟರ್ ದೂರದಲ್ಲಿರುವ ನಾರ್ವೆ ದೇಶದ ಸ್ಪಿಟ್ಸ್ ಬರ್ಗ್‌ನ್ ದ್ವೀಪದ ಸ್ವಾಲ್ ಬಾರ್ಡ್ ಎಂಬಲ್ಲಿ ಈ ಬೀಜ ಖಜಾನೆಯನ್ನು ಹಿಮಪರ್ವತದ 130 ಮೀಟರ್ ಆಳದಲ್ಲಿ ನಿರ್ಮಾಣ ಮಾಡಲಾಗಿದೆ. ಇದನ್ನು 8 ಮಿಲಿಯನ್ ಡಾಲರ್ ವೆಚ್ಚದಲ್ಲಿ ನಿರ್ಮಿಸಿ ವಿಶ್ವ ಸೇವೆಗೆ ಕೊಡುಗೆಯಾಗಿ ನೀಡಿದೆ. ಅತ್ಯಂತ ಜನ ನಿಬಿಡವಾದ ಪ್ರದೇಶದಲ್ಲಿ ನಿರಂತರವಾಗಿ -18^{0} ಸಿ ಉಷ್ಣತೆಯಲ್ಲಿ ಈ ಬೀಜ ಖಜಾನೆಯನ್ನು ನಿರ್ವಹಿಸುವ ಹೊಣೆಯನ್ನು 'ಜಾಗತಿಕ ಬೆಳೆ ವೈವಿಧ್ಯತಾ ನ್ಯಾಸ'(ಗ್ಲೋಬಲ್ ಕ್ರಾಪ್ ಡೈವರ್ಸಿಟಿ ಟ್ರಸ್ಟ್) ಹೊತ್ತಿದೆ.

ಜಗತ್ತಿನಾದ್ಯಂತ ಘಟಿಸುತ್ತಿರುವ ವ್ಯಾಜ್ಯಗಳು, ಭಯೋತ್ಪಾದನಾ ಧಾಳಿಗಳು, ಯುದ್ಧಗಳು, ಅಣುಸಮರ, ರಾಸಾಯನಿಕ ಜೈವಿಕ ಸಮರಗಳಲ್ಲಿ ಈ ಭೂಮಿಯ ಮೇಲಿನ ಬೆಳೆ ಪ್ರಬೇಧಗಳು ನಾಶವಾಗುತ್ತಿರುವ ಉದಾಹರಣೆಗಳು ಮತ್ತು ಸಂಭವನೀಯತೆಗಳು ನಮ್ಮ ಕಣ್ಮುಂದಿವೆ. ವಿಯೆಟ್ನಾಂನಲ್ಲಿ ಎಜೆಂಟ್ ಆರೇಂಜ್ ರಾಸಾಯನಿಕವನ್ನು ಚೆಲ್ಲಾಡಿ ಕಬ್ಬು, ಬತ್ತದ ತಳಿಗಳನ್ನು ನಿತ್ಯ ಹರಿದ್ವರ್ಣದ ಕಾಡುಗಳನ್ನು ನಾಶಪಡಿಸಲಾಯಿತು. ಆಫ್‌ಘಾನಿಸ್ತಾನ, ಇರಾಕ್, ಇರಾನ್, ರ್‍ವಾಂಡಾ, ಇಥಿಯೋಪಿಯಾಪಿಯಾಗಳಲ್ಲಿ ಇಂತಹ ಕಾದಾಟಗಳಿಂದ ಅಮೂಲ್ಯವಾದ ಬೆಳೆ ವೈವಿಧ್ಯತೆ ಆ ಪ್ರದೇಶಗಳಲ್ಲಿ ಸಾಕಷ್ಟು ಹಾಳಾಗಿರುವುದರಿಂದ ಮನುಕುಲ ಪಾಠ ಕಲಿತು ಈ ಮುನ್ನೆಚ್ಚರಿಕೆಗೆ ಮುಂದಾಗಿದೆ. ಜಾಗತಿಕ ಬಿಸಿಯೇರುವಿಕೆ, ಹವಾಮಾನ ವೈಪರಿತ್ಯಗಳು, ಭೂಕಂಪ, ಕಾಡ್ಗಿಚ್ಚು, ಜ್ವಾಲಾಮುಖಿ ಪ್ರವಾಹಗಳು, ಪ್ರವಾಹ, ಬರಗಾಲ ಮುಂತಾದ ನೈಸರ್ಗಿಕ ಕಾರಣಗಳಿಂದಲೂ ಬೆಳೆ ವೈವಿಧ್ಯತೆ ನಾಶವಾಗುವ ಅಪಾಯವಿದೆ. ಅಣ್ವಸ್ತ್ರಗಳಿಂದ ಈ ಭೂಮಿಯನ್ನು ಹಲವಾರು ಬಾರಿ ಸುಟ್ಟು ಭಸ್ಮ ಮಾಡುವ ಸಾಮರ್ಥ್ಯ ಮನುಷ್ಯನಿಗಿಂದು ಲಭ್ಯವಾಗಿದೆ. ಇಂತಹ ವಿನಾಶಗಳಿಂದ ಬೆಲೆ ಕಟ್ಟಲಾಗದ ಬೆಳೆ ವೈವಿಧ್ಯತೆಯನ್ನು ಕಾಪಾಡಲು ವಿಜ್ಞಾನಿಗಳ ಸಮೂಹ ಇಂತಹ ಬೀಜ ಖಜಾನೆಯನ್ನು ನಿರ್ಮಿಸಿ ಅವುಗಳನ್ನು ಕಾಪಾಡುವ ಕಾರ್ಯಾಚರಣೆಗೆ ಮುಂದಾಗಿದೆ. ವಿಶ್ವ ವಿನಾಶದಲ್ಲಿಯೂ ಈ ಖಜಾನೆ 'ನೋಹಾ' ನಾ ನೌಕೆಯೋಪಾದಿಯಲ್ಲಿ ಬೆಳೆಗಳ ಸಂಕುಲವನ್ನು ಕಾಪಾಡಲಿ ಎಂಬ ಸದಾಶಯ ಈ ವಿನೂತನ ಪ್ರಯತ್ನದ ಹಿಂದೆ ಇದೆ.

ವಿಶ್ವಾದ್ಯಂತ ಬೀಜಗಳ ಸಂರಕ್ಷಣೆ ಮಾಡುತ್ತಿರುವ 1300 ಕ್ಕೂ ಅಧಿಕ ಬೀಜ ಬ್ಯಾಂಕುಗಳಲ್ಲಿ ಈಗಾಗಲೇ ಸಂಗ್ರಹಿಸಿಡಲಾಗಿರುವ ಬೆಳೆ ತಳಿಗಳನ್ನು ಇನ್ನು ಮುಂದೆ ಇಲ್ಲಿ ಜೋಪಾನ ಮಾಡಲಾಗುವುದು, ಇಲ್ಲಿ ತಂದಿಟ್ಟ ಮಾತ್ರಕ್ಕೆ ಅವುಗಳ ಮೇಲಿನ ಹಕ್ಕನ್ನು ಆ ರಾಷ್ಟ್ರಗಳು ಕಳೆದುಕೊಳ್ಳುವುದಿಲ್ಲ, ಈ ಬೀಜಗಳು ಯಾವ ರಾಷ್ಟ್ರದಿಂದ ಬಂದವೋ ಅದೇ ರಾಷ್ಟ್ರದ ಸಂಪತ್ತಾಗಿ ಪರಿಗಣಿಸಿ ಅವುಗಳನ್ನು ಸಂರಕ್ಷಿಸಿಡಲಾಗುತ್ತದೆ. ತಮಗೆ ಅಗತ್ಯಬಿದ್ದಾಗ ಆ ರಾಷ್ಟ್ರಗಳು ಈ ಅಪರೂಪದ ಬೀಜಗಳನ್ನು ಮರಳಿ ಪಡೆಯುವ ಹಕ್ಕನ್ನು ಹೊಂದಿರುತ್ತದೆ. ಹೀಗೆ ಸ್ವಾಲ್‌ಬಾರ್ಡ್‌ನ ಬೀಜ ಖಜಾನೆ ವಿಶ್ವದ ಬೆಳೆ ತಳಿಗಳಿಗೆ ಶಾಶ್ವತ ವಿಮೆಯ ಸೌಲಭ್ಯವನ್ನೊದಗಿಸಿದೆ. ಬೆಳೆ ಬೀಜ ವಿನಾಶದ ಅಪಾಯಕ್ಕೆ ವಿಶ್ವ ವ್ಯಾಪಕ ವಿಮೆ ಇದಾಗಿದೆ.

ಈ ಖಜಾನೆ ಉದ್ಘಾಟನೆಯಾದ ಮೊದಲನೇ ದಿನವೇ 676 ಪೆಟ್ಟಿಗೆಗಳಲ್ಲಿ ತುಂಬಲಾದ ಸುಮಾರು 2,68,000 ಬೀಜ ತಳಿಗಳು ಇಲ್ಲಿ ಅತ್ಯಂತ ಸುರಕ್ಷಿತವಾಗಿ ಜಮಾವಣೆಗೊಂಡವೆಂದರೆ ಇಂತಹ ಸೌಲಭ್ಯದ ಅಗತ್ಯತೆ ಎಷ್ಟಿತ್ತೆಂಬುದನ್ನು ನಾವು ಊಹಿಸಿಕೊಳ್ಳಬಹುದಾಗಿದೆ. ಈ ಖಜಾನೆಯಲ್ಲಿ ಸುಮಾರು 4.5 ಮಿಲಿಯನ್ ಬೆಳೆ ತಳಿಗಳನ್ನು ಜೋಪಾನ ಮಾಡಿಡಬಹುದಾದ ಸಾಮರ್ಥ್ಯವಿದೆ. ಈಗ ನಮಗೆ ಲಭ್ಯವಿರುವ ಬೆಳೆ ತಳಿಗಳ ಎರಡು ಪಟ್ಟು ತಳಿಗಳನ್ನು ಸಂರಕ್ಷಿಸಿಡಲು ಇಲ್ಲಿ ಸಾಧ್ಯವಿದೆ.

ಅನೇಕ ಬಡ ರಾಷ್ಟ್ರಗಳು, ತಳಿ ವಿಜ್ಞಾನದಲ್ಲಿ ಹಿಂದುಳಿದ ರಾಷ್ಟ್ರಗಳಿಗೆ ಇದೊಂದು ವರದಾನವಾಗಿದೆ. ಆದೇಶಗಳಲ್ಲಿ ಮಾನವನ ವಿಧ್ವಂಸಕ ಚಟುವಟಿಕೆಗಳಿಂದಲೋ ಅಥವಾ ನೈಸರ್ಗಿಕ ವಿಕೋಪಗಳಿಂದಲೋ ಆ ದೇಶಗಳಲ್ಲಿ ಈ ತಳಿಗಳು ನಾಶಗೊಂಡರೆ ಅಥವಾ ಅಗತ್ಯಬಿದ್ದಾಗ ಈ ರಾಷ್ಟ್ರಗಳು ತಮ್ಮ ಬೀಜಗಳನ್ನು ಇಲ್ಲಿಂದ ಮರಳಿ ಪಡೆಯುವುದು ಸಾಧ್ಯವಿದೆ. ಆದ್ದರಿಂದ ಆ ರಾಷ್ಟ್ರಗಳು ಈ ಅತ್ಯಮೂಲ್ಯ ಬೀಜಗಳನ್ನು ಸಂರಕ್ಷಿಸಿಟ್ಟುಕೊಳ್ಳಬೇಕಾದ ಜವಾಬ್ದಾರಿ ಹಾಗೂ ಹೊರೆಯಿಂದ ಮುಕ್ತಗೊಂಡಿವೆ. ಆದರೆ ತಮ್ಮ ಸಂಕಷ್ಟದ ವೇಳೆಯಲ್ಲಿ ಅವುಗಳಿಂದ ದೊರೆಯುತ್ತಿದ್ದ ಪ್ರಯೋಜನಗಳನ್ನು ಯಾವುದೇ ತೊಡಕುಗಳಿಲ್ಲದೆ ಪಡೆಯುವುದು ಸಾಧ್ಯವಾಗುತ್ತದೆ. ಹಾಗಾಗಿ ಅಭಿವೃದ್ಧಿಶೀಲ ಬಡ ರಾಷ್ಟ್ರಗಳಿಗೆ ಇದೊಂದು ವರದಾನವಾಗಲಿದೆ.

ಭಾರತದಂತಹ ರಾಷ್ಟ್ರಕ್ಕೆ ಸ್ವಾಲ್‌ಬಾರ್ಡ್‌ನ ಪ್ರಯತ್ನದಲ್ಲಿ ಬಹಳ ದೊಡ್ಡ ಪಣ ಇದೆ. ಒಣ ಉಷ್ಣ ಪ್ರದೇಶದ ಬೆಳೆಗಳ ಅಂತರರಾಷ್ಟ್ರೀಯ ಸಂಶೋಧನಾ ಸಂಸ್ಥೆ (ICRISAT) ಅಪಾರವಾದ ಬಹು ಪ್ರಮುಖ ದೃಢ ಒಣಬೆಳೆಗಳ ಅಮೂಲ್ಯ ಸಂಗ್ರಹವನ್ನು ಹೊಂದಿದೆ. ಏಷ್ಯಾ ಮತ್ತು ಆಫ್ರಿಕಾದಂತಹ ದೇಶಗಳಿಗೆ ಪ್ರಯೋಜನ ಕಾರಿಯಾಗಬಲ್ಲ ಬೆಲೆ ಬಾಳುವ 1,10,000 ಬೀಜಗಳ ನಿಕ್ಷೇಪ ಇಲ್ಲಿದೆ. ಇದೇ ರೀತಿ ಅನೇಕ ರಾಷ್ಟ್ರಗಳ ಬೀಜ ಸಂಗ್ರಹಗಳು ಇಲ್ಲಿ ನೆಲೆಗೊಂಡರೆ ಅದು ವಿಶ್ವವ್ಯಾಪಿ ಬೀಜ ಸುರಕ್ಷತೆಯನ್ನು ಒದಗಿಸುವ ಒಂದು ಮಹಾ ಅವಕಾಶ ಇದರಿಂದ ಲಭ್ಯವಾಗಿದೆ. ಏಕ ಬೆಳೆ ಸಂಸ್ಕೃತಿ ಮತ್ತು ವಾಣಿಜ್ಯ ಬೆಳೆಗಳ ಒತ್ತಡಗಳು ಆಹಾರ ಉತ್ಪಾದನೆಯ ಮೇಲೆ ದುಷ್ಪರಿಣಾಮಗಳನ್ನುಂಟು ಮಾಡಿದೆ. ಅಪರೂಪದ ತಳಿಗಳಲ್ಲಿರುವ ವಿಶಿಷ್ಟ ಗುಣ ವಿಶೇಷಗಳನ್ನು ಆಯ್ದು, ಗುರುತಿಸಿ, ಹೆಕ್ಕಿ ತೆಗೆದು ಹೊಸ ತಳಿಗಳೊಂದಿಗೆ ಸಂಕರ ಗೊಳಿಸಿ, ವಿನೂತನ ತಳಿಗಳ ಸೃಷ್ಟಿಗೆ ಜೈವಿಕ ತಂತ್ರಜ್ಞಾನ ಶ್ರಮಿಸಲು ಈ ಬೀಜ ಸಂಗ್ರಹ ಅತ್ಯಗತ್ಯ. ಅಧಿಕ ರೋಗ ನಿರೋಧಕ ಶಕ್ತಿ, ಕಡಿಮೆ ನೀರನ್ನುಪಯೋಗಿಸಿಕೊಂಡು ಬೆಳೆಯುವ ತಳಿಗಳನ್ನು ಸೃಷ್ಟಿಸಲು ಈ ಸಂಗ್ರಹಾಗಾರದ ತಳಿಗಳು ಜೈವಿಕ ತಂತ್ರಜ್ಞಾನದ ಕಚ್ಚಾ ಸಾಮಗ್ರಿಗಳಾಗಿ ಬಹು ಪ್ರಯೋಜನಕಾರಿಯಾಗಿದೆ. ಏಕರೂಪಿ ಬೆಳೆಗಳು ವಿಶೇಷ ರೋಗ ಪೀಡಿತವಾದಾಗ ಅವುಗಳನ್ನು ಕಾಪಾಡಲು ಈ ತಳಿಗಳು ತುಂಬಾ ಪ್ರಯೋಜನಕಾರಿ. ಇಂತಹ ಉಪಯೋಗಿ ತಳಿಗಳನ್ನು ಪ್ರಳಯಗಳಿಂದ ಪಾರು ಮಾಡಬಲ್ಲ ಈ ಬೀಜ ಖಜಾನೆ ಜೀವಿ ವೈವಿಧ್ಯತೆಯ ಸಂರಕ್ಷಣೆಯಲ್ಲಿ ಒಂದು ಐತಿಹಾಸಿಕ ಹೆಜ್ಜೆ.


■ ಸಿ.ಯತಿರಾಜು

→

ಅಮೇರಿಕಾ ವಿದೇಶಿ ವ್ಯವಹಾರದ ಇಲಾಖೆ ಈ ವಿಷಯಗಳ ಬಗ್ಗೆ ಯಾವುದೇ ಆಶ್ವಾಸನೆ ಇಲ್ಲವೆಂದು ಸ್ಪಷ್ಟಪಡಿಸಿದೆ. ಆದರೆ ಅದನ್ನು ಸದ್ಯಕ್ಕೆ ಸಾರ್ವಜನಿಕವಾಗಿ ಪ್ರಕಟಿಸಲು ನಿಷೇಧಿಸಿದೆ.

ಸುಳ್ಳು ಗೊಂದಲ ಮೂಡಿಸುವ ಯತ್ನ

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಅಮೇರಿಕಾ ವಿದೇಶಾಂಗ ವ್ಯವಹಾರದ ಇಲಾಖೆ ಪಾರದರ್ಶಕವಾಗಿ ಅಮೇರಿಕಾದ ಕಾಂಗ್ರೆಸ್ಸಿನ ಉಪಸಮಿತಿಗೆ ಈ ಅನುಮಾನ ಹಾಗೂ ಪ್ರಶ್ನೆಗಳಿಗೆ ಉತ್ತರಿಸಿ ಸ್ವಚ್ಛವಾಗಿ ಸಮಿತಿಯ ಅನುಮಾನಗಳನ್ನು ಪರಿಹರಿಸಿದೆ. ಆದರೆ ಭಾರತ ಸರ್ಕಾರ ಈ ಅನುಮಾನ ಮತ್ತು ಪ್ರಶ್ನೆಗಳಿಗೆ ಪಾರದರ್ಶಕ ಸ್ಪಷ್ಟೀಕರಣ ಕೊಡಲು ನಿರಾಕರಿಸುತ್ತಿದೆ. ಭಾರತ ಸರ್ಕಾರ 123 ಒಪ್ಪಂದ ಹೈಡ್ ಆಕ್ಟನ್ನು ಬಳಕೆಗೆ ಬಾರದಂತೆ ಮಾಡಿದೆ ಹಾಗೂ ಭಾರತಕ್ಕೆ ಅಪ್ರಸ್ತುತ ಎಂದು ಹೇಳಿ ವಿಷಯವನ್ನು ಗೊಂದಲಕ್ಕೆ ಸಿಲುಕಿಸುವ ಪ್ರಯತ್ನದಲ್ಲಿದೆ. ಅಮೇರಿಕಾ ಸರ್ಕಾರ ಹಲವಾರು ಹೇಳಿಕೆಗಳಿಂದ ಹೈಡ್ ಆಕ್ಟ್ ಹಾಗೂ 123 ಒಪ್ಪಂದ ಒಂದಕ್ಕೊಂದು ವಿರೋಧವಾಗಿದೆ ಎನ್ನುವುದನ್ನು ಅಲ್ಲಗಳೆದಿದೆ. ಭಾರತದ ಜೊತೆ ಯಾವುದೇ ಅಣು ಶಕ್ತಿಗೆ ಸಂಬಂಧಪಟ್ಟ ವ್ಯಾಪಾರ ಹೈಡ್ ಆಕ್ಟ್ ಮತ್ತು 123 ಒಪ್ಪಂದ ಎರಡಕ್ಕೂ ಅನುಗುಣವಾಗಿರಬೇಕಾಗುತ್ತದೆ. ಅಮೇರಿಕಾದ ವಿದೇಶಾಂಗ ವ್ಯವಹಾರ ಸಮಿತಿ ಈ ದಿಸೆಯಲ್ಲಿ ಅಮೇರಿಕಾದ ಕಾರ್ಯಾಂಗವನ್ನು ಹೈಡ್ ಆಕ್ಟ್ ನಿಯಮಗಳು ಮತ್ತು 123 ಒಪ್ಪಂದವನ್ನು ನಿರ್ದಿಷ್ಟವಾಗಿ ಕಟ್ಟಿಹಾಕಿ ಅಮೇರಿಕಾದ ಸಂಸತ್ತಿನ ಒಪ್ಪಿಗೆಯನ್ನು ಪಡೆದಿದೆ ಹಾಗೂ ಈ ಬಗೆಗಿನ ಭಾರತದ ವ್ಯಾಖ್ಯಾನವನ್ನು ಹಾಗೂ ವಿಶ್ಲೇಷಣೆಯನ್ನು ಸಾರಾಸಗಟಾಗಿ ತಳ್ಳಿ ಹಾಕಿ ಅದು ತಪ್ಪು ಕಲ್ಪನೆ ಎಂದು ಸ್ಪಷ್ಟಪಡಿಸಿದೆ. ಆದುದರಿಂದಲೇ ಇದು ವರ್ಗೀಕರಿಸಲಾದ ಸಮಾಚಾರ (classified information) ಅಲ್ಲದಿದ್ದರೂ ಸಹ ಸಾರ್ವಜನಿಕವಾಗಿ ಪ್ರಕಟಿಸದಿರುವ ನಿರ್ಬಂಧವನ್ನು ಹೇರಲಾಗಿದೆ. ○



ರಾಜ್ಯ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಶೇ. 30 ಹಣ ಮೀಸಲು ಇತರ ಬೇಡಿಕೆಗಳಿಗಾಗಿ ಎಸ್ಸೆಫೈ ನೇತೃತ್ವದಲ್ಲಿ ನಡೆದ ಪ್ರತಿಭಟನೆ - ಬೆಂಗಳೂರಿನಲ್ಲಿ

ಗರ್ಭ ಬಾಡಿಗೆಗಿದೆ... ಇಲ್ಲಿ

ಕನ್ನಡಿ



ಕೆ.ಎಸ್.ವಿಮಲ

ನಾನು ಬೆಂಗಳೂರಿಗೆ ಬಂದ ಹೊಸತು. ಸ್ವಚ್ಛಂದ ಮಲೆನಾಡಿನ ಪ್ರಶಾಂತ ವಾತಾವರಣದಲ್ಲಿ ಪ್ರಕೃತಿ ನೀಡುತ್ತಿದ್ದ ಸೊಪ್ಪು-ಸಿಪ್ಪೆಗಳೇ ನಮ್ಮ ಅಡಿಗೆಯ ಪ್ರಮುಖ ಭಾಗವನ್ನಾಕ್ರಮಿಸುತ್ತಿದ್ದ ಬದುಕು ಅಲ್ಲಿ. ಇಲ್ಲಿ ಮನೆಯ ಮುಂದೆ ತರಕಾರಿ ಮಾರುತ್ತಿದ್ದ ಗಾಡಿಯಲ್ಲಿ ಕರಿಬೇವಿನ ಸೊಪ್ಪು ಮಾರಾಟಕ್ಕಿದ್ದುದು ನೋಡಿ ಅಚ್ಚರಿಪಟ್ಟಿದ್ದೆ. ಇದೆಂತಹ ನಗರವಪ್ಪ. ಸಾರಿನ ಒಗ್ಗರಣೆಗೆ ಹಾಕುವ ಕರಿಬೇವಿನ ಸೊಪ್ಪಿಗೆ.... ನಮ್ಮ ಮನೆಯ ಹಿಂದಿನ ಬೆಟ್ಟದಲ್ಲಿ ಯಾರ ಹಂಗೂ ಇಲ್ಲದೇ ಸುತ್ತೆಲ್ಲ ಬೆಳೆದು ತನ್ನಕಂಪು ಸೂಸುತ್ತಿದ್ದ ನಾವು ಕರೆಯುತ್ತಿದ್ದ ಬೇನ್ ಸೊಪ್ಪಿಗೆ ದುಡ್ಡಾ! ಆಗ ನನ್ನ ಗೆಳತಿ ಹೇಳಿದ್ದಳು ಬೆಂಗಳೂರಿನಲ್ಲಿ ಮಾರಾಟಕ್ಕೆ ಏನ್ ಬೇಕಾದ್ರೂ ಸಿಗುತ್ತೆ.... ಈ ಸರಳ ಸತ್ಯವನ್ನು ಅಂದು ಅರ್ಥ ಮಾಡಿಕೊಂಡಾಗ ಮುಂದೊಂದು ಇಂತಹ ದಿನವನ್ನೂ ನೋಡಿ ಬಿಡಬಹುದೆಂಬ ಕಲ್ಪನೆಯೂ ಇರಲಿಲ್ಲ.

ಮೂರು ನಾಲ್ಕು ವರ್ಷದ ಕೆಳಗೆ ಇಡೀ ಕರ್ನಾಟಕವನ್ನೇ ಬೆಚ್ಚಿ ಬೀಳಿಸಿದ ಪ್ರಕರಣ ಪತ್ರಿಕೆಗಳಲ್ಲಿ ವರದಿಯಾಯಿತು. ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿಯಲ್ಲಿ ಲಂಬಾಣಿ ತಾಂಡಾದಲ್ಲಿ ಮಕ್ಕಳ ಮಾರಾಟ. ಬಡತನ, ಅನಕ್ಷರತೆ, ಅಜ್ಞಾನದ ಪರಿಣಾಮ ಆ ಜನರ ಬದುಕನ್ನು ದುರ್ಬಳಕೆ ಮಾಡಿದ ಅಂತರರಾಷ್ಟ್ರೀಯ ಜಾಲದ ಬಲೆಗೆ ಬಿದ್ದ ಜನ ಹಣಕ್ಕೆ ಮಾರಿಕೊಂಡಿದ್ದು ತಮ್ಮ ಹೆಣ್ಣು ಮಕ್ಕಳನ್ನು!

ಜಾಗತೀಕರಣದ ಸುಳಿಯಲ್ಲಿ ಸಿಲುಕಿ ಭಾರತದಂತಹ ದೇಶಗಳು ಪ್ರವಾಹಕ್ಕೆ ರಭಸಕ್ಕೆ ಸಿಕ್ಕು ಮರದ ತುಂಡುಗಳಂತೆ ಸೆಳೆದತ್ತ ಒಯ್ಯುವ ಪರಿಸ್ಥಿತಿಗೆ ಸಿಗುವ ಇಂತಹ ಉದಾಹರಣೆಗಳು ಲೆಕ್ಕವಿಲ್ಲದಷ್ಟು. ದುಡ್ಡಿದ್ದರೆ ಏನು ಬೇಕಾದರೂ ಸಿಗುವ ಈ ದೇಶದಲ್ಲೀಗ ಗರ್ಭದ ಮಾರಾಟವೊಂದು ಉದ್ಯಮವಾಗಿದೆ. ಬಾಡಿಗೆ ತಾಯ್ತನವೆಂದು ಕರೆಯಲ್ಪಡುವ ಈ ಕ್ರಿಯೆ ಭಾರತದಲ್ಲಿ ಅತಿ ವೇಗದಲ್ಲಿ ಬೆಳೆಯುತ್ತಿರುವ ಉದ್ಯಮವೆಂದರೆ ಅತಿಶಯೋಕ್ತಿಯಲ್ಲ. ಬಾಡಿಗೆ ತಾಯ್ತನವೆಂದರೆ ಮಕ್ಕಳಾಗದ ದಂಪತಿಗಳಿಗೆ ಮಕ್ಕಳನ್ನು ಹೆತ್ತು ಕೊಡುವುದು. ಈ ಪ್ರಕ್ರಿಯೆಯನ್ನು ಗಂಡನ ವೀರ್ಯ, ಹೆಂಡತಿಯ ಅಂಡಾಣುವನ್ನು ಇನ್‌ವಿಟ್ರೋ ಫರ್ಟಿಲೈಸೇಷನ್ ಮೂಲಕ ಟೆಸ್ಟ್‌ಟ್ಯೂಬ್‌ನಲ್ಲಿ ಬಳಸಿ ನಂತರ ಬಾಡಿಗೆ ಗರ್ಭದೊಳಗೆ 9 ತಿಂಗಳು ಬೆಳೆಸಲಾಗುತ್ತದೆ. 9 ತಿಂಗಳ ನಂತರ ಆ ಮಹಿಳೆ ಮಗುವನ್ನು ಹೆತ್ತು ಆದರ ತಂದೆ ತಾಯಂದಿರಿಗೆ ಕೊಡುವುದು ಪ್ರತಿಯಾಗಿ ಒಂದಿಷ್ಟು ಹಣ!

ಸ್ವೀಡನ್, ಸ್ಪೈನ್, ಫ್ರಾನ್ಸ್, ಜರ್ಮನಿ ಯಂತಹ ದೇಶಗಳಲ್ಲಿ ಸಾರ್ವಜನಿಕ ಅಭಿಪ್ರಾಯ ಸಂಗ್ರಹದ ಮೂಲಕ ಪಡೆದ ಜನಮತದಿಂದಾಗಿ ಫಲವಾಗಿ ಬಾಡಿಗೆ ತಾಯ್ತನವನ್ನು ನಿಷೇಧಿಸಲಾಗಿದೆ. ಕೆನಡಾದಂತಹ ದೇಶಗಳಲ್ಲಿ ತಾಯ್ತನದ ವಾಣಿಜ್ಯೀಕರಣವನ್ನು ಪ್ರೋತ್ಸಾಹಿಸದಂತೆ ತಡೆಯುವ ಕ್ರಮವಾಗಿ ಬಾಡಿಗೆ ತಾಯಂದಿರು ಹಣ ತೆಗೆದುಕೊಳ್ಳದಂತೆ ನಿರ್ಬಂಧವಿದೆ. ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಕೆಲವು ನಿರ್ದಿಷ್ಟ ಖರ್ಚುಗಳನ್ನು ತೆಗೆದುಕೊಳ್ಳುವ ಅವಕಾಶವಿದೆ.

ಇಂತಹ ವಿಷಯಗಳು ಹಲವು ಪ್ರಶ್ನೆಗಳನ್ನು ಎತ್ತುತ್ತವೆ. ಇಲ್ಲಿ ಇದೊಂದು ಕೇವಲ ನೈತಿಕತೆ-ಶಿಷ್ಟಾಚಾರದ ಪ್ರಶ್ನೆ ಮಾತ್ರವಲ್ಲ. ಬದಲಿಗೆ ದೈಹಿಕ, ಮಾನಸಿಕ, ಭಾವನಾತ್ಮಕ ನೆಲೆಗಳಲ್ಲಿಯೂ ಗರ್ಭವನ್ನು ಬಾಡಿಗೆಗೆ ನೀಡುವ ತಾಯಿ ತೊಂದರೆಗೆ ಒಳಗಾಗುವ ಎಲ್ಲ ಸಾಧ್ಯತೆಗಳೂ ಇವೆ. ಇವುಗಳನ್ನು ಬಹಳ ಸೂಕ್ಷ್ಮವಾಗಿ ಗಮನಿಸಬೇಕಾದ ಅಗತ್ಯವಿದೆ. ಈಗಾಗಲೇ ಪ್ರಚಲಿತವಿರುವ ವೈದ್ಯಕೀಯ ಪ್ರವಾಸೋದ್ಯಮದ ಭಾಗವಾಗಿ ಈ ಚಟುವಟಿಕೆಗಳ ಪ್ರಾರಂಭವಾಗಿವೆ. ಭಾರತದಂತಹ ದೇಶಗಳಲ್ಲಿ ಯಾವುದೇ ರೀತಿಯ ನಿರ್ದಿಷ್ಟ ಕಾನೂನುಗಳು ಇಂತಹ ಯಾವುದೇ ಚಟುವಟಿಕೆಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಇಲ್ಲದಿರುವುದು, ಬಡತನದ ಬೇಗೆಯಿಂದ ಪಾರಾಗಲು ಏನೆಲ್ಲ ಸಿಗಬಹುದೋ ಎಂಬ ಹುಡುಕುವಿಕೆಗೆ ಜನ ಒಳಗಾಗುತ್ತಿರುವಾಗ ಅಮೇರಿಕಾ ಮತ್ತಿತರ ದೇಶಗಳ ಮಕ್ಕಳಾಗದ ದಂಪತಿಗಳಿಗೆ ಬಹಳ ಅಗ್ಗದಲ್ಲಿ ಮಕ್ಕಳನ್ನು ಪಡೆದುಕೊಳ್ಳುವ ಸಾಧನ ಗಳಾಗಿ ಇವರು ಸಿಗುತ್ತಾರೆ.

ಈ ಕುರಿತು ಈಗಾಗಲೇ ಮಹಿಳಾ ಸಂಘಟನೆಗಳು ದನಿ ಎತ್ತಿವೆ. ಈಗಾಗಲೇ ಎ.ಆರ್.ಟಿ. ಕ್ಲಿನಿಕ್‌ಗಳು (Assisted Reproductive Technologies) ತಲೆ ಎತ್ತಿದ್ದು, ಸರ್ಕಾರ ಇದರ ಬಗ್ಗೆ ಯಾವುದೇ ಗಂಭೀರ ಗಮನ ಹರಿಸುವ ಲಕ್ಷಣಗಳಿಲ್ಲ. ಪುರಾಣಗಳನ್ನು ಇತಿಹಾಸವೆಂಬಂತೆ ಬಿಂಬಿಸುವ ಈ ನೆಲದಲ್ಲಿ ಇಂತಹ ಸಂಗತಿಗಳಿಗೂ ಸಮರ್ಥನೆ ಮಹಾಭಾರತದಂತಹ ಕಥೆಗಳಲ್ಲಿ ಸಿಕ್ಕಿ ಬಿಡುತ್ತದೆ. ಕುಂತಿಗಿರುವ ಐವರು ಮಕ್ಕಳೂ ಹೀಗೆ ಕರುಣಿಸಲ್ಪಟ್ಟವೇ. ಸ್ವಲ್ಪ ವ್ಯತ್ಯಾಸವೆಂದರೆ ಆ ಮಕ್ಕಳು ಅವಳ ಬಳಿಯೇ ಉಳಿದರು ಎಂಬುದು. ಭಾರತದಂತಹ ರಾಜ್ಯಗಳ ಮಹಿಳೆಯರು ಪ್ರಯೋಗ ಪಶುಗಳಾದ ಅಮ್ನಿಯೋ ಸಿಂಥೆಸಿಸ್ ಮತ್ತು ಕ್ವಿನಿಕ್ರೀನ್‌ನಂತಹ ವೈದ್ಯಕೀಯ ಪ್ರಯೋಗಗಳು ನಡೆದಾಗ ಕೂಡ ಮಹಿಳಾ ಸಂಘಟನೆಗಳೇ ಸರ್ಕಾರವನ್ನು ಎಚ್ಚರಿಸಿದ್ದವು ಎಂಬುದನ್ನು ಗಮನಿಸಬೇಕು. ಕ್ವಿನಿಕ್ರೀನ್‌ನಂತಹ ವೈದ್ಯಕೀಯ ಪರೀಕ್ಷೆಗೆ ಒಳಗಾಗದೇ ಗರ್ಭ ನಿರೋಧಕವಾಗಿ ಬಳಸಲ್ಪಡುತ್ತಿದ್ದ ಈ ಔಷಧ ನಿಯಂತ್ರಣ ಅಧಿಕಾರಿಗಳ ಗಮನಕ್ಕೆ ಬರದೆ ದೇಶದಾದ್ಯಂತ ಬಳಕೆಯಲ್ಲಿತ್ತು.

ಇದರ ವಿರುದ್ಧ ದೇಶದಾದ್ಯಂತ ಹೋರಾಟ ನಡೆಸಲಾಗಿತ್ತು. ದೇಶದ ಜನರನ್ನು ಎಲ್ಲ ವಿಷಯಗಳಲ್ಲಿ ಶ್ರೀಮಂತ ರಾಷ್ಟ್ರಗಳ ಜನರಿಗೆ ಒತ್ತೆ ಇಟ್ಟು ಬಿಡುವ ತಹ ತಹದಿಂದ ಸರ್ಕಾರವನ್ನು ಹೊರತರುವತ್ತ ಒಂದು ಸಾಮೂಹಿಕ ಪ್ರಯತ್ನ ಇನ್ನೂ ಗಟ್ಟಿಗೊಳ್ಳಬೇಕು. ○

ಅಂಗನವಾಡಿ ಕಾರ್ಯಕರ್ತೆಯರ ಹೋರಾಟ... ಗೆಲುವು

ಅಂಗನವಾಡಿ ಕೇಂದ್ರಗಳ ಖಾಸಗೀಕರಣದ ಭಾಗವಾಗಿ, ಸುಪ್ರಿಂ ಕೋರ್ಟ್ ಆದೇಶವೆಂದೂ ನಂಬಿಸಿ ರಾಜ್ಯ ಸರ್ಕಾರ ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಗ್ರಿಗಳ ಸರಬರಾಜನ್ನು ಗ್ರಾಮಾಂತರ ಸಮುದಾಯ ಗಳನ್ನೊಳಗೊಂಡ ಸ್ತ್ರೀಶಕ್ತಿ ಗುಂಪುಗಳಿಗೆ ನೀಡಬೇಕೆಂದೂ ಆದೇಶಿಸಿತ್ತು.

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆ ಸರ್ಕಾರಿ ಆದೇಶ ಮತ್ತು ಸುಪ್ರಿಂ ಕೋರ್ಟ್ ಆದೇಶವನ್ನು ಪರಿಶೀಲಿಸಿದಾಗ ಸುಪ್ರಿಂ ಕೋರ್ಟ್ ಆಹಾರ ಸಾಮಗ್ರಿಗಳನ್ನು ಗುತ್ತಿಗೆದಾರರ ಮುಖಾಂತರ ಪೂರೈಸದೇ ಮಹಿಳಾ ಮಂಡಳಿಗಳಿಗೆ, ಸ್ವಸಹಾಯ ಗುಂಪುಗಳಿಗೆ ಕೊಡಬೇಕೆಂದು ಮಾರ್ಗದರ್ಶನ ನೀಡಿದೆ. ಇದರ ಪ್ರಕಾರ ಈಗಾಗಲೇ ರಾಜ್ಯದಲ್ಲಿ 2006ನೇ ಇಸವಿಯಿಂದಲೇ ಜಾರಿಯಾಗಿದೆ. ಮಹಿಳಾ ಮಂಡಳಿಗಳ ಹೆಸರಿನಲ್ಲಿ ಆಹಾರ ಸಾಮಗ್ರಿಗಳ ಟೆಂಡರನ್ನು ಕರೆಯುವುದು. ಕೇಂದ್ರಗಳಿಗೆ ಸರಬರಾಜು ಮಾಡುವ ಸಾರಿಗೆ ಮಾತ್ರವೇ ಗುತ್ತಿಗೆಯಲ್ಲಿರುವುದು.

ಆದರೆ ಇಲಾಖಾ ಕಾರ್ಯದರ್ಶಿಗಳು ಮಹಿಳಾ ಸಬಲೀಕರಣದ ಹೆಸರಿನಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಪ್ರಾಮುಖ್ಯತೆಯನ್ನು ಬಲಹೀನಗೊಳಿಸುವ ತಂತ್ರವನ್ನು ಬಹು ಜಾಣ್ಮೆಯಿಂದ ಜಾರಿ ಮಾಡಿದ್ದನ್ನು ಸತತ ಹೋರಾಟದಿಂದ ಒಂದು ವರ್ಷ ಕಾಲ ಹಿಂತೆಗೆಸಲು ಸಾಧ್ಯವಾಗಿದೆ.

ಈ ಸುತ್ತೋಲೆ ಬಂದ ನಂತರ ಹಲವು ಬಾರಿ ಸರ್ಕಾರದ ಬಳಿ ಚರ್ಚೆ ನಡೆಸಲಾಗಿತ್ತು, ಪ್ರತಿ ಬಾರಿಯೂ ಇಲಾಖಾ ಕಾರ್ಯದರ್ಶಿಗಳ ಸುಪ್ರಿಂ ಕೋರ್ಟ್ ಹೆಸರು ಹೇಳಿ ತಪ್ಪಿಸಿಕೊಳ್ಳುತ್ತಿದ್ದರು. ಕಾನೂನು ಪ್ರಕಾರವೇ ಚರ್ಚೆ ಮಾಡಿ ತೀವ್ರವಾಗಿ ಹೋರಾಟದ ಮುಖಾಂತರ ಒತ್ತಡ ಹೇರಲಾಯಿತು.

ಜುಲೈ 7ರಂದು ತಾಲ್ಲೂಕು ಮಟ್ಟದ ಪ್ರತಿಭಟನೆಗಳನ್ನು ಮಾಡಿ, ಜುಲೈ 15 ರಂದು ಚಾಮರಾಜನಗರ, ಬೆಂಗಳೂರು, ಕೋಲಾರ, ತುಮಕೂರು, ಮಂಡ್ಯ, ಮೈಸೂರು, ಹಾಸನ, ಉಡುಪಿ, ಗದಗ್, ಬೆಳಗಾಂ, ಬಾಗಲಕೋಟೆ, ಬಿಜಾಪುರ, ಬೀದರ್, ಉತ್ತರಕನ್ನಡ, ರಾಯಚೂರು, ಕೊಪ್ಪಳ, ಗುಲ್ಬರ್ಗಾ, ಚಿಕ್ಕಬಳ್ಳಾಪುರ, ಬಳ್ಳಾರಿ, ಶಿವಮೊಗ್ಗ ಮತ್ತು ದ.ಕನ್ನಡ ಜಿಲ್ಲೆಗಳಿಂದ ಸುಮಾರು 10 ಸಾವಿರ ನೌಕರರು ಪಾಲ್ಗೊಂಡಿದ್ದರು. ಬೆಳಿಗ್ಗೆ 12 ಗಂಟೆಗೆ ಬೆಂಗಳೂರಿನ ರೈಲ್ವೆ ಸ್ಟೇಷನ್‌ನಿಂದ ಮೆರವಣಿಗೆ ಹೊರಟು ಚಾಲುಕ್ಯ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು. ಸಂಜೆ 5 ಗಂಟೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರು ಬಂದರು. ಸುಮಾರು 45 ನಿಮಿಷಗಳ ಕಾಲ ಸ್ಥಳದಲ್ಲಿಯೇ ಅವರು ಇರಬೇಕಾಯಿತು. ಆಶ್ವಾಸನೆ ಒಪ್ಪುವುದಿಲ್ಲ, ಆದೇಶ ಬೇಕೆಂಬ ತೀವ್ರ ಒತ್ತಡಕ್ಕೆ ಮಣಿದ ಸಚಿವರು 16.07.2008ರಂದು ಮಧ್ಯಾಹ್ನ 12 ಗಂಟೆಗೆ ಜಂಟೀ ಸಭೆಯಲ್ಲಿ ಅಲ್ಲಿಯೇ ಘೋಷಣೆ ಮಾಡಿದರು. ಸಭೆ ಆಗುವ ತನಕ ಹೋರಾಟ ವಾಪಸ್ಸು ಮಾಡುವುದಿಲ್ಲವೆಂದೂ. ಘೋಷಿಸಿ, ಪ್ರತಿಭಟನೆಯನ್ನು ಬನ್ನಪ್ಪ ಪಾರ್ಕ್‌ಗೆ ಸ್ಥಳಾಂತರಿಸಲಾಯಿತು. ರಾತ್ರಿ 8 ಗಂಟೆಯ ನಂತರ ಮಳೆ ಪ್ರಾರಂಭವಾಯಿತು. ಮಳೆಯಲ್ಲಿ ಕುಳಿತ ಕಡೆಯಲ್ಲಿ ನೆನೆಯುವುದಕ್ಕಿಂತ ವಿಧಾನಸೌಧಕ್ಕೆ



ಹೋಗುವುದು ಮೇಲೆಂದೂ ಎಲ್ಲರೂ ಮಳೆಯಲ್ಲಿಯೇ ಸರ್ಕಾರ ನಿರ್ಣಯಗಳನ್ನು ಮಾಡುವ ಬಹುಮಹಡಿಗಳ ಕಟ್ಟಡಕ್ಕೆ ನುಗ್ಗಿದರು. ಸುಮಾರು 500 ಜನ ಅಂಗನವಾಡಿ ನೌಕರರು ಇಲ್ಲಿದ್ದೇವೆಂದೂ ಪೊಲೀಸ್‌ಗೆ ತಿಳಿಸಿದರೆ ಅವರೂ ಬರಲಿಲ್ಲ. ಬಂಧನ ಮಾಡಲಿಲ್ಲ. ಹೀಗೆ ಒತ್ತಡವನ್ನು ತಂದನಂತರ ಪ್ರಮುಖವಾದ ಬೇಡಿಕೆ ಸ್ತ್ರೀ ಶಕ್ತಿ ಗುಂಪುಗಳ ಮುಖಾಂತರ ಆಹಾರ ಸಾಮಗ್ರಿಗಳ ಸರಬರಾಜನ್ನು ಪೂರೈಸುವ ಸುತ್ತೋಲೆಯನ್ನು ಈ ವರ್ಷ ಜಾರಿ ಮಾಡುವುದಿಲ್ಲವೆಂದೂ ವಾಪಸ್ಸು ತೆಗೆಸಲಾಯಿತು. ಮುಂದೆ ಇದರ ಬಗ್ಗೆ ಸಂಘಟನೆ ಬಳಿ ಚರ್ಚೆ ಮಾಡಿಯೇ ತೀರ್ಮಾನ ತೆಗೆದು ಕೊಳ್ಳುವುದು, 7194 ಜನರ ಹೊಸ ನೇಮಕಾತಿಗೆ ಸಂಬಂಧಿಸಿ ಹೈಕೋರ್ಟ್‌ನಲ್ಲಿ ಈಗಾಗಲೇ ಮೇಲ್ಮನವಿ ಸಲ್ಲಿಸಿದೆ. ಹಾಗೂ ಸ್ಟೇ ತೆಗೆದುಕೊಳ್ಳುವುದು, ಇವರನ್ನು ಕೆಲಸದಿಂದ ತೆಗೆಯದಂತೆ ಕ್ರಮ ವಹಿಸುವುದು. ಕನಿಷ್ಠ ಕೂಲಿ ಮತ್ತು ನಿವೃತ್ತಿ ಸೌಲಭ್ಯಕ್ಕೆ ಸಂಬಂಧಿಸಿ ಈ ಬಜೆಟ್‌ನಲ್ಲಿ ಘೋಷಿಸಲಾಗುವುದು ಎಂದೂ ತಿಳಿಸಿದರು.

ಮರುದಿನ ಸಚಿವರ ಬಳಿ ಚರ್ಚಿಸಿದಾಗ ಬಜೆಟ್‌ನಲ್ಲಿ ಅಂತಿಮ ಮಾಡುವಾಗ ಪ್ರಯತ್ನಿಸುವುದಾಗಿ ತಿಳಿಸಿದ್ದಾರೆ.


ಒಟ್ಟಾರೆ ಈ ಹೋರಾಟದಲ್ಲಿ ಆಹಾರ ಸಾಮಗ್ರಿಗಳ ಸರಬರಾಜಿನ ಬಗೆಗಿನ ಸುತ್ತೋಲೆಯನ್ನು ಸರ್ಕಾರ ಸದ್ಯಕ್ಕೆ ವಾಪಸ್ಸು ಪಡೆದಿದ್ದು ಯಶಸ್ಸು ಕಂಡಿದೆ.

■ ಎಸ್.ವರಲಕ್ಷ್ಮಿ

ಗಿರಿಗೆ ನಿಯೋಗ.......

ಪುಟ 3 ರಿಂದ

ಕುಶಲೋಪರಿ ವಿಚಾರಿಸಿದ. ನಾವು ಏನಾಯಿತೆಂದು ಕೇಳಿದಾಗ ಛಾವಣಿ ಕುಸಿದಿರುವುದನ್ನು, ಅದರ ಮೇಲೆ ತಾತ್ಕಾಲಿಕ ರಕ್ಷಣೆಗೆ ಪ್ಲಾಸ್ಟಿಕ್ ಶೀಟ್‌ಗಳ ಹೊದಿಕೆಯನ್ನು ವಿವರಿಸಿ ಗುಹೆಯ ಬಳಿ ಅಥವಾ



ಕುಸಿದ ಮೇಲ್ಛಾವಣಿಗೆ ಹೊದಿಸಿದ ಪ್ಲಾಸ್ಟಿಕ್ ಹಾಳೆಗಳು

ಒಳಹೋಗಲು ನಿರ್ಬಂಧವಿರುವುದಾಗಿ ಹೇಳಿದ. ಮುಜರಾಯಿ ಇಲಾಖೆಯ ಅಧಿಕಾರಿಗಳ ಪರವಾನಗಿ ಇಲ್ಲದೆ ಅದರ ವೀಕ್ಷಣೆ ಅಸಾಧ್ಯವೆಂದು ಹೇಳಿದರು. ಅಧಿಕಾರಿಯು ಇಲ್ಲದಿರುವುದನ್ನು ಇಲ್ಲಿಗೆ ಅವರು ಬರಬಹುದು ಎಂದೂ ಜೊತೆಯಲ್ಲೇ ಇದ್ದ ಪೊಲೀಸ್ ಪೇದೆ ಹೇಳಿದ. ಅಧಿಕಾರಿ ಆಗಮನದ ಅನಿಶ್ಚಿತತೆಯಿಂದಾಗಿ ಹಿಂತಿರುಗಿ ಗಿರಿ ಇಳಿಯುತ್ತಿರುವಾಗಲೇ ಎದುರಾದ ಮುಜರಾಯಿ ಇಲಾಖೆ ಅಧಿಕಾರಿ ತ್ಯಾಗರಾಜ್ ಜೊತೆ ಮತ್ತೆ ಹಿಂತಿರುಗಿದೆವು.

ಅವರು ನಮ್ಮ ಜೊತೆಗಿದ್ದು ಬೀಗ ತೆಗೆಸಿ ಒಳ ಕರೆದೊಯ್ದು ಗುಹೆಯ ಒಳಪ್ರವೇಶವನ್ನು, ಕುಸಿದ ಮೇಲ್ಛಾವಣಿ ಪ್ರದೇಶವನ್ನು ತೋರಿಸಿ, ವಿವರಿಸಿದರು. ದರ್ಗಾ ಪೀಠವಿರುವ ಗುಹೆಯ ಒಳಗೆ ಮೇಲಿನ ಪ್ರವೇಶದ್ವಾರವನ್ನು ದಾಟಿ ಕೆಳಗೆ ಇಳಿದರೆ ಅಲ್ಲಿರುವ ಬಾಗಿಲುಗಳು ಮಣ್ಣು ಕುಸಿದಿರುವುದರಿಂದಾಗಿ ತೆರೆಯಲು ಸಾಧ್ಯವಾಗಿಲ್ಲ. ದರ್ಗಾ ಪೀಠವಿರುವ ಗುಹೆಯ ಇನ್ನೊಂದು ಬದಿಯ ಬಾಗಿಲಿನ ಬೀಗವನ್ನು ಹಾಕಲಾಗಿತ್ತು. ಒಟ್ಟಾರೆ ಒಳಪ್ರವೇಶ ಅಸಾಧ್ಯವಿದ್ದು, ಪೂಜಾವಿಧಿ ವಿಧಾನಗಳೇನಿದ್ದರೂ ಹೊರಗಿನಿಂದಲೇ ಮಾಡಲಾಗುತ್ತಿತ್ತು.

ಕ್ರಮಗಳು

ಕುಸಿದಿರುವುದು ಪ್ರವೇಶದ್ವಾರದ ಬಳಿಯ ಪ್ರದೇಶ. ಸುಮಾರು 10 ಅಡಿಗಳಷ್ಟು ಮಣ್ಣು ಛಾವಣಿ ಕುಸಿದಿದೆ. ಅಧಿಕಾರಿಯವರ ಪ್ರಕಾರ ಹಿಂದಿನ ವರುಷಗಳಲ್ಲಿ ಸವೆದಿರುವ ಈ ಭಾಗದ ಛಾವಣಿಯಿಂದ ನೀರು ಜಿನುಗುತ್ತಿತ್ತು. ಶಾಖಾದ್ರಿಯವರು ಅದರ ಮೇಲೆ ಮಣ್ಣು ಹಾಕಿಸಿದ್ದರು. ಮಣ್ಣು ಹಳೆಯದಾಗಿದೆ. ಆ ವಾರ ಬಂದ ಮಳೆಗೆ ಮಣ್ಣು ಶಕ್ತಿಯಿಲ್ಲದೆ ಕುಸಿದಿದೆ ಎಂದರು ತ್ಯಾಗರಾಜ್. ಇಲ್ಲಿನ ಮಣ್ಣಿನ ಸತ್ವವನ್ನು ಪರಿಶೀಲಿಸಲು ಹೈದ್ರಾಬಾದ್‌ನ ಪ್ರಯೋಗಾಲಯಕ್ಕೆ ಮಣ್ಣು ಕಳಿಸಲಾಗಿದೆ. ಅದು ಬಂದ ನಂತರ ರಕ್ಷಣೆ ಕುರಿತು ನಿರ್ಧರಿಸಲು ಸಾಧ್ಯವಾಗುವುದು ಎಂದೂ ಹೇಳಿದರು. ಕುಸಿಯುವುದನ್ನು ಯಾರು ನೋಡಿದರು ಎಂದರೆ: "ಅದು ರಾತ್ರಿ ಸಮಯ. ಅಲ್ಲಿದ್ದದ್ದು ಇಬ್ಬರು ಮುಜಾವರ್‌ಗಳು, ಇಬ್ಬರು ಪೊಲೀಸ್ ಪೇದೆಗಳು. ರಾತ್ರಿಯೆ ಕುಸಿದಿದೆ. ಬೆಳಗು ಹರಿದಾಗ ಕಂಡಿದೆ. ತಕ್ಷಣ ನಮಗೆ ತಿಳಿಸಿದ್ದರಿಂದ ಕ್ರಮ ವಹಿಸಿದ್ದೇವೆ" ಎನ್ನುತ್ತಾರೆ ಅವರು. ಈ ನಾಲ್ಕು ಜನರೂ ಈಗ ಸರ್ಕಾರದ ನೌಕರರೇ. ಹೀಗಾಗಿ ಮಾತಿಗೂ ಕಂಟ್ರೋಲ್ ಇದೆ. ಸುತ್ತಲೂ ಬಂದೋಬಸ್ತ್ ಇದೆ. ಅವಘಡಕ್ಕೆ ಅವಕಾಶವಿಲ್ಲ ಎನ್ನುತ್ತಾರೆ ಅಧಿಕಾರಿ. 'ಈಗ ಕುಸಿದಿರುವುದನ್ನು ಹೇಗೆ ಸರಿಪಡಿಸುವಿರಿ? ಕಟ್ಟುವ ಯೋಚನೆ ಏನು' ಎಂದಾಗ ಹೈದ್ರಾಬಾದ್‌ನ ಸುಪ್ರಸಿದ್ಧ ಇಂಜಿನಿಯರ್ ಎಲ್ಲವನ್ನು ಅಧ್ಯಯನ ಮಾಡುತ್ತಿದ್ದು ಅವರು ಒಂದು ರೂಪುರೇಷೆ ತಯಾರಿಸಿಕೊಡಲಿದ್ದಾರೆ. ಅದಾದ ಬಳಿಕ ನಿರ್ಧರಿಸುವುದು ಎಂದರು ತ್ಯಾಗರಾಜ್.

ಈ ಬಗ್ಗೆ ನಿರ್ಧರಿಸುವವರು ಯಾರು ಎಂದಾಗ ಸರ್ಕಾರವೇ ನಿರ್ಧರಿಸಬೇಕೆಂದು ಹೇಳಿದರು. ದರ್ಗ ಪೀಠವನ್ನು ವಿವಾದಗ್ರಸ್ತಗೊಳಿಸಿರುವಾಗ ನ್ಯಾಯಾಲಯದಿಂದಲೂ ಹಲವು ನಿರ್ದೇಶನಗಳಿರುವಾಗ ನಿಮ್ಮ ಕ್ರಮವೇನು ಎಂದು ಕೇಳಿದರೆ ಇದರ ರಿಪೇರಿ, ನಿರ್ಮಾಣಕ್ಕಾಗಿ ನ್ಯಾಯಾಲಯದ ಅನುಮತಿ ಪಡೆಯಲಿದ್ದೇವೆ ಎಂದರು.

ಗುಹೆಯ ಉಳಿದ ಭಾಗಗಳ ಸ್ಥಿತಿ ಬಗ್ಗೆ ಕೇಳಿದಾಗ ತಕ್ಷಣದಲ್ಲಿ ಅದು ಕುಸಿಯದಂತೆ ತಾತ್ಕಾಲಿಕವಾಗಿ ಒಳಗೆ ಕಬ್ಬಿಣದ ಹಾಗೂ ಕಟ್ಟಿಗೆಗಳ ಹಂದರವನ್ನು ಸಹಾಯಕವಾಗಿ ನಿಲ್ಲಿಸಲಾಗಿದೆ ಎಂದರು.

ವ್ಯವಸ್ಥಿತ ತಿರುಚುವಿಕೆ

ಇಲ್ಲಿ ಕುಸಿದಿರುವ ಭಾಗ ಹಾಗೂ ಇಡೀ ಗುಹೆಯನ್ನು, ಅಲ್ಲಿರುವ ದರ್ಗಾ -ಪಾದುಕೆ ಇತ್ಯಾದಿಗಳನ್ನು ಯಥಾರೀತಿಯಲ್ಲಿಯೇ ರಕ್ಷಿಸುವಂತಹ ಒಂದು ಯೋಜನೆಯನ್ನು 'ಸರ್ಕಾರ'ವೇ ಅಂತಿಮಗೊಳಿಸುವುದು ಎಂದರೆ ಸಂಘಪರಿವಾರ ಬಯಸಿದಂತೆ ಎಂದಾಗುವುದಿಲ್ಲವೇ ಎಂಬ ಪ್ರಶ್ನೆ ಬರುತ್ತದೆ. ಯಾಕೆಂದರೆ ಕರ್ನಾಟಕ ಸರ್ಕಾರ ಹಿಂದಿನಿಂದಲೂ ಹಂತಹಂತವಾಗಿ ಅಲ್ಲಿನ ಆಚರಣೆಗೆ ವಿರುದ್ಧವಾಗಿ ಹಲವು ಆಚರಣೆಗಳನ್ನು ಯಜ್ಞ, ದತ್ತ, ವಿಗ್ರಹಪೂಜೆ ಇತ್ಯಾದಿ) ಸಂಘ ಪರಿವಾರದ ಬೇಡಿಕೆಯಂತೆ ಜಾರಿಗೊಳಿಸಿದೆ. ಅಭಿವೃದ್ಧಿ ಕಾಮಗಾರಿ ನಡೆಸುವ ಹೆಸರಿನಲ್ಲಿ ಹಿಂದಿನ ಪ್ರಮುಖ ಕಟ್ಟಡಗಳಾದ ಶಾಖಾದ್ರಿಯವರು ಜನರನ್ನು ಭೇಟಿ ಮಾಡುವ ಮನೆ, ಸೂಫಿ ಸಂತರ ಅದಾಲತ್ ಮನೆ ಲೋಬಾನ ಕೊಂಡೊಯ್ಯುತ್ತಿದ್ದ ಮನೆಗಳನ್ನು ಜಿಲ್ಲಾಧಿಕಾರಿ ಕಟಾರಿಯಾ ಮೂಲಕ ನೆಲಸಮ ಮಾಡಿಸಲಾಗಿದೆ. ಅವುಗಳು ಇನ್ನೂ ಪುನರ್ ನಿರ್ಮಾಣವೇ ಆಗಿಲ್ಲ (ಅವು ಅಷ್ಟು ಶಿಥಿಲವಾಗಿರಲಿಲ್ಲ).



ಮುಜಾವರ್

ಅತಿಕ್ರಮಣ

ಉರುಸ್ ವಿಧಿವತ್ತಾಗಿ ಆಚರಿಸಲು ಸರ್ಕಾರ ಅಡ್ಡಿಪಡಿಸಿದ್ದು, ಶಾಖಾದ್ರಿಯವರ ನೇತೃತ್ವದಲ್ಲಿ ಅದು ನಡೆಯುವುದನ್ನು ತಪ್ಪಿಸಿ, ಕೇವಲ ಅವರನ್ನು ಸಾಂಕೇತಿಕ ಮೂರ್ತಿಯನ್ನಾಗಿಸಿ ಸರ್ಕಾರದ ಜಿಲ್ಲಾಧಿಕಾರಿಗಳೇ ನಡೆಸಲು ಮುಂದಾಗಿದ್ದು, ಅಲ್ಲಿನ ದರ್ಗಾಗಳ ಮೇಲೆ ಉರುಸ್‌ನ ಸಂಪ್ರದಾಯದಂತೆ ಹಸಿರು ಬಟ್ಟೆ ಹೊದಿಸುವುದನ್ನು ನ್ಯಾಯಾಲಯದ ತೀರ್ಪನ್ನು ತಿರುಚಿ ನಿರ್ಬಂಧಿಸಿದ್ದು, ಕಣ್ಣೆದುರಿವೆ. ಮಾತ್ರವಲ್ಲ, ಶ್ರೀ ಗುರುದತ್ತ ಬಾಬಾಬುಡನ್ ಸ್ವಾಮಿ ದರ್ಗಾ ಪೀಠ'ವನ್ನು ಕೇವಲ 'ದತ್ತಪೀಠ'ವೆಂದು ಲೋಕೋಪಯೋಗಿ ಇಲಾಖೆ, ಹಾದಿಯುದ್ದಕ್ಕೂ ಬೋರ್ಡ್‌ಗಳನ್ನು ಬರೆಸಿಹಾಕಿದೆ. ಮಾತ್ರವಲ್ಲ ಕಳೆದ ಕೆಲವು ವರುಷಗಳಿಂದಲೂ ಮೊಬೈಲ್‌ನ ಗೋಪುರ (ಟವರ್)ನ ಹೆಸರೂ ದತ್ತಪೀಠವೆಂದು ಮಾಡಿರುವುದು 'ಸೂಫಿ' ಪರಂಪರೆ ಸಾಮರಸ್ಯದ ಸಂಸ್ಕೃತಿ, ಆಚರಣೆಗಳನ್ನು ತಿರುಚುವ ಯತ್ನಗಳನ್ನು ಎತ್ತಿ ತೋರಿಸುತ್ತದೆ. ನಾವು ಗುಹೆ ಪ್ರದೇಶದ ವೀಕ್ಷಣೆ ಮುಗಿಸಿದಾಗ ಮುಜರಾಯಿ ಇಲಾಖೆ ಕಛೇರಿಗೆ ಭೇಟಿ ನೀಡಿದೆವು. ಅಲ್ಲಿ ಒಂದು 'ಚಮತ್ಕಾರ' ನಡೆದಿತ್ತು. ಕಛೇರಿಯ ಗೋಡೆ ಮೇಲೆ ಹಿಂದೆಂದೂ ಇಲ್ಲದಿದ್ದ ಮೂರು ಮುಖಗಳ ನಾಲ್ಕು ನಾಯಿಗಳುಳ್ಳ ಗುರುದತ್ತಾತ್ರೆಯನ ಫೋಟೋ ಉದ್ಭವಿಸಿತ್ತು. ಸರ್ಕಾರದ ಕಛೇರಿಯಲ್ಲಿ ಒಂದೇ ಧರ್ಮದ ಸಂಕೇತ ಲಾಂಛನಗಳು ಇರಬಾರದು. (ಯಾವ ಧರ್ಮದ್ದು ಇರಬಾರದು) ಅದರಲ್ಲಿಯೂ ದತ್ತ ಮೂರ್ತಿ ಸ್ಥಾಪಿಸಿ ವೈದಿಕ ರೀತಿ ಆಚರಣೆ ಜಾರಿಗೆ ಸಂಘ ಪರಿವಾರ ಒತ್ತಾಯಿಸುತ್ತಿರುವಾಗ 'ದರ್ಗಾ ಪೀಠ'ದ ಸೂಫಿ ಸಂಸ್ಕೃತಿ ಪ್ರತಿಬಿಂಬಿಸದೇ ದತ್ತ ಫೋಟೋ ಮಾತ್ರ ಹಾಕಿರುವ ಉದ್ದೇಶವೇನು? ಇದು ಅತಿಕ್ರಮಣ ಅಲ್ಲವೇ?



ಪ್ರವೇಶ ದ್ವಾರ: ಶ್ರೀ ಗುರು ದತ್ತಾತ್ರೇಯ ಬಾಬು ಬುಡನ್ ಸ್ವಾಮಿ ದರ್ಗಾ ನಾಮಫಲಕ

ಇದರ ಹಿಂದೆ ಕೋಮುವಾದಿ ಫ್ಯಾಸಿಸ್ಟ್ ಅಜೆಂಡಾವಿಲ್ಲವೇ? ಅದೂ ಆರ್.ಎಸ್.ಎಸ್. ಚಾಲಿತ ಬಿಜೆಪಿಯು ಸರ್ಕಾರ ರಚಿಸಿ ಆಡಳಿತ



ಯಂತ್ರವನ್ನೇ ಕೈಯಲ್ಲಿ ಹಿಡಿದುಕೊಂಡಿರುವಾಗ ಮುಂದಾದರೂ ಏನಾದೀತು?

ಪಾರದರ್ಶಕತೆ

ಆದ್ದರಿಂದ ಪ್ರತಿಯೊಂದು ಹೆಜ್ಜೆಯಿಡುವಾಗಲೂ ಸರ್ಕಾರ ಎಲ್ಲವನ್ನೂ ಸಾರ್ವಜನಿಕರೆದುರು ತೆರೆದಿಡಬೇಕು. 'ರಿಪೇರಿ'ಯ ರೂಪುರೇಷೆ ರೂಪಿಸುವಲ್ಲಿ ಜಾರಿಗೊಳಿಸುವಲ್ಲಿಯೂ ಒಟ್ಟು ವಿಷಯಗಳನ್ನು ವಿವಿಧ ಸಂಘಟನೆಗಳು, ರಾಜಕೀಯ ಪಕ್ಷಗಳು, ಬುದ್ಧಿಜೀವಿಗಳು ಮುಂತಾದ ವಿಭಾಗಗಳನ್ನು ಒಳಗೊಂಡು ಅಂತಿಮವಾದ ನಿರ್ಧಾರ ಕೈಗೊಳ್ಳಬೇಕು. ಎಲ್ಲವೂ ಸಾರ್ವಜನಿಕರೆದುರು ತೆರೆದಿಟ್ಟು ಪಾರದರ್ಶಕತೆ ಎಲ್ಲಾ ಹಂತಗಳಲ್ಲಿಯೂ ಪಾಲಿಸಬೇಕು. ನ್ಯಾಯಾಲಯದ ನಿರ್ದೇಶನದಂತೆ 1975ರ ಹಿಂದಿನ ಆಚರಣೆಗಳನ್ನು, ಅಲ್ಲಿರುವ ವಿಭಿನ್ನ ಸಂಸ್ಕೃತಿಯನ್ನು ತಪ್ಪದೇ ರಕ್ಷಿಸಬೇಕು.

ಬೆಟ್ಟದ ಮೇಲಿಂದ ಕೆಳಗೆ ಇಳಿದು ಬರುವಾಗ ಮುಂದಿನ ಬೆಳವಣಿಗೆಗಳ ಬಗ್ಗೆಯೂ ಯೋಚನೆ ಬರುತ್ತಿತ್ತು. ಇಡೀ ವಿದ್ಯಮಾನಗಳ ಬಗ್ಗೆ ಮುಖ್ಯ ಮಂತ್ರಿಗಳೇ ನಿರ್ಧಾರ ಕೈಗೊಳ್ಳಬೇಕೆಂದು ಅಲ್ಲಿಗೆ ಭೇಟಿ ನೀಡಿದ್ದ ಸಂಘ ಪರಿವಾರದ ಸಚಿವರು ಹೇಳಿರುವುದು ಕೇಶವಶಿಲ್ಪ ಸೂಚಿಸುವ ಪರಿಹಾರ ಸೂತ್ರವಾಗದೆ ಇದ್ದೀತೆ ಎಂದೂ ಆತಂಕ ಉಂಟಾಯಿತು. ಅಲ್ಲಿ ಕಂಡದ್ದು, ವಿಶ್ಲೇಷಿಸಿದ್ದನ್ನು ಮಾಧ್ಯಮ ಮಿತ್ರರೆದುರು ವಿವರಿಸಿ, ನಮ್ಮ ಆಗ್ರಹಗಳನ್ನು ತಿಳಿಸಿದೆವು.

ಕೇಂದ್ರದ ಕಾಂಗ್ರೆಸ್‌ನ ಯುಪಿಎ ಸರ್ಕಾರ ಅಮೇರಿಕಾದೊಂದಿಗೆ ಮಾಡಿಕೊಳ್ಳಲು ಮುಂದಾಗಿರುವ ಪರಮಾಣು ಒಪ್ಪಂದ, ಎಡಪಕ್ಷಗಳ ಬೆಂಬಲ ಹಿಂತೆಗೆತ, ಹೇಗೂ ಅಧಿಕಾರದಲ್ಲಿ ಉಳಿಯಲು ಕಾಂಗ್ರೆಸ್‌ನ ಅನೈತಿಕ ಹಾದಿಗಳು, ಕಸರತ್ತುಗಳು, ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವ ಉತ್ಸುಕತೆ ಮುಂಬರಲಿರುವ ಪಾರ್ಲಿಮೆಂಟ್ ಚುನಾವಣೆಗಳು ಹೀಗೆ.... ಬಾಬಾಬುಡನ್‌ಗಿರಿ ಹೇಗೆಲ್ಲ ವಿವಾದಾಗ್ರಸ್ತತೆಗೆ ಬಳಕೆಯಾಗಬಹುದು ಎಂದು ಯೋಚನೆಗಳು ಬಂದವು.

ನಿಯೋಗದ ಆಗ್ರಹಗಳು

ಗುಹೆಯ ಮೇಲ್ಛಾವಣಿ ಕುಸಿತ ಹೇಗಾಯಿತು ಎಂಬುದನ್ನು ವಿವರವಾಗಿ ಪರಿಶೀಲಿಸಬೇಕು.

ಗುಹೆಯ ರಕ್ಷಣೆಗೆ ಅಗತ್ಯವಾದ ಎಲ್ಲಾ ಕ್ರಮಗಳನ್ನು ಗಂಭೀರತೆಯಿಂದ ಕೈಗೊಳ್ಳಬೇಕು. ಅಲ್ಲಿನ ಪರಂಪರಾನುಗತ ಆಚರಣೆ, ನ್ಯಾಯಾಲಯದ ನಿರ್ದೇಶನಗಳಿಗೆ ಎಳ್ಳಷ್ಟು ಚ್ಯುತಿ ಬರಕೂಡದು.

ಎಲ್ಲಾ ನಿರ್ಧಾರ ಹಾಗೂ ಕಾರ್ಯಗತಗೊಳಿಸುವಿಕೆಯ ಬಗ್ಗೆ ವಿಶಾಲವಾಗಿ ಸಮಾಲೋಚಿಸಬೇಕು. ಪ್ರತಿಯೊಂದು ಸಾರ್ವಜನಿಕರೆದುರು ಬಹಿರಂಗಗೊಂಡು ಪಾರದರ್ಶಕತೆಯನ್ನು ಪಾಲಿಸಬೇಕು.

ದರ್ಗಾ-ಪೀಠದ ಒಟ್ಟೂ ಸ್ವರೂಪವನ್ನು ಹಾಳುಗೆಡಹುವ, ವೈದಿಕೀಕರಣಗೊಳಿಸುವ ಹಾಗೂ ಶಾಖಾದ್ರಿಯವರಿಗೆ ಲಭ್ಯವಿರುವ ಹಕ್ಕು ಬಾಧ್ಯತೆಗಳಿಗೆ ಚ್ಯುತಿ ತರದಂತೆ ಎಲ್ಲಾ ಹಂತಗಳಲ್ಲಿಯೂ ರೂಢಿಯಂತೆ ಒಳಗೊಳ್ಳುವ ಪ್ರಕ್ರಿಯೆ ಸತತ ನಡೆಯಬೇಕು. ಅಲ್ಲಿನ ಕಾರ್ಯಗಳನ್ನು ಕೈಗೊಳ್ಳುವ ಸರ್ಕಾರದ ಕೋಮುವಾದಿ ಸಂಘಟನೆಗಳ ಕ್ರಮಗಳನ್ನು ಎಚ್ಚರದಿಂದ ಜನತೆ ಗಮನಿಸಿ ಬಾಬಾಬುಡನ್ ಗಿರಿಯ ಸಾಮರಸ್ಯ ಸಂಸ್ಕೃತಿ ರಕ್ಷಿಸಬೇಕು.

ಜಗದಗಲ

ಶರತ್‌ಚಂದ್ರ

ಕೊಲಂಬಿಯಾ ಒತ್ತೆಯಾಳುಗಳ ಬಿಡುಗಡೆ ನಾಟಕ

ಕೊಲಂಬಿಯಾ ಯಾವಾಗಲೂ ವಿಚಿತ್ರ ಕಾರಣಗಳಿಗೆ ಸುದ್ದಿಯಲ್ಲಿರುತ್ತದೆ. ಇತ್ತೀಚೆಗೆ ಎಂಬ ಗೆರಿಲ್ಲಾ ಸಂಘಟನೆಯ ವಶದಲ್ಲಿದ್ದ ಹಲವು ಪ್ರಮುಖ ಒತ್ತೆಯಾಳುಗಳನ್ನು 'ವಿಶಿಷ್ಟ ಕಾರ್ಯಾಚರಣೆ'ಯಲ್ಲಿ 'ಬಿಡುಗಡೆ' ಮಾಡಲಾಯಿತು ಎಂದು ಸಾಮ್ರಾಜ್ಯಶಾಹಿ ಮಾಧ್ಯಮಗಳು ಭಾರೀ ಸುದ್ದಿ ಮಾಡಿದವು. 'ಬಿಡುಗಡೆ'ಯಾದವರಲ್ಲಿ ಕೊಲಂಬಿಯಾದ ಬಲಪಂಥೀಯ ಮಾಜಿ ಅಧ್ಯಕ್ಷ ಅಭ್ಯರ್ಥಿ ಇಂಗ್ರಿಡ್ ಬೆಟನ್‌ಕೋರ್ಟ ಮತ್ತು ಕೆಲವು ಅಮೆರಿಕನ್ ಭಯೋತ್ಪಾದಕರು ಸೇರಿದ್ದರು.

ಅರ್ಧ-ಫ್ರೆಂಚ್ ಅರ್ಧ- ಕೊಲಂಬಿಯನ್ ಮಾಜಿ ಅಧ್ಯಕ್ಷ ಅಭ್ಯರ್ಥಿ ಇಂಗ್ರಿಡ್ 'ಬಿಡುಗಡೆ'ಯನ್ನು ಪ್ಯಾರಿಸಿನಲ್ಲಿ ಫ್ರಾನ್ಸಿನ 'ಮಣ್ಣಿನ ಮಗಳ' ಸ್ವಾಗತ ಮತ್ತು ಪತ್ರಿಕಾ ಸಮ್ಮೇಳನಗಳ ಮೂಲಕ ವಿಜೃಂಭಿಸಲಾಯಿತು. ಈ 'ವಿಶಿಷ್ಟ ಕಾರ್ಯಾಚರಣೆ' 'ಚಾರಿತ್ರಿಕ' 'ಅಭೂತಪೂರ್ವ' ಎಂದೆಲ್ಲಾ ಬಣ್ಣಿಸಲಾಯಿತು. ಇದು FARC ಗೆರಿಲ್ಲಾ ಸಂಘಟನೆಯ ಕೊನೆಗಾಲ ಎಂಬರ್ಥದ ಪ್ರಚಾರ ಮಾಡಲಾಯಿತು.

ಆದರೆ 'ಬಿಡುಗಡೆ'ಯಾದ ಉಳಿದವರು 90 ರ ದಶಕದ 'ಕುಖ್ಯಾತ' 'ಕೊಲಂಬಿಯಾ ಪ್ಲಾನ್' ಎಂಬ ಸಿಐಎಯ ಯೋಜನೆಯಲ್ಲಿ ಭಾಗವಹಿಸಿದ ನಾರ್ತರೊಪ್ ಎಂಬ ವಿಮಾನಸಂಸ್ಥೆಯ ಬಾಡಿಗೆ ಸೈನಿಕ ಸಿಬ್ಬಂದಿ ಎಂಬುದು ಪ್ರಚಾರವಾಗಲಿಲ್ಲ. ಇವರು ಆ ಯೋಜನೆಯ ಭಾಗವಾಗಿ ಗೆರಿಲ್ಲಾ-ನಿಯಂತ್ರಿತ ಪ್ರದೇಶದಲ್ಲಿ ಕಾನೂನು ಬಾಹಿರವಾಗಿ ಅಮೆರಿಕನ್ ಮಿಲಿಟರಿ ವಿಮಾನ ಬಳಸಿ ಭಯೋತ್ಪಾದಕ ಚಟುವಟಿಕೆಯಲ್ಲಿ ತೊಡಗಿದ್ದಾಗ ಸಿಕ್ಕಿಬಿದ್ದಿದ್ದರು. 'ಕೊಲಂಬಿಯಾ ಪ್ಲಾನ್' ಅಮ್ನೆಸ್ಟಿ ಇಂಟರ್ ನ್ಯಾಶನಲ್ ಮತ್ತು ವಿಶ್ವಸಂಸ್ಥೆ ಎರಡರಿಂದಲೂ 'ಮಾನವ ಹಕ್ಕುಗಳ ಮೇಲೆ ದಾಳಿ'ಗೆ ಪ್ರಬಲ ಟೀಕೆಗೆ ಒಳಗಾಗಿತ್ತು.

ಆದರೆ ಇತ್ತೀಚೆಗೆ ಕೊಲಂಬಿಯಾದ ಈ 'ವಿಶಿಷ್ಟ ಕಾರ್ಯಾಚರಣೆ' ಬಗೆಗೂ ಸಂಶಯ ಮೂಡಲಾರಂಭಿಸಿದೆ. ಜೂನ್ ಮೊದಲ ವಾರದಲ್ಲೇ ಆಳುವ ಪಕ್ಷದ ಸೆನೆಟರ್ ಒಬ್ಬ ಸರ್ಕಾರ ಮತ್ತು FARC ನಡುವೆ ಕೆಲವು ಪ್ರಮುಖ ನಾಗರಿಕ ಮತ್ತು ವಿದೇಶಿ ಒತ್ತೆಯಾಳುಗಳ ಬಿಡುಗಡೆಗೆ ಮಾತುಕತೆ ನಡೆದಿದೆ. ಅಗತ್ಯ ಬಿದ್ದರೆ ಇವರ ಬಿಡುಗಡೆಗೆ 2 ಕೋಟಿ ಡಾಲರುಗಳ ಭಾರೀ ಮೊತ್ತದ ಹಾ ಸಹ ಕೊಡಲು ಸರ್ಕಾರ ತಯಾರಿದೆ ಎಂದೂ ವರದಿಯಾಗಿತ್ತು. ಅದೇ ನಡೆದಿದೆ. 'ವಿಶಿಷ್ಟ ಕಾರ್ಯಾಚರಣೆ' ಬರಿಯ ನಾಟಕ ಎಂಬ ಸುದ್ದಿ ದಟ್ಟವಾಗಿ ಹರಡಿದೆ. ಅದು ಅಷ್ಟು ಸುಲಭವಿದ್ದರೆ ಹಲವು ವರ್ಷಗಳ ಕಾಲ ಯಾಕೆ ಅದನ್ನು ಮಾಡಿಲ್ಲ ಎಂದು ವೀಕ್ಷಕರು ಪ್ರಶ್ನಿಸಿದ್ದಾರೆ. ಆ ನಡುವೆ ವೆನೆಜುವೆಲಾ ಅಧ್ಯಕ್ಷ ಚವೇಜ್ ಎಲ್ಲಾ ನಾಗರಿಕ ಒತ್ತೆಯಾಳುಗಳ ಬಿಡುಗಡೆಗೆ ಸರ್ಕಾರ ಮತ್ತು ನಡುವೆ ನಡೆಸುತ್ತಿದ್ದ ಮಧ್ಯಸ್ತಿಕೆ ಸಹ ಫಲ ಕೊಡಲಾರಂಭಿಸಿತ್ತು. ಚವೇಜ್ ಸಫಲ ಮಧ್ಯಸ್ತಿಕೆಯ ಮಹತ್ವವನ್ನು ಸಾರ್ವಜನಿಕ ದೃಷ್ಟಿಯಲ್ಲಿ ಕಡಿಮೆ ಮಾಡುವುದು ಮತ್ತು ಅಮೆರಿಕನ್ ಬಾಡಿಗೆ ಮಿಲಿಟರಿ ಸಿಬ್ಬಂದಿಯನ್ನು 'ಚವೇಜ್ ಮಧ್ಯಸ್ತಿಕೆಯಿಂದ ಸಾಧಿಸಿಸುವ ಅವಮಾನ' ತಪ್ಪಿಸಲು ಸಿಐಎ ಈ 'ವಿಶಿಷ್ಟ ಕಾರ್ಯಾಚರಣೆ' ಮಾಡಿದೆ ಎನ್ನಲಾಗಿದೆ.

ಕೊಲಂಬಿಯಾದ ಸರ್ಕಾರ ಬಹುಶಃ ಅಮೆರಿಕನ್ ಸಾಮ್ರಾಜ್ಯಶಾಹಿ-ಪರವಾಗಿ ಉಳಿದಿರುವ ಒಂದೇ ಲ್ಯಾಟಿನ್ ಅಮೆರಿಕಾ ಖಂಡದ ಸರ್ಕಾರ. ಆ ದೇಶ ಬಡವರ ಬರ್ಬರ ಶೋಷಣೆ, ಮಿಲಿಟರಿ ಸರ್ವಾಧಿಕಾರ, ಮಾನವ ಹಕ್ಕುಗಳ ದಮನ, ಸಾಮ್ರಾಜ್ಯಶಾಹಿ ನೇರ ದಬ್ಬಾಳಿಕೆಗಳಿಗೆ ಕುಖ್ಯಾತವಾದ ದೇಶ. ಸ್ವಾಭಾವಿಕವಾಗಿಯೇ ಬಡವರ ಹೋರಾಟ ಸಶಸ್ತ್ರ ಗೆರಿಲ್ಲಾ ಹಾದಿ ಹಿಡಿಯಬೇಕಾಗಿದೆ ಎಂದು ಗೆರಿಲ್ಲಾ ಸಂಘಟನೆ ಆರು ದಶಕಗಳಿಂದ ಹೋರಾಟ ನಡೆಸುತ್ತಿದೆ. ಕೊಲಂಬಿಯಾ ಸರ್ಕಾರ ಮತ್ತು ಸಿಐಎ ತರಬೇತಿ, ಶಸ್ತ್ರಾಸ್ತ್ರ ಮತ್ತು ಧನಸಹಾಯ ನೀಡಿದ ಹಲವು 'ಕೊಲೆಗಡುಕ ದಳ'ಗಳು ಗೆರಿಲ್ಲಾಗಳ ಮತ್ತು ಅಮಾಯಕ ಜನರ ಬೇಟೆಯಲ್ಲಿ ಈಗಲೂ ತೊಡಗಿವೆ. ಇದನ್ನು ಮರೆಮಾಚಿ ಅಂತರ್ರಾಷ್ಟ್ರೀಯ ಅಭಿಪ್ರಾಯ ತಿರುಚುವುದೂ ಈ 'ವಿಶಿಷ್ಟ ಕಾರ್ಯಾಚರಣೆ' ಯ ಉದ್ದೇಶ.

ಜಿಂಬಾಬ್ವೆ ದಿಗ್ಬಂಧನ ವಿರುದ್ಧ ರಶ್ಯಾ-ಚೀನಾ ವಿಟೋ

ಜಿಂಬಾಬ್ವೆಯಲ್ಲಿ ಮುಗಾಬೆ ಅಧ್ಯಕ್ಷರಾಗಿ ಪುನರಾಯ್ಕೆ ಆಗಿದ್ದಾರೆ. ಆದರೆ ಅವರ ಮತ್ತು ವಿರೋಧ ಪಕ್ಷಗಳ ನಡುವೆ ವಿವಾದ ಮತ್ತು ಬಿಕ್ಕಟ್ಟು ಮುಂದುವರೆದಿದೆ. ಹಾಗೆಯೇ ಈ ರಾಜಕೀಯದ ಅಲ್ಲೋಲ ಕಲ್ಲೋಲದ ಸಂದರ್ಭದಲ್ಲಿ ಅಮೆರಿಕ ಸರ್ಕಾರ ನೇರ ಹಸ್ತಕ್ಷೇಪ ಮಾಡುವ ತನ್ನ 'ಏಕಮಾತ್ರ ಸೂಪರಪವರ್ ಹಕ್ಕು' ಸಾಧಿಸಲು ಮುಂದಾಯಿತು. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಮುಂದೆ ಜಿಂಬಾಬ್ವೆ ಮೇಲೆ ದಿಗ್ಬಂಧನ ಹಾಕುವ ನಿರ್ಣಯ ಮಂಡಿಸಿತು. ಅಮೆರಿಕ ಸರ್ಕಾರ ಇದು ಮಂಜೂರು ಆಗುತ್ತದೆ ಎಂದು ಅಂದುಕೊಂಡಿತ್ತು.

ಆದರೆ ಇರಾಕ್ ಅತಿಕ್ರಮಣ ಮತ್ತು ಇರಾನ್ ಬೆದರಿಕೆ ನಂತರ ಜಗತ್ತು ಬಹಳ ಬದಲಾಗಿದೆ. ಅದರ 'ಏಕಮಾತ್ರ ಸೂಪರಪವರ್ ಹಕ್ಕು'ಗಳಿಗೆ ಹಲವು ಸವಾಲುಗಳು ಹುಟ್ಟಿಕೊಂಡಿವೆ ಎಂದು ಇನ್ನೂ ಅದಕ್ಕೆ ಅರ್ಥವಾಗಿಲ್ಲ. 15 ಸದಸ್ಯರ ಭದ್ರತಾ ಸಮಿತಿಯಲ್ಲಿ 9 ಸದಸ್ಯರ ಅನುಮೋದನೆಯ ಬಹುಮತವನ್ನು ಅದರ ಮಾಮೂಲಿ ಒತ್ತಡ-ಆಮಿಷಗಳ ತಂತ್ರದಿಂದ ಸಿಕ್ಕಿತು. ಆದರೆ ರಷ್ಯಾ ಮತ್ತು ಚೀನಾ ಈ ನಿರ್ಣಯದ ವಿರುದ್ಧ ವಿಟೋ ಚಲಾಯಿಸಿವೆ. ಈ ನಿರ್ಣಯ ಸಾರ್ವಭೌಮ ದೇಶವೊಂದರ ಆಂತರಿಕ ರಾಜಕೀಯದಲ್ಲಿ ಪಕ್ಷಪಾತದ ಮಧ್ಯಪ್ರವೇಶ ಮಾಡುವ ಕ್ರಮ ಎಂದಿವೆ. ಆ ಮೂಲಕ ಅಮೆರಿಕದ 'ಏಕಮಾತ್ರ ಸೂಪರ್ ಪವರ್ ಹಕ್ಕು'ಗಳಿಗೆ ನೇರ ಸವಾಲು ಹಾಕಿವೆ. ಇದು ಇತ್ತೀಚಿನ ದಿನಗಳಲ್ಲಿ ಅತ್ಯಂತ ಮಹತ್ವದ ಅಂತರ್ರಾಷ್ಟ್ರೀಯ ಬೆಳವಣಿಗೆ.

ಇಸ್ರೇಲ್ - ಹಿಜ್‌ಬುಲ್ಲಾ ಖೈದಿ ವಿನಿಮಯ

ಹಿಜ್‌ಬೊಲ್ಲಾ ಕಳೆದ ಎರಡು ವಾರಗಳಲ್ಲಿ ಎರಡು ಪ್ರಮುಖ ರಾಜಕೀಯ ವಿಜಯ ಸಾಧಿಸಿದೆ. ಅದು ಮನಃ ಲೆಬನಾನ್ ಸರ್ಕಾರವನ್ನು ಪ್ರವೇಶಿಸಿದೆ. ಇಸ್ರೇಲ್ ಜತೆ ಪ್ರಮುಖ ಕೈದಿಗಳ ವಿನಿಮಯ ಮಾಡಿಕೊಂಡಿದೆ. ಹಿಜ್‌ಬೊಲ್ಲಾ ಲೆಬನಾನ್ ನಲ್ಲಿ ಇಂದು ಪ್ರಮುಖ ರಾಜಕೀಯ-ಮಿಲಿಟರಿ ಸಂಘಟನೆ. ಶಿಯಾ ಮುಸ್ಲಿಮರ ಪ್ರಮುಖ ದನಿಯಾಗಿದೆ. ಎರಡು ವರ್ಷಗಳ ಹಿಂದೆ ಇಸ್ರೇಲ್ ವಿರುದ್ಧ ಯುದ್ಧದಲ್ಲಿ ಅದರ ದಾಳಿಯನ್ನು ಹಿಮ್ಮೆಟ್ಟಿಸಿದ ಹೆಗ್ಗಳಿಕೆ ಅದರದು. ಹಿಜ್‌ಬೊಲ್ಲಾ ಮಿಲಿಟರಿ ವಿಭಾಗ ಲೆಬನಾನ್ ಸೈನ್ಯಕ್ಕಿಂತಲೂ ಪ್ರಬಲವಾದ್ದು.

ಸಂಕೀರ್ಣ ಮಾತುಕತೆ-ಚೌಕಾಶಿಗಳ ನಂತರ ಎರಡೂ ಕಡೆಯ ಜೀವಂತ ಕೈದಿಗಳ ಮತ್ತು ಸತ್ತ ಹೋರಾಟಗಾರರ ಶವಗಳ ವಿನಿಮಯ ನಡೆಯಿತು. ಬಿಡುಗಡೆ ಪಡೆದ ಕೈದಿಗಳಲ್ಲಿ 30 ವರ್ಷಗಳಿಂದ ಇಸ್ರೇಲಿ ಜೈಲಿನಲ್ಲಿ ಕೊಳೆಯುತ್ತಿದ್ದ ಸಮಿರ್ ಕಂತಾರ್ ಮತ್ತು ನಾಲ್ವರು ಹೋರಾಟಗಾರರು ಸೇರಿದ್ದಾರೆ. ಹಲವಾರು ವರ್ಷಗಳಿಂದ ಕೈದಿಯಾಗಿದ್ದ ನಾಲ್ವರು ಇರಾನಿಯನ್ ರಾಯಭಾರ ಸಿಬ್ಬಂದಿಗಳೂ ಇದರಲ್ಲಿ ಸೇರಿದ್ದಾರೆ. ಸುಮಾರು ಇನ್ನೂರರಷ್ಟು ಲೆಬನಾನ್, ಪ್ಯಾಲೆಸ್ಟೈನ್ ಮತ್ತು ಅರಬ್ ಹೋರಾಟಗಾರರ ಶವಗಳು ವಿನಿಮಯದಲ್ಲಿ ಸೇರಿತ್ತು. ಕೈದಿಗಳ ವಿನಿಮಯದ ಮಾತುಕತೆ ವಿಶ್ವಸಂಸ್ಥೆಯ ಮಧ್ಯಸ್ತಿಕೆಯಲ್ಲಿ ನಡೆಯಿತು.

ಹಿಜ್‌ಬೊಲ್ಲಾ ಮಂತ್ರಿಮಂಡಲದಲ್ಲಿ ಒಂದೇ ಸ್ಥಾನ ತೆಗೆದುಕೊಂಡಿದ್ದರೂ ಪ್ರಮುಖ ವಿಷಯಗಳ ಬಗ್ಗೆ ವಿಟೋ ಹೊಂದಿದೆ. ಮಂತ್ರಿಮಂಡಲದಲ್ಲಿ ಅದರ ಮಿತ್ರಪಕ್ಷಗಳು 10 ಸ್ಥಾನ ಹೊಂದಿವೆ. ಎಲ್ಲಾ ಪಕ್ಷಗಳ ಸಭೆ ತೆಗೆದುಕೊಂಡ ನಿರ್ಧಾರದ ಪ್ರಕಾರ ಮಂತ್ರಿಮಂಡಲದ ಮೂರನೇ ಎರಡರಷ್ಟು ಸದಸ್ಯರ ಒಪ್ಪಿಗೆ ಇಲ್ಲದೆ ಯಾವುದೇ ವಿಷಯದ ಬಗ್ಗೆ ಪ್ರಮುಖ ನಿರ್ಧಾರ ತೆಗೆದುಕೊಳ್ಳುವಂತಿಲ್ಲ. 2009 ರ ಚುನಾವಣೆಗಳ ಮೊದಲಿನ ಚುನಾವಣಾ ಸುಧಾರಣೆಗಳೂ ಇದರಲ್ಲಿ ಸೇರಿದೆ.

ಪ್ಯಾಲೆಸ್ಟೈನ್ ಹಾಮಾಸ್ ನಾಯಕ ಕೈದಿಗಳ ವಿನಿಮಯವನ್ನು ಸ್ವಾಗತಿಸಿದ್ದು, ಪ್ಯಾಲೆಸ್ಟೈನ್ ಸಂದರ್ಭದಲ್ಲೂ ಇದೇ ರೀತಿಯ ವಿನಿಮಯದ ಮಾತುಕತೆ ನಡೆಯಬೇಕೆಂದು ಕರೆ ಕೊಟ್ಟಿದೆ.

ಅಂಧಕೂಪದತ್ತ ಉನ್ನತ ಶಿಕ್ಷಣ....

ಪುಟ 15 ರಿಂದ

ಉಪಲಬ್ಧವಿರುವ ಗ್ರಂಥಗಳಲ್ಲಿ ಅದು ಇಲ್ಲದಿದ್ದರೂ ತನಗೆ ಅತೀಂದ್ರಿಯ ಜ್ಞಾನದಿಂದ ತಿಳಿದುಬಂತೆಂದು ಉತ್ತರಿಸಿದರು. ಇದನ್ನು ಕೆ.ಎಸ್.ಶುಕ್ಲ ತಮ್ಮ ಗ್ರಂಥದಲ್ಲಿ ವಿವರವಾಗಿ ಬರೆದಿದ್ದಾರೆ. ನಿಜವಾಗಿಯೂ ವೇದಗಣಿತವೆಂದರೆ ಅಥರ್ವವೇದದ ಪರಿಶಿಷ್ಟವಲ್ಲ. ಬದಲಿಗೆ ಭಾರತೀಕೃಷ್ಣ ಸ್ವಾಮೀಜಿಯವರ ಸ್ವಯಂ ಪರಿಶಿಷ್ಟ.

ಆ ಗ್ರಂಥದಲ್ಲಿರುವ ಸೂತ್ರಗಳೂ ಕೂಡ ಸ್ವರಚಿತ ಮೋಸದ ಸೂತ್ರಗಳು. ಉದಾ : "ಏಕಾಧಿಕೇನ ಪೂರ್ವೇಣ" (ಅನು : by one more than the previous one) ಇದನ್ನು ದಶಮಾಂಶಗಳಾದ 1/9, 1/29, 1/39 (decimal expansion of fraction) ಕಂಡುಹಿಡಿಯಲು ಉಪಯೋಗಿಸಲಾಗುತ್ತದೆ ಎನ್ನಲಾಗಿದೆ. ಆದರೆ ಇದೇ ಸೂತ್ರವನ್ನು 25, 35, 45 ಇವುಗಳ ವರ್ಗಗಳನ್ನು ಕಂಡುಹಿಡಿಯಲೂ ಉಪಯೋಗಿಸಲಾಗುತ್ತದೆ. ಅಂದರೆ, ಸೂತ್ರ ಏನೂ ಹೇಳುವುದಿಲ್ಲ. ಆದರೆ ಸ್ವಾಮೀಜಿ ಕೊಡುವ ಅದರ ವಿವರಣೆ ಸ್ವಾಮೀಜಿಯವರ ಆಧುನಿಕ ಗಣಿತದ ಪ್ರಾಥಮಿಕ ಜ್ಞಾನವನ್ನಷ್ಟೇ ತಿಳಿಸುತ್ತದೆ! ಈ ಸೂತ್ರಗಳನ್ನು ಅಧ್ಯಯನ ಮಾಡುವುದು ವಿದ್ಯಾರ್ಥಿಗಳಿಗಂತೂ ಅನಗತ್ಯ wasteful effort. ಗಣಿತಕ್ಕೆ ಬೇಕಾದ ಯಾವ ಅಗತ್ಯದ ಹೆಜ್ಜೆ(step)ಗಳನ್ನು ಇದು ಹೇಳುವುದಿಲ್ಲ.

ವೇದಗಣಿತದ ಮಹಾತ್ಮೆಯನ್ನು ಸಾರಲು ಎಂತೆಂಥಹ ಸುಳ್ಳುಗಳನ್ನು ಹೇಳಲಾಗುತ್ತಿದೆಯೆಂದರೆ ವೇದಗಳಲ್ಲಿ trignometry ಗೆ ತ್ರಿಕೋಣಮಿತಿ ಎಂತಲೂGeometry ಗೆ ಜ್ಯಾಮಿತಿ ಎಂತಲೂ ಶಬ್ದಗಳಿದ್ದುವು ಅಲ್ಲದೆ ವೇದಗಳಿಂದಲೇ ಈ ಶಬ್ದಗಳು ಪ್ರಪಂಚದಾದ್ಯಂತ ಬಳಕೆಯಾದವು ಎಂದೂ ಯು.ಜಿ.ಸಿ ಪಂಡಿತರು ಉದ್ಘೋಷಿಸಿದರು. ಆದರೆ, ಈ ಶಬ್ದಗಳಿಗೆ ನೂರು ವರ್ಷಗಳ ಇತಿಹಾಸ ಕೂಡಾ ಇಲ್ಲ. ಕಾಶಿಯ ಸಂಸ್ಕೃತ ಕಾಲೇಜಿನ ಗಣಿತಜ್ಯೋತಿಷ್ಯ ಪ್ರಾಧ್ಯಾಪಕರಾದ ಪ.ಬಾಪೂದೇವ ಶಾಸ್ತ್ರಿ ಮತ್ತು ಸುಧಾಕರ ದ್ವಿವೇದಿಯವರು ಕೆಲವು ದಶಕಗಳ ಹಿಂದೆ trignometry ಮತ್ತು Geometry ಶಬ್ದಗಳಿಗೆ ತ್ರಿಕೋಣಮಿತಿ ಮತ್ತು ಜ್ಯಾಮಿತಿ ಎಂದು ಅನುವಾದಿಸಿದ್ದರು. ಹಿಂದೆ ಭಾರತದಲ್ಲಿ 'ಜ್ಯಾಮಿತಿ'ಯ ಅರ್ಥದಲ್ಲಿ ಜ್ಯಾ ಗಣಿತ ಎಂಬ ಶಬ್ದವೂ 'ತ್ರಿಕೋಣಮಿತಿ'ಯ ಅರ್ಥದಲ್ಲಿ 'ಕ್ಷೇತ್ರಮಿತಿ' ಎಂಬ ಶಬ್ದವೂ ಪ್ರಯೋಗದಲ್ಲಿತ್ತು.

ಅಂತೆಯೇ 'ರೇಖಾಗಣಿತ' ಎಂಬ ಶಬ್ದವೂ ಇವರು ಹೇಳುವ ವೇದಗಳದ್ದಲ್ಲ. ಬದಲಿಗೆ, ಭಾರತದಲ್ಲಿ ಈ ಶಬ್ದವು ಮೊತ್ತಮೊದಲ ಬಾರಿಗೆ ಸವಾಜಿ ಜಯಸಿಂಹ (1686 ರಿಂದ 1743) ನೆಂಬ ರಾಜನ ದರ್ಬಾರಿನಲ್ಲಿದ್ದ ಜೋತಿಷಿ ಪಂಡಿತ ಜಗನ್ನಾಥ ರೂಪಿಸಿದ್ದು, ಆತ ಯೂಕ್ಲಿಡ್‌ನ ಜ್ಯಾಮಿತಿಯ ಅರಬೀ ಅನುದಾನವನ್ನು ಸಂಸ್ಕೃತದಲ್ಲಿ ಭಾಷಾಂತರ ಮಾಡುವಾಗ ಈ ಶಬ್ದವನ್ನು ಪ್ರಯೋಗಿಸಿದ್ದ, ಅದಕ್ಕೂ ಮುಂಚೆ ಈ ಶಬ್ದದ ಅಸ್ತಿತ್ವವೇ ಭಾರತದಲ್ಲಿರಲಿಲ್ಲ. ಆದರೆ ವೇದಗಣಿತದ ಪ್ರಕಾರ ಆ ಶಬ್ದ ವೇದದಲ್ಲೇ ಇದೆ.

ನೋಟ

ಅಂಧಕೂಪದತ್ತ ಉನ್ನತ ಶಿಕ್ಷಣ



ಡಾ. ಜಿ. ಭಾಸ್ಕರ ಮಯ್ಯ

ಉನ್ನತ ಶಿಕ್ಷಣದ ಪಠ್ಯಪುಸ್ತಕಗಳಲ್ಲಿ 'ಭಾರತೀಯ' ಸಂಸ್ಕೃತಿಯನ್ನು ಸೇರಿಸಲು ಅಗತ್ಯವಿರುವ ಎಲ್ಲಾ ಪ್ರಯತ್ನಗಳನ್ನು ರಾಜ್ಯ ಸರಕಾರವು ಕೈಗೊಳ್ಳಲಿದೆಯೆಂದು ಉನ್ನತ (ಅವನತ !) ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಹೇಳಿರುವುದನ್ನು ಗಮನಿಸಿದಾಗ ಇವರು ಹೇಳುವ ಸಂಸ್ಕೃತಿ ಯಾವುದೆಂದು ತಿಳಿಯಲು ಇವರ ಕುಟುಂಬದ ಎನ್‌ಡಿಎ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಶಿಕ್ಷಣ ಕ್ಷೇತ್ರದಲ್ಲಿ ಅವರು ಮಾಡಿದ ಸರಣಿ ಅತ್ಯಾಚಾರ ಪ್ರಸಂಗಗಳಲ್ಲಿ ನೆನಪಿಸಿಕೊಳ್ಳುವ ಸಲುವಾಗಿ ಪ್ರಸ್ತುತ ಲೇಖನ ಸರಣಿ.

ಅಂಧಕೂಪ ಎಂತಹ ದು:ಸ್ವಪ್ನವನ್ನು ಸೃಷ್ಟಿಸುತ್ತ ೆಂದರೆ ಅದರಲ್ಲಿ ಬಿದ್ದವರಾರೂ ಎಂದೆಂದೂ ಮೇಲೇಳಲಾರರು. ಪುರಾಣ ಕಲ್ಪನೆಯ ಪ್ರಕಾರ ಂತಹ ಅಂಧಕೂಪದಲ್ಲಿ ಭೂತ ಪಿಶಾಚಿಗಳು, ಾರಿತಪ್ಪಿ ಅಂಡಲೆಯುವ ಬ್ರಹ್ಮ ರಾಕ್ಷಸರು ನಿವಾಸ ಮಾಡುತ್ತಾರೆ. ಇಂದು ಭಾರತ ಸರಕಾರವು ಉನ್ನತ ಕ್ಷಣದ ಈ ತನಕದ ಧ್ಯೇಯೋದ್ದೇಶ, ರಿಕಲ್ಪನೆಗಳನ್ನು ಇಂತಹ ಅಂಧಕೂಪದಲ್ಲಿ ತಳ್ಳುತ್ತಿದೆ ಂದು ಕವಿತೆಯ ಭಾಷೆಯಲ್ಲಿ ಹೇಳಿದರೆ ಅದು ಸ್ತುನಿಷ್ಟ ಸತ್ಯವನ್ನು ಸಾಂಕೇತಿಕ ಭಾಷೆಯಲ್ಲಿ ೇಳಿದಂತಾಗುತ್ತದೆಯೆಂದು ನಾನು ಭಾವಿಸುತ್ತೇನೆ.

ಭಾರತದಲ್ಲಿ ಶಿಕ್ಷಣವು ಪ್ರಾಥಮಿಕವಿರಲಿ, ನ್ನತವಿರಲಿ ಅದು ಸ್ವಾತಂತ್ರ್ಯಾನಂತರದ ರ್ಷಗಳಲ್ಲಿ ಕುಂಟುತ್ತಾ ಕುಂಟುತ್ತಾ ತನ್ನನ್ನು ತಾನು ವರಿಸಿಕೊಳ್ಳುತ್ತಾ ಒಂದು ಜನತಾಂತ್ರಿಕ ರೂಪವನ್ನು ಹೆಚ್ಚೂ ಕಡಿಮೆ ಪಡೆಯುವ ಂತದಲ್ಲಿತ್ತು. ಇನ್ನೊಂದು ಬಗೆಯಲ್ಲಿ ೇಳುವುದಾದರೆ ಅದು ಸರಳ, ಮುಕ್ತ ಮತ್ತು ಕ್ಯೂಲರ್ ಸ್ವರೂಪವನ್ನು ಪಡೆಯುವುದರತ್ತ ಗುತ್ತಿತ್ತು. ಆದರೆ ಅದರಲ್ಲಿ ವಸಾಹತುಶಾಹಿ ತಃಸತ್ವಗಳೂ ಇದ್ದುವು. ಸಾಂಸ್ಕೃತಿಕ ಪುನರುತ್ಥಾನದ ಾಹವೂ ಅದರಲ್ಲಿತ್ತು. ಹಾಗೆಯೇ ಅದರಲ್ಲೊಂದು ದ್ಧಿಕ, ವೈಚಾರಿಕ, ತಾರ್ಕಿಕ ತಿರುಳೂ ಇತ್ತು. ಈ ಹದ 'ಶಿಕ್ಷಣ, ಜ್ಞಾನ ವಿಜ್ಞಾನ'ವೂ ಮುಖ್ಯವಾಗಿ ದೇಶದ ಅನುಕೂಲಸ್ಥ ವರ್ಗ(ಇಲೈಟ್ ಕ್ಲಾಸ)ವನ್ನು ದ್ಧರಿಸುವ ಲಕ್ಷ್ಯವನ್ನು ಹೊಂದಿದ್ದರೂ, ಅದು ಶದ ಸಾಮಾಜಿಕ, ಸಾಂಸ್ಕೃತಿಕ ಅಂತ:ಸತ್ವದ ಿಧ್ಯತೆಯ ಹೊಳಪನ್ನು ಕಳೆದುಕೊಂಡಿರಲಿಲ್ಲ.

ಆದರೆ ಇತ್ತೀಚಿನ ಐದು ವರ್ಷಗಳಲ್ಲಿ ಅದು ಕ್ಕಿದ್ದಂತೆಯೇ ಒಂದು ಗುಣಾತ್ಮಕ ಪರಿವರ್ತನೆಗೆ ಗ್ರಾಗುತ್ತಾ ಬಂದಿದೆ. ಈ ಪರಿವರ್ತನೆಯೆಂಬುದು ರತದ ಪ್ರಭುತ್ವ ಡೈನಮೈಟ್ ಇಟ್ಟು ಆಸ್ಫೋಟಿಸಿ ದಂತಹ ಪರಿವರ್ತನೆ. ಈ ಆಸ್ಫೋಟನೆಯ ದ್ಧಾಂತಿಕ ಬೇರುಗಳಿರುವುದು ವಿದೇಶಿ ಮೂಲದ ೇವಾದಿ, ಫ್ಯಾಸಿಸ್ಟ್ ವಾದಿ ಅಂಧಕೂಪಗಳಲ್ಲಿ. ಚಿಗುರೊಡೆದ ಆ ಬಹು ಆಯಾಮೀ ವಿಷವೃಕ್ಷ ಮ ದೇಶದಾದ್ಯಂತ ತನ್ನ ಕಬಂಧಬಾಹುರೂಪಿ ೆಗಳನ್ನು ಚಾಚಿದೆ. ಅದರಲ್ಲಿಂದು ನಾನಾ ಬಗೆಯ ಫಲಗಳಿವೆ. ಅವುಗಳಲ್ಲಿ ಒಂದು ಬಗೆಯ ಫಲವೇ ' ಉನ್ನತ ಶಿಕ್ಷಣ, ಜ್ಞಾನ ವಿಜ್ಞಾನ'ದ ಷ ಹೈಬ್ರಿಡ್ ತಳಿ.

ಹೀಗೆ ಅಂಧಕೂಪಕ್ಕೆ ಬಿದ್ದ 'ಉನ್ನತ ಶಿಕ್ಷಣ ಜ್ಞಾನ, ಜ್ಞಾನ'ವನ್ನು ಮುಖ್ಯವಾಗಿ ಐದು ಸ್ವರೂಪಗಳಲ್ಲಿ ಕೆಳಗಿನಂತೆ ವಿಭಾಗೀರಿಸಬಹುದು.

1. ವೇದ ಗಣಿತ
2. ಜ್ಯೋತಿರ್ವಿಜ್ಞಾನ ಅಥವಾ ವೇದ ಜ್ಯೋತಿಷ್ಯ
3. ಇತಿಹಾಸದ ವಿಕೃತ ಪರಿಕಲ್ಪನೆ
4. ಪುರಾತತ್ವ ಇಲಾಖೆಯ ಸಮಾಧಿ
5. ದೇಶದ, ಹೊರದೇಶದ ಯಾವುದೇ ಶೀಲ ವಿಚಾರವಿರಲಿ ಅದರ ಮೇಲೆ ಪ್ರತಿಬಂಧ.

ಈಗ ಒಂದೊಂದಾಗಿ ಗಮನಿಸುವ

1. ವೇದ ಗಣಿತ : (vedic mathematics)

ಗಣಿತಶಾಸ್ತ್ರ ಕ್ಕೆ ಭಾರತದ ಕೊಡುಗೆ ಮಧ್ಯಯುಗದ ಮುಂಚಿನ ಕಾಲಘಟ್ಟದಲ್ಲಿ ಅಪಾರವಾಗಿತ್ತು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಸೊನ್ನೆಯ ಪರಿಕಲ್ಪನೆ ಭಾರತದ ಅಮೂಲ್ಯ ಕೊಡುಗೆಯೆಂದು ವಿಶ್ವದಾದ್ಯಂತ ಪಂಡಿತರು ಶ್ಲಾಘಿಸಿರುತ್ತಾರೆ. ಅದು ಭಾರತದ ಮೌಲಿಕ ಆವಿಷ್ಕಾರ. ಆದರೆ ಇದು ಯಾವುದೇ ವೇದದಲ್ಲಾಗಲೀ, ವೇದಾಂಗದಲ್ಲಾಗಲೀ ಇಲ್ಲವೇ ಇಲ್ಲ. 'ಋಗ್ವೇದದ 36 ಶ್ಲೋಕಗಳು, ಯಜುರ್ವೇದದ 44 ಶ್ಲೋಕಗಳು ಹಗಲು ರಾತ್ರಿಗಳ ಅವಧಿ, ಶುಕ್ಲಪಕ್ಷ ಕೃಷ್ಣಪಕ್ಷಗಳು, ಚಂದ್ರಮಾನ ಸೌರಮಾನ ವರ್ಷಗಳು, ತಿಂಗಳುಗಳು, ನಕ್ಷತ್ರಗಳು, ಋತುಗಳು, ತಿಥಿಗಳು' ಇತ್ಯಾದಿ ಸಣ್ಣ ಸರಳ ಲೆಕ್ಕಾಚಾರಗಳನ್ನು ಬಿಟ್ಟರೆ ಮತ್ತಾವುದೂ ಗಣಿತದ ಹತ್ತಿರಕ್ಕೂ ಬರುವುದಿಲ್ಲ. ಸೊನ್ನೆಯ ಸಾಹಿತ್ಯಿಕ ಉಲ್ಲೇಖಗಳು ಕ್ರಿ.ಶ.ದ ಆರಂಭದ ಕಾಲದಲ್ಲಿ ದೊರೆಯುತ್ತದಲ್ಲದೆ ಅದರ ಮೊದಲ ಶಾಸನೋಲ್ಲೇಖ ದೊರಕುವುದು ಕ್ರಿ.ಶ. 594ರಲ್ಲಿ. ಆದಾಗ್ಯೂ ಇದನ್ನು ಕಂಡುಹಿಡಿದ ಪಂಡಿತನಾರು? ಬ್ರಾಹ್ಮಣನೊ, ಬೌದ್ಧನೊ, ಜೈನನೊ ಎಂಬುದು ಸ್ಪಷ್ಟವಿಲ್ಲ. ಸಂಶೋಧಕರ ಅನುಮಾನದ ಪ್ರಕಾರ ಕ್ರಿ.ಸ.2ನೇಯ ಶತಮಾನದಲ್ಲಿ ಜೀವಿಸಿದ್ದ, ಶೂನ್ಯವಾದದ ಪ್ರವರ್ತಕನಾದ ನಾಗಾರ್ಜುನ ಈ ಶೂನ್ಯದ ಕರ್ತೃ. ಭಾರತೀಯ ಗಣಿತಕ್ಕೆ ಜೈನ ಮುನಿಗಳ ಕೊಡುಗೆಯೂ ಅಪಾರ.

ಪ್ರಾಚೀನ ಗಣಿತವು ನಮಗೆ ದೊರಕುವುದು ವೇದಗಳಲ್ಲಲ್ಲ. ಬದಲಿಗೆ ಆರು ವೇದಾಂಗಗಳಲ್ಲಿ ಒಂದಾದ ಕಲ್ಪಸೂತ್ರಗಳಲ್ಲಿ ಬರುವ ಶ್ರೌತಸೂತ್ರಗಳ ಪರಿಶಿಷ್ಟ ಭಾಗವಾದ ಶುಲ್ವ ಸೂತ್ರಗಳಲ್ಲಿ. ಇದರ ಕಾಲ ಹೆಚ್ಚೆಂದರೆ ಕ್ರಿ.ಪೂ. 5ನೆಯ ಶತಮಾನವಿರಬಹುದು. ಮೊದಲೇ ಹೇಳಿದಂತೆ ಸೊನ್ನೆಯನ್ನು ಗಣಿತದಲ್ಲಿ ಉಪಯೋಗಿಸಲು ಕಡಿಮೆಯೆಂದರೆ ಮತ್ತೆ ಆರನೂರು ಏಳನೂರು ವರ್ಷಗಳು ಬೇಕಾಯ್ತು!

ಶುಲ್ವಸೂತ್ರಗಳಲ್ಲಿ ಇದ್ದುದಾದರೂ ಏನು? ಕೆಲವೊಂದು ನಿಯಮಗಳು. ಕ್ರಿ.ಪೂ 3ನೆಯ ಶತಮಾನದ ಯೂಕ್ಲಿಡ್‌ನ ಗಣಿತದ ಜ್ಯಾಮಿತಿಯ ತಾರ್ಕಿಕ ಉಪಪತ್ತಿಗಳಾವುವೂ ಅದರಲ್ಲಿಲ್ಲ. ಆದರೂ ಅದಕ್ಕೆ ಅತ್ಯಂತ ಮಹತ್ವವಿದೆ. ಏಕೆಂದರೆ ಅದು ಭಾರತೀಯ ಗಣಿತದ ಪ್ರಥಮ ಕೃತಿಯೆನ್ನಬಹುದು. ಅದರ ಒಂದು ಉದಾಹರಣೆಯನ್ನು ಕೊಡುವುದಾದರೆ

'ಅಪಿ ವಾ ಪಂಚದಶಭಾಗಾನ್ ಕೃತ್ವಾ ದ್ವಾವುದ್ಧರೇ ಷಾನಿತ್ಯಾ ಚತುರಸಕರಣೀ' ಅಂದರೆ, "ಅಥವಾ (ವೃತ್ತದ ವ್ಯಾಸದ) ಹದಿನೈದು ಭಾಗ ಮಾಡಿ ಅದರಲ್ಲಿ ಎರಡು ಭಾಗ ಕಳೆಯಿರಿ. ಇದರಿಂದ ಸ್ಥೂಲರೂಪದಲ್ಲಿ ವರ್ಗದ ಭುಜವು ಪ್ರಾಪ್ತವಾಗುವುದು."

ಗಮನಿಸಬೇಕಾದ ವಿಚಾರವೆಂದರೆ ಇಲ್ಲಿ ಕಂಡುಕೊಂಡಿರುವ ನಿಯಮಗಳು ಯಜ್ಞವೇದಿಯ ನಿರ್ಮಾಣದ ಸಲುವಾಗಿ ರಚಿಸಲ್ಪಟ್ಟ ಜ್ಯಾಮಿತಿಯ ನಿಯಮಗಳು.

ಗುಪ್ತರ ಕಾಲದ ಯಾವುದೇ ಶಾಸನಗಳಲ್ಲಿ ಶೂನ್ಯದಿಂದ ಕೂಡಿದ ದಶಮಾಂಶ ಅಂಕ ಪದ್ಧತಿ ಕಂಡುಬರುವುದಿಲ್ಲ. ಭಾರತದ ಪ್ರಖ್ಯಾತ ಪ್ರಥಮ ಗಣಿತಜ್ಞನೆಂದರೆ ದಾಕ್ಷಿಣಾತ್ಯನಾದ ಆರ್ಯಭಟ. ಅವನ ಜನ್ಮ ಕಾಲ ಕ್ರಿ.ಶ.476. ಆತ ವಿಶ್ವದಲ್ಲೇ ಭೂಭ್ರಮಣ ಸಿದ್ಧಾಂತವನ್ನು ಪ್ರತಿಪಾದಿಸಿದ ಮೊದಲ ವ್ಯಕ್ತಿ. ಆತನದ್ದು ನಿಜಕ್ಕೂ ಒಂದು ಮಹತ್ವದ ಕೊಡುಗೆ. ವೇದದಲ್ಲಿ ಭೂಮಿಯನ್ನು 'ಪ್ರತಿಷ್ಠಾ' ಸ್ಥಿರವಾದುದು ಎಂದು ಕರೆದುದರಿಂದ ಪುರೋಹಿತ ವರ್ಗ ಹಾಗೂ ಅದರ ಹಿಡಿತದಲ್ಲಿದ್ದ ನಂತರದ ಎಲ್ಲಾ ಗಣಿತಜ್ಞರು ಆತನ ವಾದವನ್ನು ಕಟುಟೀಕೆಗೆ ಒಳಪಡಿಸಿದರು. 6ನೆಯ ಶತಮಾನದ ವರಾಹಮಿಹಿರ, 7ನೆಯ ಶತಮಾನದ ಬ್ರಹ್ಮ ಗುಪ್ತ ಮೊದಲಾದ ಗಣಿತಜ್ಞರೆಲ್ಲಾ ಆರ್ಯಭಟನನ್ನು ತೀವ್ರ ನಿಂದನೆಗೆ ಒಳಪಡಿಸಿದರು. ಎಲ್ಲಿಯವರೆಗೆಂದರೆ ಮಹಾ ವೇದಾಂತಿ ಅಪ್ಪಯ ದೀಕ್ಷಿತ (1530ರಿಂದ 1600) ಆತನ ಗಣಿತವನ್ನು ಹೇಯವಾದುದೆಂದು ಕರೆದ. ಯುರೋಪಿನಲ್ಲಿ ವಿಜ್ಞಾನಿಗಳಿಗೆ ಯಾವ ದು:ಸ್ಥಿತಿ ಅಂದು ಚರ್ಚುಗಳಿಂದಾಯಿತೊ ಅಂತೆಯೇ ಭಾರತದ ಪುರೋಹಿತಶಾಹಿಗಳೂ ಜ್ಞಾನದ ಬೆಳವಣಿಗೆಯ ಕೊಲೆಗಡುಕತನಕ್ಕೆ ಕಡಿಮೆ ನಿಸ್ಸೀಮರಾಗಿದ್ದಿರಲಿಲ್ಲ.

ಏನೇ ಇರಲಿ, ಗಣಿತಕ್ಕೆ ಪ್ರಾಚೀನ ಭಾರತದ ಕೊಡುಗೆಯನ್ನು ಶುಲ್ವ, ಸೂತ್ರಗಳಿಂದ ಹಿಡಿದು, ಆರ್ಯಭಟ, ವರಾಹಮಿಹಿರ, ಬ್ರಹ್ಮಗುಪ್ತ, ಭಾಸ್ಕರಚಾರ್ಯ ಮೊದಲಾದವರ ಗ್ರಂಥಗಳಲ್ಲಿ ಕಾಣಬಹುದು.

ಇದನ್ನೆಲ್ಲಾ ಬಿಟ್ಟು ಈ 'ವೇದ ಗಣಿತ' ಎಂದು ಯು.ಜಿ.ಸಿ ಭಾರತದ ಮಹೋನ್ನತ ಶಿಕ್ಷಣ ಪ್ರಾಧಿಕಾರ ಕರೆಯುವುದು ಯಾವುದನ್ನು? ಯಾವುದನ್ನು ಅದು ವಿಶ್ವವಿದ್ಯಾಲಯಗಳಲ್ಲಿ ಕಲಿಸಲು ಆದೇಶಿಸುತ್ತದೆ?

ಸಂಬಂಧವೇ ಇಲ್ಲ... ಇದು ಮೋಸ

ಸತ್ಯ ಸಂಗತಿಯೆಂದರೆ ವೇದಗಣಿತಕ್ಕೂ ವೇದಕ್ಕೂ ಯಾವುದೇ ಸಂಬಂಧ ಇಲ್ಲ. ಅದರ ಸಂಬಂಧ ಭಾರತೀಯ ಗಣಿತ ಪರಂಪರೆಯೊಂದಿಗಂತೂ ಖಂಡಿತವಾಗಿಯೂ ಇಲ್ಲ.

ಈ vedic mathematics ಎಂದು ಕರೆಯಲ್ಪಡುವ ಸಿದ್ದಾಂತ ಒಂದು ಮೋಸದ ಸಿದ್ಧಾಂತ. ವೇದದಲ್ಲಿ ಯಾವ mathematics ಕೂಡಾ ಇಲ್ಲ. ನಾಲ್ಕು ವೇದಗಳು, ಅವುಗಳ ಶಾಖೆಗಳು ಹಾಗೂ ಅವುಗಳ ಮೇಲಿನ ವ್ಯಾಖ್ಯಾನಗಳು ಇಂದು ಸಾಕಷ್ಟು ಸಂಶೋಧಿಸಲ್ಪಟ್ಟು ಸುಸ್ಪಷ್ಟವಾಗಿ ಉಪಲಬ್ಧವಿದೆ. ಅವುಗಳಲ್ಲೆಲ್ಲೂ ಇರದ ಈ 'ಗಣಿತ' ಇದೆಯೆಂದು ಯು.ಜಿ.ಸಿ ಸಾಧಿಸುತ್ತಿರುವುದು ಹೇಗೆ? ವೇದಗಣಿತದ ಹೆಸರಿನಲ್ಲಿ ಇಂದು ಅದು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದೆ. ಆದರೆ ಈ "ವೇದ ಗಣಿತ" ವೆಂಬ ಮಹಾನ್ ಸೌಧ ನಿಂತಿರುವುದು ಒಂದು ಭಯಾನಕ ಸುಳ್ಳಿನ ಮೇಲೆ!

ಈ "ವೇದಗಣಿತ" ಸಿದ್ಧಾಂತದ ಮೂಲಜನಕ ಜಗದ್ಗುರು ಸ್ವಾಮಿ ಶ್ರೀ ಭಾರತೀ ಕೃಷ್ಣ ತೀರ್ಥಜೀ ಮಹಾರಾಜ್, ಇವರು ಪುರಿಯ ಗೋವರ್ಧನ ಮಠದ ಶಂಕರಾಚಾರ್ಯರಾಗಿದ್ದರು. 1925ರಿಂದ (ಅವರು ಪೀಠಾರೋಹನ ಮಾಡಿದ ಕಾಲ) ಅವರ ಸಾವಿನ (1960)ತನಕ ಈ ವೇದಗಣಿತದ ಹೆಸರಿನಲ್ಲಿ ಆ ಸ್ವಾಮೀಜಿ ಅಲ್ಲಲ್ಲಿ black board demonstrationsಗಳನ್ನು ಕೊಡುತ್ತಿದ್ದರು. ಅವರು ಬರೆದ ಪುಸ್ತಕ 1965 ರಲ್ಲಿ ಪ್ರಕಟವಾಯಿತು. ಅದರ General Editor: Dr.A.S. ಅಗರ್‌ವಾಲ್, ಪುಸ್ತಕದ ಕುರಿತು ಮುನ್ನುಡಿ ಬರೆದವರು ಮಂಜುಳಾ ತ್ರಿವೇದಿ. ಈರ್ವರೂ ಈ ಸ್ವಾಮೀಜಿಯ ಪರಮಭಕ್ತರು.

ಆನಂತರದ ಕಾಲಾವಧಿಯಲ್ಲಿ ಆ ಪುಸ್ತಕ ವೇದಮೂಲದ್ದೆಂದೂ, ಅಥರ್ವವೇದದ ಪರಿಶಿಷ್ಟಕ್ಕೆ ಸೇರಿದುದೆಂದೂ ಅದ್ಭುತ ಪ್ರಚಾರವನ್ನು ಪಡೆಯುತ್ತಾ ಬಂತು. ಗೋಬೆಲ್ಸ್‌ನ ಸುಳ್ಳಿನ ಸಿದ್ಧಾಂತದಂತೆ ಸುಳ್ಳು ಸತ್ಯದ ರೂಪವನ್ನು ಪಡೆಯಿತು. ಸ್ಥಾಪಿತ ಹಿತಾಸಕ್ತಿಗಳಾದ ಕೋಮುವಾದಿಗಳು ಈ ವಿಚಾರದಲ್ಲಿ ಸಾಕಷ್ಟು ಪ್ರಚಾರಾಂದೋಲನ ನಡೆಸಿದರು. ಎನ್.ಡಿ.ಎ. ಸರ್ಕಾರವಂತೂ ಇದರ ಮೇಲೆ ಕೋಟ್ಯಾಂತರ ರೂಪಾಯಿ ವ್ಯಯಿಸಿತು. ವೇದಗಣಿತದ ಹೆಸರನಲ್ಲಿ ಹಲವಾರು ಪುಸ್ತಕಗಳು ಪ್ರಕಟವಾಗಿವೆ. ಕೆಲವರಿಗೆ ph.d.ಗಳೂ ಬಂದಿವೆ. ಉತ್ತರಪ್ರದೇಶ, ಗುಜರಾತ್ ಸರ್ಕಾರಗಳು ಈ ಗಣಿತವನ್ನು ತಮ್ಮ text book ಗಳಲ್ಲಿ ಸೇರಿಸಿದ್ದಾರೆ. ಈ ಸಂಗತಿಗಳೆಲ್ಲಾ ವೇದದ್ದೇ ಎಂದು ಸಾರಲಾಗಿದೆ.

ಸ್ವಾಮೀಜಿ ಜೀವಂತವಿರುವಾಗಲೇ ಅಂದರೆ 1950ರಲ್ಲಿಯೇ ಈ ದೇಶದ ಸುಪ್ರಸಿದ್ಧ ಗಣಿತಜ್ಞ, ಕೆ.ಎಸ್.ಶುಕ್ಲರವರು ಈ ಕುರಿತು ಸಂಶಯಗ್ರಸ್ಥರಾಗಿ ಸ್ವಾಮೀಜಿಯವರನ್ನು ಭೆಟ್ಟಿಯಾಗಿದ್ದರು. vedic mathematics ನ board demonstration ಕೊಡುತ್ತಿರುವಾಗಲೇ ಅವರು ಹೀಗೆಂದು ಪ್ರಶ್ನಿಸಿದರು "ಸ್ವಾಮೀಜಿ, ನೀವು ಅಥರ್ವವೇದದ ಪರಿಶಿಷ್ಟವೆಂದು ಹೇಳುವ ಆ ಮೂಲ ಶ್ಲೋಕಗಳನ್ನು ದಯವಿಟ್ಟು ಉದ್ಧರಿಸಿ ಹೇಳುವಿರಾ?" ಅದಕ್ಕೆ ಸ್ವಾಮೀಜಿ ಈಗ

ಪುಟ 14ಕ್ಕೆ



ಮಳೆ ನೀರಿಗೂ ಮತ್ತು ಜನತೆಯ ನಾಶಕ್ಕೂ ಮೋಡ ಬಿತ್ತನೆಯ ಅಸ್ತ್ರ!

ದೇಶದೆಲ್ಲೆಡೆ ಬರದ ಕರಾಳ ಛಾಯೆ ಎದ್ದು ಕಾಣುತ್ತಿದೆ. ನಿರೀಕ್ಷಿತ ಮಟ್ಟದಲ್ಲಿ ಮುಂಗಾರು ಬಾರದ್ದರಿಂದ ಕರ್ನಾಟಕದ ಬಹುತೇಕ ಎಲ್ಲ ಜಿಲ್ಲೆಗಳ ರೈತರು ಮಳೆಕುಸಿತದಿಂದ ತತ್ತರಿಸಿದ್ದರೆ, ಮಹಾರಾಷ್ಟ್ರದಲ್ಲಿ ಸುಮಾರು 15 ರಷ್ಟು ಜಿಲ್ಲೆಗಳಲ್ಲಿ ಶೇ. 50ಕ್ಕಿಂತ ಕಡಿಮೆ ಮಳೆ ಬಿದ್ದಿದೆ. ಇದರ ಹಿಂದೆಯೇ ಹಲವಾರು ರಾಜ್ಯಗಳು ಕೃತಕ ಮಳೆ ಬರಿಸಲು ಮೋಡ ಬಿತ್ತನೆ ಪ್ರಕ್ರಿಯೆ ಆರಂಭಿಸಿವೆ. ಕೆಲವು ಅಮೇರಿಕಾ ಮೂಲದ ಕಂಪನಿಗಳಿಗೆ ಇಂಥಹ ಮೋಡ ಬಿತ್ತನೆ ಕಾರ್ಯವನ್ನು ವಹಿಸಿವೆ.

ಮೋಡ ಬಿತ್ತನೆ:

ಮೋಡ ಬಿತ್ತನೆ ಎಂದರೆ ಹವಾಮಾನ ಬದಲಾವಣೆ ಮುಖಾಂತರ ಸಾಮಾನ್ಯವಾಗಿ ಮೋಡದಿಂದ ಬೀಳುವ ಮಳೆಯ ಪ್ರಮಾಣವನ್ನು ಬದಲಾಯಿಸುವುದು. ಇದಕ್ಕಾಗಿ ಮೋಡಗಳನ್ನು ಮಳೆಹನಿಯಾಗಿ ಬದಲಾಯಿಸುವ ರಾಸಾಯನಿಕಗಳನ್ನು ಮೋಡವಿರುವ ಆಗಸದಲ್ಲಿ ಸಿಂಪಡಿಸಲಾಗುತ್ತದೆ. ಸಾಮಾನ್ಯವಾಗಿ ಉಪಯೋಗಿಸುವ ರಾಸಾಯನಿಕಗಳೆಂದರೆ: ಸಿಲ್ವರ್ ಅಯೊಡೈಡ್ ಮತ್ತು ಘನ ಮಂಜುಗಡ್ಡೆ (ಇದನ್ನು ಶೀತಲೀಕರಿಸಿದ ಇಂಗಾಲದ ಡೈಆಕ್ಸೈಡ್ ಎಂತಲೂ ಕರೆಯುತ್ತಾರೆ).

ಮೋಡ ಬಿತ್ತನೆ ಮಾಡಬೇಕಾದರೆ ಮೋಡದಲ್ಲಿ ಅತ್ಯಂತ ತಂಪಾಗಿರುವ ಅಂದರೆ ಸೊನ್ನೆ ಡಿಗ್ರಿ ಸೆಲ್ಸಿಯಸ್‌ಗಿಂತಲೂ ಕಡಿಮೆ ಉಷ್ಣಾಂಶವಿರುವ ನೀರು ಅವಶ್ಯವಿರುತ್ತದೆ. ಅಂಥಹ ಮೋಡಗಳಲ್ಲಿ ಮೋಡ ಬಿತ್ತನೆಗೆ ಸಹಕಾರಿಯಾಗುವ ರಾಸಾಯನಿಕ ಸಿಲ್ವರ್ ಅಯೊಡೈಡ್ ನ್ನು ಬಳಸಿದಾಗ ಅದು ಸುತ್ತಲಿನ ಮೋಡವನ್ನು ಶೀತಲೀಕರಣಗೊಳಿಸುತ್ತದೆ. ಸಿಲ್ವರ್ ಅಯೊಡೈಡ್‌ನ ರಾಸಾಯನಿಕ ಆಕೃತಿಯು ಮಂಜುಗಡ್ಡೆಯನ್ನೇ ಹೋಲುತ್ತದೆ. ಆದರೆ ಘನ ಮಂಜುಗಡ್ಡೆ ಅಥವಾ ಪ್ರೊಪೇನ್ ಅನಿಲವನ್ನು ಬಳಸಿದಾಗ ಅದು ತನ್ನ ಗಾತ್ರವನ್ನು ವಿಸ್ತರಿಸುತ್ತಾ ಸುತ್ತಲಿನ ಗಾಳಿ ತಂಪಾಗತೊಡಗಿ ಅನಿಲ ರೂಪದಿಂದ ಮಂಜಿನ ಕಣಗಳು ಬೇರ್ಪಡೆಗೊಂಡು ನೀರಿನ ಹನಿಯಾಗಿ ಬೀಳಲಾರಂಭಿಸುತ್ತವೆ. ಇಲ್ಲಿ ಮೋಡಗಳಲ್ಲಿ ಅತ್ಯಂತ ತಂಪಾಗಿರುವ ಅಂದರೆ ಸೊನ್ನೆ ಡಿಗ್ರಿ ಸೆಲ್ಸಿಯಸ್‌ಗಿಂತಲೂ ಕಡಿಮೆ ಉಷ್ಣಾಂಶವಿರುವ ನೀರು ಅವಶ್ಯವಿರುವುದಿಲ್ಲ.

ಮೋಡ ಬಿತ್ತನೆ ರಾಸಾಯನಿಕಗಳನ್ನು ಸಿಂಪಡಿಸಲು ಆಗಸದಲ್ಲಿ ವಿಮಾನಗಳನ್ನು, ನೆಲಮಟ್ಟದಲ್ಲಾದರೆ ಜನರೇಟರ್‌ಗಳನ್ನು ಉಪಯೋಗಿಸಲಾಗುತ್ತದೆ. ಮೋಡ ಬಿತ್ತನೆಯನ್ನು ಮಳೆ ಬರಿಸಲು, ವಿಮಾನ ನಿಲ್ದಾಣದಲ್ಲಿ ಮಂಜಿನ ದಟ್ಟಣೆಯನ್ನು ಕರಗಿಸಲು, ಆಲಿಕಲ್ಲುಗಳ ಪ್ರಮಾಣವನ್ನು ಕಡಿಮೆ ಮಾಡಲು, ಇತ್ಯಾದಿಗಾಗಿ ಬಳಸಲಾಗುತ್ತಿದೆ. ರಷ್ಯಾದಲ್ಲಿ ಚೆರ್ನೋಬಿಲ್ ಅಣುಸ್ಥಾವರ ದುರಂತ ಸಂಭವಿಸಿದಾಗ ಅಪಾಯಕಾರಿ ವಿಕಿರಣ ವಸ್ತುಗಳು ಗಾಳಿಯ ಮುಖಾಂತರ ಇತರೆ ಭೂಭಾಗಗಳಿಗೆ ಹರಡುವುದನ್ನು ತಪ್ಪಿಸಲು ಕೃತಕ ಮಳೆ ಸುರಿಸಲಾಯಿತು.

ಮೋಡ ಬಿತ್ತನೆಯ ಆವಿಷ್ಕಾರ:

ವಿನ್ಸೆಂಟ್ ಷಾಫರ್ ಎಂಬ ತಜ್ಞ ಮೊದಲ ಬಾರಿಗೆ 1946ರಲ್ಲಿ ಮೋಡ ಬಿತ್ತನೆ ಪ್ರಯೋಗ ನಡೆಸಿ ಯಶಸ್ವಿಯಾದ. ಮೋಡ ಬಿತ್ತನೆಯಿಂದ ಉಂಟಾಗುವ ಮಳೆಯ ಪ್ರಮಾಣ ಮತ್ತು ಬಿತ್ತನೆ ಮಾಡದಿರುವ ಪ್ರದೇಶದಲ್ಲಿ ಉಂಟಾಗುವ ಮಳೆಯ ಪ್ರಮಾಣಗಳ ನಡುವಿನ ವ್ಯತ್ಯಾಸವನ್ನು ಇನ್ನು ಸ್ಪಷ್ಟವಾಗಿ ತಿಳಿಯಲಾಗಿಲ್ಲ. ಇದರಿಂದಾಗಿ ದೀರ್ಘಕಾಲೀನದಲ್ಲಿ ಮೋಡ ಬಿತ್ತನೆ ಒಟ್ಟಾರೆ ಎಷ್ಟರ ಮಟ್ಟಿಗೆ ಯಶಸ್ಸನ್ನು ಹೊಂದಿದೆ ಎಂಬುದು ಅಸ್ಪಷ್ಟವಾಗಿದೆ ಮತ್ತು ಇದಕ್ಕಾಗಿ ಹೆಚ್ಚಿನ ಅಧ್ಯಯನ ನಡೆಸಬೇಕಾಗಿದೆ.



ನೈಜ ಪರಿಹಾರವೇ?

ಕೆರೆಗಳ ಹೂಳೆತ್ತಿಸಿ ಅಂತರ್ಜಲ ಸಂಗ್ರಹಣೆ, ಅರಣ್ಯ ನಾಶ ತಡೆದು ಯೋಜನಾಬದ್ಧ ಭೂಬಳಕೆ, ನೀರಾವರಿ ಯೋಜನೆಗಳು ಮತ್ತು ಕಾಲುವೆಗಳ ವಿಸ್ತರಣೆ, ನದಿ ನೀರು ಸಂಪನ್ಮೂಲಗಳ ಸಮರ್ಪಕ ಬಳಕೆ, ಪರಿಸರ ಸಂರಕ್ಷಣೆ, ಇತ್ಯಾದಿಯಂತಹ ದೀರ್ಘಕಾಲದಲ್ಲಿ ಲಾಭ ನೀಡುವ ಕ್ರಮಗಳ ಮುಖೇನಾ ಹವಾಮಾನ ವೈಪರೀತ್ಯಗಳನ್ನು ತಡೆಗಟ್ಟುವುದು ಸರ್ಕಾರಗಳ ನೈಜ ಜವಾಬ್ದಾರಿಯಾಗಬೇಕೇ ಹೊರತು, ಜನತೆ ಸಂಕಷ್ಟದಲ್ಲಿರುವಾಗ ಆಳುವ ನಾಯಕರು ಸಹಜವಾಗಿ ಮೊಸಳೆ ಕಣ್ಣೀರು ಸುರಿಸುವಂತೆ, ಮಳೆ ಬಾರದ್ದಾಗ ಕೃತಕ ಮಳೆ ಸುರಿಸುವ ಕ್ರಮಗಳು ಅಲ್ಪಕಾಲೀನ ಪರಿಹಾರಗಳಷ್ಟೆ.

ಅಮೇರಿಕಾದ ಸಾಮ್ರಾಜ್ಯಶಾಹಿಯ ಆಪರೇಷನ್ ಪಾಪ್ ಐ:

ವಿಯೆಟ್ನಾಂ ಮೇಲೆ ಯುದ್ಧ ನಡೆಸುತ್ತಿದ್ದ ಅಮೇರಿಕಾದ ಸಾಮ್ರಾಜ್ಯಶಾಹಿಯು 1967 ರಿಂದ 1972ರವರೆಗೆ ವಿಯೆಟ್ನಾಂ ಮೇಲೆ ಮೋಡ ಬಿತ್ತನೆ ಕಾರ್ಯ ನಡೆಸಿತು. ಅಮೇರಿಕಾದ ಈ ಮಿಲಿಟರಿ ಯೋಜನೆಗೆ ಆಪರೇಷನ್ ಪಾಪ್ ಐ ಎಂದು ಹೆಸರು.

ಉತ್ತರ ಮತ್ತು ದಕ್ಷಿಣ ವಿಯೆಟ್ನಾಂ ಪ್ರದೇಶಗಳನ್ನು ಸಂಪರ್ಕಿಸುವ 'ಹೋ ಚಿ ಮಿನ್ ಹಾದಿ' ಎಂಬ ಆಯ್ದ ಪ್ರದೇಶಗಳ ಮೇಲೆ ಮೋಡ ಬಿತ್ತನೆ ನಡೆಸಿ ಮುಂಗಾರು ಮಳೆಗಾಲದ ಕಾಲಾವಧಿಯನ್ನು ಸುಮಾರು 30 ರಿಂದ 45ದಿನಗಳ ಕಾಲ ವಿಸ್ತರಿಸುವಲ್ಲಿ ಕೆಲಮಟ್ಟಿಗೆ



ಯಶಸ್ವಿಯಾಯಿತು. 'ಹೋ ಚಿ ಮಿನ್ ಹಾದಿ' ಪ್ರದೇಶವು ಸಣ್ಣ ಕಾಲ್ದಾರಿಯಿಂದ ಕೂಡಿದ ಬೆಟ್ಟ, ಗುಡ್ಡ, ಅರಣ್ಯ ಪ್ರದೇಶಗಳನ್ನು ಒಳಗೊಂಡಿರುವಂತದ್ದು. ಅಂತಹ ಪ್ರದೇಶದ ಮೇಲೆ ಮಳೆ ಸುರಿಸಿದಲ್ಲಿ ರಸ್ತೆಗಳು ಮುಚ್ಚಿಹೋಗಿ, ಹಾದಿಗಳು ಕುಸಿತಗೊಂಡು, ನದಿಗಳು ತುಂಬಿ ಹರಿದು ವಿಯೆಟ್ನಾಂ ಸೇನೆ ಅಮೇರಿಕಾದ ಸೇನಾ ನೆಲೆಯ ಮೇಲೆ ಆಕ್ರಮಣ ನಡೆಸುವುದು ಕುಂಠಿತಗೊಳ್ಳಲಿ ಎಂಬುದು ದೊಡ್ಡಣ್ಣನ ತರ್ಕವಾಗಿತ್ತು. ಆದರೆ ಅಂತಿಮವಾಗಿ ದೊಣ್ಣೆ, ಕತ್ತಿ, ಕುಡುಗೋಲು, ಸುತ್ತಿಗೆ, ಗುರಾಣಿ ಹಿಡಿದ ವಿಯೆಟ್ನಾಮಿನ ರೈತರು ಮತ್ತು ದುಡಿಯುವ ಜನ ಕ್ರಾಂತಿಕಾರಿ ಪಕ್ಷದ ನಾಯಕತ್ವದಲ್ಲಿ ವಿಶ್ವದ ಬಲಾಢ್ಯವಾದ ಆಧುನಿಕ ಸೇನೆಯೊಂದನ್ನು ಮಣ್ಣು ಮುಕ್ಕಿಸಿದ್ದನ್ನು ವಿಶ್ವವೇ ನೋಡಿ ಬೆಕ್ಕಸ ಬೆರಗಾಗಿದ್ದು ಬೇರೆ ಮಾತು. ○

ಕವನ

ಎಣಿಸುತ್ತಿದ್ದೇನೆ ನಾನು

ನಾನು ಸಣ್ಣವನಿದ್ದಾಗ
ಎಣಿಸುತ್ತಿದ್ದೆ
ಕೋಳಿ ಇಟ್ಟ ಮೊಟ್ಟೆಗಳನ್ನು
ಅವ್ವ ಸುಟ್ಟ ರೊಟ್ಟಿಗಳನ್ನು
ಅಪ್ಪ ಹಿಡಿದು ತಂದ ಮೀನುಗಳನ್ನು
ಜೇಬು ತುಂಬಿದ
ಗೋಲಿ ಗುಂಡುಗಳನ್ನು
ಅಜ್ಜಿ ಹೇಳಿದ ಕಥೆಗಳನ್ನು

ಎಣಿಸುತ್ತಿದ್ದೆ ನಾನು
ಬೆಳ್ಳಕ್ಕಿ ಸಾಲುಗಳನ್ನು
ಗುಬ್ಬಿಯ ಗೂಡುಗಳನ್ನು
ಹಸಿರು ಗಿಡದಲ್ಲಿ ಅರಳಿದ
ಬಿಳಿ ಹೂಗಳನ್ನು
ರಂಗವಲ್ಲಿಯ ಚುಕ್ಕಿಗಳನ್ನು

ಎಣಿಸುತ್ತಿದ್ದೆ ನಾನು
ಮಿನುಗುವ ನಕ್ಷತ್ರಗಳನ್ನು
ಕಾಮನ ಬಿಲ್ಲಿನ ಬಣ್ಣಗಳನ್ನು
ಬೆಳದಿಂಗಳ ರಾತ್ರಿಗಳನ್ನು
ಗಡಿಯಾರದ ಮುಳ್ಳುಗಳನ್ನು

ಈಗ
ಬೆಳೆದು ನಿಂತಿದ್ದೇನೆ
ಈಗಲೂ ಎಣಿಸುತ್ತಿದ್ದೇನೆ ನಾನು
ಸಿಡಿದ ಬಾಂಬಿನ ಸದ್ದುಗಳನ್ನು
ಚೂರು, ಚೂರಾದ
ಕೈ, ಕಾಲು, ತಲೆ ಬುರುಡೆಗಳನ್ನು
ಕಣ್ಣು ಗುಡ್ಡೆಗಳನ್ನು
ರಕ್ತದ ಹನಿಗಳನ್ನು
ನನ್ನೆದೆಯ ಬಡಿತಗಳನ್ನು

ಎಣಿಸುತ್ತಿದ್ದೇನೆ
ಕೆಡವಿದ ಗೋಪುರಗಳನ್ನು
ಮನುಷ್ಯನ ನಡುವೆ
ಎದ್ದು ನಿಂತಿರುವ ಅಡ್ಡಗೋಡೆಗಳನ್ನು
ಸುಟ್ಟು ಬೂದಿಯಾದ
ಬಡವರ ಗುಡಿಸಲುಗಳನ್ನು

ಎಣಿಸುತ್ತಿದ್ದೇನೆ ನಾನು
ನೇಣುಗಂಬಗಳಲ್ಲಿ ನೇತಾಡುತ್ತಿರುವ
ಅನ್ನದಾತನ ಹೆಣದ ಸಾಲುಗಳನ್ನು
ಬೀಜ, ಗೊಬ್ಬರಕ್ಕಾಗಿ ನಡೆದ
ಬೀದಿಯ ಮೆರವಣಿಗೆಗಳನ್ನು
ಪೋಲೀಸರ ಲಾಠಿ ಏಟುಗಳನ್ನು
ಎದೆ ಸೀಳಿದ ಗುಂಡುಗಳನ್ನು

ಎಣಿಸುತ್ತಿದ್ದೇನೆ
ಗುಳೆ ಹೊಂಟವರ
ಗಂಟು ಮೂಟೆಗಳನ್ನು
ಖಾಲಿ ಕಣ್ಣುಗಳನ್ನು
ನಡೆದ ಬರಿಗಾಲಿನ
ಹೆಜ್ಜೆ ಗುತುರುಗಳನ್ನು

\- ಹುಲಿಕಟ್ಟಿ ಚನ್ನಬಸಪ್ಪ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH